ಗೌ
ರಿ

ರಂಜನೆ ಬೋಧನೆ ಪ್ರಬೋಧನೆ

ಲಂಕೇಶ್

ನವೆಂಬರ್ 06, 2013 ಪುಟ 20 ರೂ. 14/-


ಸಂದರ್ಶನ
ಗಾಯಕಿ
ಶಮೀತಾ
ಮಲ್ನಾಡ್

ಧರ್ಮಸ್ಥಳ





ನ್ಯಾಯದ ನಾಡಲ್ಲಿ ಅನ್ಯಾಯ



ರಾಜ್ ಕುಟುಂಬಕ್ಕೆ
ಅಂಟಿಕೊಂಡಿರುವ
ಕಪಾಲಿ ಮೋಹನ್




ಏನಿದು
ರಕ್ತಚಂದನ
ಸ್ಮಗ್ಲಿಂಗ್




ಮಂಡ್ಯ
ಕ್ರಿಕೆಟ್ ಬೆಟ್ಟಿಂಗ್
ದಂಧೆಕೋರರು

ಏಕವಚನದ ಠೇಂಕಾರ–ಮೇಲ್ಜಾತಿ ದುರಹಂಕಾರ

ಯಡಿಯೂರಪ್ಪ ನಾಲಿಗೆ
ಬಿಗಿ ಹಿಡಿಯಪ್ಪ





• ಪಾರ್ವತೀಶ
bparvateesha@gmail.com

ಬಿಡಿ ಚಿತ್ರಗಳು

ಸಂಪಾದಕ

‘ಅವೇಳೆಯ ಆತ್ಮಸಂಗಾಟಕೆ ಯಾರ ನಂಟು?”

‘ಲಂಕೇಶ್’ನಲ್ಲಿ ಚಾರ್ವಾಕ ಅಂಕಣ ಬರೆಯುತ್ತಿದ್ದ ಶಿವಸುಂದರ್ ನಮ್ಮ ಬಹುತೇಕ ಓದುಗರಿಗೆ ಪರಿಚಿತರೆ. ಪತ್ರಿಕೆಯ ತೂಕ ಹೆಚ್ಚಿಸುವಂತಿದ್ದ ಅವರ ಕಾಲಂ ಪಾಪ್ಯುಲರ್ ಆಗಿದ್ದಾಗಲೇ ಶಿವಸುಂದರ್ “ನಾನು ಬರೆದದ್ದು ಸಾಕೆನಿಸುತ್ತಿದೆ” ಅನ್ನತೊಡಗಿದರು.

ನಾವು “ಇಲ್ಲ, ನಿಮ್ಮ ಕಾಲಂ ಮುಂದುವರೆಯಲಿ” ಅಂತ ಹಠ ಮಾಡಿದಾಗ ಶಿವಸುಂದರ್ ಕೈಗೆ ಸಿಗದಂತೆ ತಪ್ಪಿಸಿಕೊಂಡರು. ಅಷ್ಟರಲ್ಲಾಗಲೇ ಅವರ ಅಂಕಣ ಬರಹಗಳನ್ನೆಲ್ಲಾ ಒಗ್ಗೂಡಿಸಿ ‘ಚಾರ್ವಾಕ’ ಹೆಸರಿನಲ್ಲೇ ಒಂದು ಪುಸ್ತಕ ಪ್ರಕಟಿಸಿದ್ದೆವು. ‘ಆ ಪುಸ್ತಕ ಪ್ರಕಟಣೆಯೂ ಬೇಡ’ ಅಂದಿದ್ದ ಶಿವಸುಂದರ್ “ಇದರ ಮೇಲೆ ನಿಮ್ಮಿಷ್ಟ, ಪುಸ್ತಕ ಇಪ್ಪತ್ಮೂರು ಪ್ರತಿಯೂ ಖರ್ಚಾಗುವುದಿಲ್ಲ” ಎಂದು ನಮ್ಮನ್ನು ಹೆದರಿಸಲು ನೋಡಿದ್ದರು.

ನಾವದನ್ನು ಲೆಕ್ಕಿಸದೆ ಪ್ರಕಟಿಸಿದೆವು. ಆದಾದ ಒಂದು ವರ್ಷದಲ್ಲೇ ಚಾರ್ವಾಕ ಈಗ 2ನೇ ಮುದ್ರಣ ಕಂಡಿದೆ. ‘ನಾನಿನ್ನು ಬರೆಯಲಾರೆ’ ಎಂದಿದ್ದ ಶಿವಸುಂದರ್ ಈ ನಡುವೆ ‘ನಾನಿನ್ನು ಭಾಷಣ ಮಾಡಲಾರೆ’ ಅಂತಲೂ ಹೇಳತೊಡಗಿದರು. ಇದುವರೆಗಿನ ತಮ್ಮಿಡೀ ಜೀವನವನ್ನು ಒಬ್ಬ activist ಆಗಿ ಕಳೆದಿರುವ ಶಿವಸುಂದರ್ ಹೀಗೆ ಏಕಾಏಕಿ ‘ಬರೆಯಲ್ಲ, ಮಾತಾಡಲ್ಲ’ ಅನ್ನತೊಡಗಿದ್ದು ನಮ್ಮ ಒಡನಾಡಿಗಳ ಬಳಗದಲ್ಲಿ ಕೊಂಚ ಶಾಕ್, ಬೇಸರಕ್ಕೆ ಕಾರಣವಾಯಿತು. ರಾಜಕೀಯ, ಆರ್ಥಿಕತೆ, ಕಲೆ, ಸಾಹಿತ್ಯಗಳ ವಿಚಾರದಲ್ಲಿ ಖಂಡಿತ ಅಭಿಪ್ರಾಯ, ವಿಶ್ಲೇಷಣೆಗಳನ್ನು ಸೊಗಸಾಗಿ ನಿರೂಪಿಸುವ ಶಿವಸುಂದರ್ ಹೀಗೆ ಸಡನ್ನಾಗಿ ಕೆಲಕಾಲ ಸುಮ್ಮನಿರುತ್ತೇನೆಂಬ ನಿಲುವು ತಾಳಿದ್ದು ನಮಗೆಲ್ಲಾ ಆಶ್ಚರ್ಯವೆನಿಸಿತ್ತು.

ಬುದ್ಧಿಜೀವಿ, ಬರಹಗಾರರಲ್ಲದೆ ಸಾವಿರಾರು ಸಂಖ್ಯೆಯಲ್ಲಿ ಕಾಣಸಿಗುತ್ತಿರುವ ವಿಚಾರದಾಹದ ಯುವ ಜನರನ್ನು ಸಂಭಾಳಿಸಬಲ್ಲ ಶಿವಸುಂದರ್ “ನನಗೆ ಗೊತ್ತಿರುವುದು ಕಡಿಮೆ” ಎಂದಾಗ ಈಗಾಗಲೇ ಅವರಿಗಿಂತ ಕಡಿಮೆ ಗೊತ್ತಿರುವ ನಾವುಗಳು ಎಲ್ಲಿ ತಲೆ ಮರೆಸಿಕೊಳ್ಳೋದು ಅಂತ ತಮಾಷೆ ಮಾಡಿಕೊಳ್ಳಬೇಕು ತಾನೆ?

ಆ ಜಗಳ ನಂತರ ಇನ್ನೊಂದು ರೀತಿ ಮುಂದುವರೆಯಿತು. ಶಿವಸುಂದರ್ ಬರೆದಿರುವ ಕವನಗಳ ಒಂದು ಸಂಕಲನ ಪ್ರಕಟಿಸೋಣ ಅಂತ ನಾನೊಮ್ಮೆ ಹೊರಟೆ. ಎಂದಿನಂತೆ ಶಿವು “ಅದೆಲ್ಲಾ ಬೇಡ, ಅಸಲಿಗೆ ನಾನು ಕವಿಯೇ ಅಲ್ಲ” ಅಂದರು. ಇದೊಳ್ಳೆ ಫಜೀತಿ ಆಯಿತಲ್ಲ ಅಂದುಕೊಂಡು ನಾವು ಸರಿಯಾದ ಟೈಮಿಗಾಗಿ ಕಾಯುತ್ತಿದ್ದೇವೆ... ಆ ಸಂಕಲನ ಪ್ರಕಟಿಸಲು!

“ಎಂ. ಶಿವಸುಂದರ್ ಸರಿಯಾಗಿ ಕೇಳಿಸಿಕೊಳ್ಳಿ...”

‘ಒಕ ಸಾರಿ ಕಮೀಟ್ ಐತೆ ನಾ ಮಾಟು ನೇನೇ ವಿನ್ನನು’ (ಪೋಕರಿ ಸಿನಿಮಾ ಡೈಲಾಗ್ ನೆನಪಾದರೆ ಅದು ನನ್ ತಪ್ಪಲ್ಲ)

-ಹೀಗೆ ಬರೆಯದೆ, ಮಾತನಾಡದೆ ತಪ್ಪಿಸಿಕೊಳ್ಳುತ್ತಿದ್ದ ಅವರೊಂದಿಗೆ ಒಂದು ಖಡಕ್ಕಾದ ಜಗಳವಾಡಲು ನಾವು ತಯಾರಾಗುತ್ತಿದ್ದಾಗ ಮೊನ್ನೆ ಕಚೇರಿಗೆ ಬಂದ ಶಿವಸುಂದರ್ ಒಂದು ಸ್ವರಚಿತ ಪದ್ಯ ಓದಿದರು.

ಅದು ಹೀಗಿತ್ತು.

ಪಾತ್ರ ಬದಲಿಸಿದ ಮಾತ್ರಕ್ಕೆ ಅಪಾತ್ರನೇ?

ಪರಿವೇ ಇಲ್ಲದೆ ಉರುಳುತ್ತಿದ್ದ
ಅಹಮಿನ ಬಂಡೆ
ಅಪಾಯವ ಅರಿತು ಚೂರುಚೂರಾದರೆ
ಆತ್ಮಹತ್ಯೆ ಎನ್ನಬಹುದೇ?

ಆತ್ಮರತಿಯಲ್ಲಿ ಅಬ್ಬರಿಸುತ್ತಿದ್ದ ಮೈಕು
ಲಜ್ಜೆಯಿಂದ ಮಾತು ನಿಲ್ಲಿಸಿದರೆ
ಮೌನವೆನ್ನಲಾದೀತೆ?

ಮುಂದಾಳತ್ವದ ಮಂಪರು
ಮೆರವಣಿಗೆಗೆ ಅಡ್ಡಿಯಾದಾಗ
ಪಕ್ಕಕ್ಕೆ ಸರಿಯುವುದನ್ನು
ಪಲಾಯನ ಎನ್ನಬಹುದೇ?


ತತ್ವವನ್ನು ಬಿಡದೆ
ತಂತ್ರ ಮಾತ್ರ ಬದಲಾದರೆ
ದ್ರೋಹವೆನಿಸಬಹುದೇ?

ಪಾತ್ರ ಮುಗಿದ ನಂತರ
ನೇಪಥ್ಯಕ್ಕೆ ಹಿಂತಿರುಗುವುದನ್ನು
ಹಿನ್ನಡೆ ಎಂದು ಬಣ್ಣಿಸಬಹುದೇ?

- ಸರಳವಾಗಿ ಹೇಳಬೇಕೆಂದರೆ ಇದೊಂದು ಆತ್ಮವಿಮರ್ಶೆಯ ಕವನ. ತನ್ನನ್ನು ತಾನು ವಿಮರ್ಶಿಸಿಕೊಳ್ಳುವ, ತನ್ನ ಸುತ್ತಲಿನ ಆಗುಹೋಗುಗಳಿಗೆ ಪ್ರತಿಕ್ರಿಯಿಸುವಾಗ ಸಾಮಾಜಿಕ ಹೋರಾಟಗಾರರು ಇಟ್ಟುಕೊಳ್ಳಬೇಕಾದ ಎಚ್ಚರ ಹಾಗೂ ಎನಗಿಂತಾ ಕಿರಿಯರಿಲ್ಲ ಎಂಬ ಭಾವ. ನಮ್ಮಗಳಿಗೆ ಇಂತಹ ಸನ್ನಿವೇಶಗಳನ್ನು ಎದುರಿಸಿದ, ನಿಭಾಯಿಸಿರುವ ಅನುಭವ ಕಡಿಮೆ ಎಂದೇ ಹೇಳಬಹುದು. ನಾನಿದನ್ನು ಕೆಟ್ಟ ರಾಜಕೀಯ ಪದ್ಯ ಎಂದಿದ್ದೇನೆ.

ಕಳೆದ ಶತಮಾನದ ಕೊನೆಯ ವರ್ಷಗಳಲ್ಲಿ ನಾನು ಕರ್ನಾಟಕ ವಿಮೋಚನಾ ರಂಗದ ಕಾರ್ಯಕರ್ತನಾಗಿ ಕೆಲಸ ಮಾಡುತ್ತಿದ್ದಾಗ ಇದಕ್ಕಿಂತ ಕೊಂಚ ಭಿನ್ನವಾದ ಆದರೂ ಇದೇ ತರದ ಕೆಲ ಸನ್ನಿವೇಶಗಳನ್ನು ನೋಡಿದ್ದೆ.

ಗೆಳೆಯ ಬಂಜಗೆರೆ ಜಯಪ್ರಕಾಶ್ ಆಗ ಕರ್ನಾಟಕ ವಿಮೋಚನಾ ರಂಗದ (ಕವಿರಂ) ಅಧ್ಯಕ್ಷರಾಗಿದ್ದರು. ಕರ್ನಾಟಕದ ಉದ್ದಗಲಕ್ಕೂ ಆಗ ಕವಿರಂ ಒಂದು ಬಿರುಸಾದ ಹೋರಾಟ ಕಟ್ಟುತ್ತಿತ್ತು. ಹಲವೊಮ್ಮೆ ಜಂಟಿ ಹೋರಾಟಗಳಿದ್ದಾಗ ಬೇರೆ ಸಂಘಟನೆಗಳು, ವ್ಯಕ್ತಿಗಳೂ ಬಂದು ಭಾಗಿಯಾಗುತ್ತಿದ್ದುದುಂಟು. ನಾವೆಲ್ಲಾ ಸೇರಿ ರಾತ್ರಿ ಹೊತ್ತು ವಾಲ್ ರೈಟಿಂಗ್ ಮಾಡಿ, ವಾಲ್ ಪೋಸ್ಟರ್ ಹಚ್ಚಿ, ಸಭೆಗಾಗಿ ಮೈಕು, ಕುರ್ಚಿ, ಸ್ಟೇಜ್ ಸಿದ್ಧ ಮಾಡಿ ಹೈರಾಣಾಗಿದ್ದರೂ ನಮ್ಮಗಳ ಗಮನವೆಲ್ಲಾ ಕಾರ್ಯಕ್ರಮದ ಯಶಸ್ಸಿನತ್ತಲೇ ಇರುತ್ತಿತ್ತು, ಅಂತಹ ಸಭೆಗಳಿಗೆ ಬರುತ್ತಿದ್ದ ಗಣ್ಯರು ಸಾಮಾನ್ಯ ಕಾರ್ಯಕರ್ತರ ಶ್ರಮವನ್ನು ಗಮನಿಸುತ್ತಿರಲಿಲ್ಲ, ಪತ್ರಿಕಾಗೋಷ್ಠಿಗಳಲ್ಲಿ ಮಾತನಾಡುವಾಗ, ಸರ್ಕಾರದ ಬಳಿಗೆ ನಿಯೋಗ ಹೋಗುವಾಗ ಕವಿರಂ ಅನ್ನು ಲೆಕ್ಕಕ್ಕೇ ಇಟ್ಟುಕೊಳ್ಳುತ್ತಿರಲಿಲ್ಲ, ಅಂತಹ ಸಂದರ್ಭಗಳಲ್ಲಿ ಬಂಜಗೆರೆ ತಾವಾಗಿಯೇ ಹಿಂದೆ ಸರಿದು ಬೇರೆಯವರಿಗೆ ಅವಕಾಶ ಮಾಡಿಕೊಡುತ್ತಿದ್ದುದನ್ನು ನೋಡಿ ನಮಗೆಲ್ಲಾ ನಿಜಕ್ಕೂ ಸಂಕಟವಾಗುತ್ತಿತ್ತು, ಅದು ಮಾನ್ಯತೆ ಸಿಗಬೇಕೆಂಬ ಕಾರಣಕ್ಕಲ್ಲ, ಶ್ರಮವೆಲ್ಲಾ ನಮ್ಮಗಳದ್ದೇ ಆಗಿದ್ದಾಗಲೂ, ಹೇಳಬೇಕಾದ್ದನ್ನು ಹೇಳಲು ನಮವರಿಗೆ ಅವಕಾಶ ಸಿಗಲಿಲ್ಲವಲ್ಲ ಎಂಬ ಅತೃಪ್ತಿ ಆದಾಗಿರುತ್ತಿತ್ತು, ನಮ್ಮ ಗೆಳೆಯರ ಗುಂಪಿನ ವಿನಯ ಹಾಗೂ ಸೌಜನ್ಯಗಳನ್ನು ತೋರಿಸುವಂತಿರುವ ಇದೆಲ್ಲಾ ಹಳೆಯ ಕತೆ ಬಿಡಿ:



ಈಗ ಶಿವಸುಂದರ್ ಇನ್ನೊಂದು ಸ್ತರದಲ್ಲಿ ಈ ಭಾವ ತೋರುತ್ತಿದ್ದಾರೆ. ಟಿವಿ ಚರ್ಚೆಗಳಲ್ಲಿ ಪದೇ ಪದೇ ಕಾಣಿಸಿಕೊಳ್ಳುವುದು ಅವರಿಗೇ ಮುಜುಗರ ತರಿಸಿದೆ. ಯಾವ ವಿಚಾರವನ್ನಾದರೂ ಬರೆಯಬಲ್ಲೆ, ಭಾಷಣ ಮಾಡಬಲ್ಲೆ ಎಂಬಂತಾಗುವುದು ಸರಿಯೆ? ಎಂಬ ಜಿಜ್ಞಾಸೆ ಅವರಲ್ಲಿ ಶುರುವಾಗಿ ಹಲವು ತಿಂಗಳಾಗಿರಬೇಕು. ಹಾಗಾಗಿ ಆಗಿನಿಂದಲೇ ಸ್ವಯಂ ನಿಷೇಧ ವಿಧಿಸಿಕೊಂಡಂತೆ ಕಾಣುತ್ತಿದೆ. **Too many people overvalue what then are not and undervalue what they are** ಎನ್ನುವ ಮಾತನ್ನು ನೆನೆಯುತ್ತಾ...


‘ಲಂಕೇಶ್’ ಓದುಗರಿಗೆ ಶಿವಸುಂದರ್ ಪರಿಚಯ ಇರುತ್ತಾದರೂ ಇಲ್ಲಿ ಹೇಳಬೇಕಾದ ಇನ್ನೂ ಕೆಲವು ಇಂಟರೆಸ್ಟಿಂಗ್ ವಿಚಾರಗಳಿವೆ.

ತೊಂಬತ್ತರ ದಶಕದಲ್ಲಿ ಚಿತ್ರದುರ್ಗದಲ್ಲಿ ಇಂಜಿನಿಯರಿಂಗ್ ಓದುತ್ತಿದ್ದಾಗಲೇ ರ್‍ಯಾಡಿಕಲ್ ಪಾಲಿಟಿಕ್ಸ್ ಸೆಳೆತಕ್ಕೆ ಸಿಕ್ಕು ಆಕ್ಟಿವಿಸ್ಟ್ ಆಗಿ ಇಂಡಿಯಾ ದೇಶದ ಉದ್ದಗಲಕ್ಕೂ ಓಡಾಡಿದ್ದಾರೆ. ಕರ್ನಾಟಕದಲ್ಲೂ ಅನೇಕ ಜನಪರ ಚಳವಳಿಗಳೊಂದಿಗೆ ಒಡನಾಟವಿರಿಸಿಕೊಂಡಿದ್ದಾರೆ.

ಅವರು ನಮಗೆ ನಿತ್ಯ ಸಿಗಲು ಶುರುವಾಗಿದ್ದು ಆಟೋ ಡ್ರೈವರ್ ಆದ ಮೇಲೆ!

ಬೆಂಗಳೂರಿನಲ್ಲಿ ನಾಲ್ಕು ವರ್ಷ ಆಟೋರಿಕ್ಷಾ ಡ್ರೈವರ್ ಆಗಿ ಅವರು ದುಡಿಯುತ್ತಾ ಆಕ್ಟಿವಿಸಂ, ಬರಹ-ಭಾಷಣಗಳಲ್ಲೂ ಇರುತ್ತಾ ಕೊನೆಗೊಮ್ಮೆ ರಿಕ್ಷಾ ಹೋಗಿ ಅವರ ಕೈಗೆ ಸೈಕಲ್ ಬಂತು.

ಅವರನ್ನು ಸೈಕಲ್‌ನಿಂದ ಬಿಡಿಸಲು ನಾವೊಂದಿಷ್ಟು ಗೆಳೆಯರು ಒಮ್ಮೆ ಒಂದು ಸಂಚು ಹೂಡಿದೆವು. ತಲಾ ಇಷ್ಟೆಂದು ಹಣ ಹಾಕಿ ನಲವತ್ತೈದು ಸಾವಿರ ಕೂಡಿಸಿ ಒಂದು ದಿನ ಹೊಸ ಬೈಕ್ ಒಂದನ್ನು ತಂದು ಆಫೀಸಿನಲ್ಲಿರಿಸಿ ಶಿವಸುಂದರ್‌ಗೆ ಬರ ಹೇಳಿದೆವು. ಹಾಗೆ ಬಂದವರು ಹರಟಿ, ಕಾಫಿ ಕುಡಿದಾದ ಮೇಲೆ



ನಮ್ಮಲ್ಲೊಬ್ಬರು ಬೈಕ್ ಕೀ ಅವರ ಕೈಗಿತ್ತಾಗ ಕೈಗೆ ಹಾವನ್ನೇ ಕೊಟ್ಟಂತೆ ಬೇಡ ಅಂದರು. ಕೊನೆಗೆ ನಾವು ಹಾಗೆ ಬಿಡುವವರಲ್ಲ ಅಂತ ಹೊಳೆಯಿತೇನೋ ‘ಸರಿ, ಇರಲಿ ಬಿಡಿ’ ಅಂತ ಬೈಕ್ ತೆಗೆದುಕೊಂಡು ಹೋದವರು. ನಾಲ್ಕೇ ದಿನದಲ್ಲಿ ಮತ್ತೆ ಸೈಕಲ್ ಏರಬೇಕೆ?

“ಯಾಕೆ, ಬೈಕ್ ಎಲ್ಲಿ!” ಅಂದಾಗ

“ನನಗಿಂತಾ ಜಾಸ್ತಿ ಓಡಾಡುವ ಗೆಳೆಯನಿಗೆ ಕೊಟ್ಟೆ, ಅಲ್ಲಿದ್ದರೆ ಬೈಕ್‌ನ ಉಪಯೋಗ ಜಾಸ್ತಿ” ಅಂದರು.

ನಮಗೆಲ್ಲಾ ಸ್ವಲ್ಪ ಬೇಸರ ಆಯಿತಾದರೂ ಏನೂ ಮಾಡುವಂತಿರಲಿಲ್ಲ.

ಅವರ ಪದ್ಯಕ್ಕೆ ಪ್ರತಿಕ್ರಿಯೆಯಾಗಿ ನಾನೂ ಒಂದು ಪದ್ಯ ಬರೆದಿದ್ದೇನೆ. ಶಿವಸುಂದರ್ ಕವನದ ಗಹನತೆಯನ್ನು ಹಾಗೂ ನನ್ನದರ ತೆಳು ಮಾತನ್ನೂ ‘As is, where is’ ಎಂಬಂತೆ ಪರಿಗಣಿಸಿ ಅಷ್ಟೆ.

ಪಾತ್ರಕ್ಕೊಂದು ಪಥ,
ಪಥದಲ್ಲೊಂದು ಪಾತ್ರ

ಸವಾಲುಗಳಿವೆ
ನಿಲ್ಲುವಾಗ ಬಂಡೆಯಂತೆ
ಸ್ವಯಂ ಚೂರಾಗುವ ಮಾತೇಕೆ

ಮೌನವೇ ಮಾತಾಗಬಾರದ
ಕೆಟ್ಟ ಸನ್ನಿವೇಶ
ಮೈಕೂ ಭರಿಸಲಾಗದ ಆಕ್ರೋಶ
ಬಯಸುವಾಗ, ಮಾತಿಗೆ ಲಜ್ಜೆಯೇಕೆ

ಜೊತೆಗೂಡಿ ಸಾಗಬೇಕಾದ
ಮೆರವಣಿಗೆಯದು
ಬತ್ತದ ಮೊದಲು, ಗೊತ್ತಿರದ ಕೊನೆ
ನಮಗೆ ನಾವೇಗೆ, ಅಡ್ಡಿ
ಸಾಗಬೇಕು ಪಕ್ಕಕ್ಕಲ್ಲ ಇದ ನೆನಪಿಸಬೇಕೇಕೆ

ಗೆಳೆಯರಿಗಿರಲಿ ಮುಂಚೂಣಿ
ನಾನು ನಂತರ, ಎನ್ನುವ ಅಂತರ
ಬೇಕೇಕೆ ಈ ಅತಂತರ
ಪಾತ್ರದಲ್ಲೊಂದು ಪಥ
ಪಥಕ್ಕೊಂದು ಪಾತ್ರ...
ಅಯ್ಕೆಯ ಸ್ವಯಂ ಸೂತ್ರ

ಬದುಕು ಮುಗಿವ ಘಳಿಗೆ
ಪಾತ್ರವೂ ಮುಗಿಯದೆ
ಸಾಗಬೇಕಾದ ಪಥಕ್ಕೆ
ನೇಪಥ್ಯ ಅಪಥ್ಯ
ಕಾಲ ದೇಶದ ಕರೆ
ನಾವಿಲ್ಲಿರೆ
ಆಕ್ಷನ್-ಕಟ್ ಹೇಳಿಕೊಳ್ಳುವ ಸ್ವಾತಂತ್ರ್ಯ
ಪಾತ್ರಕ್ಕೂ ಇಲ್ಲ, ಪಥಕ್ಕೂ ಇಲ್ಲ.

- **Humility does not mean thinking less of yourself than of other people, nor does it mean having a low opinion of your own gifts. It means freedom from thinking about yourself at all** - ಇಂಗ್ಲೆಂಡ್‌ನ ಕ್ಯಾಂಟರ್‌ಬರಿ ಚರ್ಚ್‌ನಲ್ಲಿ 19ನೇ ಶತಮಾನದಲ್ಲಿ ಪಾದ್ರಿಯಾಗಿದ್ದ ಚಿಂತಕ ವಿಲಿಯಂ ಟೆಂಪಲ್‌ನ ಮಾತುಗಳಿವು.

ಅನ್ವಯಿಸಿಕೊಳ್ಳುವುದಾದರೆ ನಮಗೂ ಈ ಮಾತು ಬೇಡವೇಕೆ?

‘ನಾನು’ ಎಂಬುದು ಹೋಗಿ ‘ನಾವು’ ಎಂದಾಗಬೇಕು. ‘ನನ್ನದು’ ಬಿಟ್ಟು ‘ನಮ್ಮದು’ ಬೆಳೆಯಬೇಕು ಎಂಬುದನ್ನು ಅವೇಳೆಯ ಆತ್ಮ ಸಂಗಾಟ ಅನ್ನತೊಡದು ಸರಿ,

ಆದರೂ...

ಕಾಂಗ್ರೆಸ್ ಸರ್ಕಾರದ 'ನಿಧಿ ಹುಡುಕಾಟ' ಎಂಬ ಸಮಾಜದ್ರೋಹ

ಯಾರೋ ಒಬ್ಬ ಸಾಧುವಿಗೆ ಬಿದ್ದ ಕನಸನ್ನು ನಂಬಿ ಆರ್ಕಿಆಲಾಜಿಕಲ್ ಸರ್ವೆ ಆಫ್ ಇಂಡಿಯಾ (ಎಎಸ್‌ಐ) ಸಂಸ್ಥೆ ಉತ್ತರ ಪ್ರದೇಶದ ದೌಂಡಿಯಾ ಖಿಡಾ ಎಂಬ ಪುಟ್ಟ ಕೋಟೆಯಲ್ಲಿ ಚಿನ್ನದ ನಿಧಿಗೆ ಭೂಮಿಯನ್ನು ಅಗೆಯಲಿದೆ ಎಂಬ ಸುದ್ದಿ ಓದಿದಾಗ ಇದು ನಿಜವಿರಲಿಕ್ಕೆ ಸಾಧ್ಯವಿಲ್ಲ, ಪ್ರಾಯಶಃ ಇದು 'ಎರಡು ದಿನಗಳಲ್ಲಿ 15,000 ಗುಜರಾತಿಗಳನ್ನು ರಕ್ಷಿಸಿದ 'ರ‍್ಯಾಂಬೋ' ಮೋದಿ' ತರಹದ್ದೇ ಕಪೋಲಕಲ್ಪಿತ ಸುದ್ದಿ ಇರಬೇಕೆಂದೇ ಭಾವಿಸಿದೆ. ಆದರೆ ಆದಾದ ಕೆಲವೇ ದಿನಗಳಲ್ಲಿ ಎಎಸ್‌ಐ ಆ ಪ್ರದೇಶದಲ್ಲಿ ಅಗೆಯಲು ಪ್ರಾರಂಭಿಸಿದಾಗ ನನಗೆ ಅಚ್ಚರಿ ಆಯಿತು. "ಮೌಢ್ಯಗಳ ವಿರುದ್ಧ ಹೋರಾಡಿದ ವಿಚಾರವಾದಿ ನರೇಂದ್ರ ಧಾಬೋಲ್ಕರ್ ಅವರ ಕೊಲೆ ನಮ್ಮೆಲ್ಲರ ಮನಸ್ಸಿನಲ್ಲಿ ಹಸಿಯಾಗಿರುವಾಗಲೇ ಯಾರೋ ಒಬ್ಬ ಸಾಧುವಿಗೆ ಬಿದ್ದ ನಿಧಿಯ ಕನಸ್ಸನ್ನು ನಂಬಿ ಇಂತಹ ಕೆಲಸಕ್ಕೆ ಕೇಂದ್ರ ಸರ್ಕಾರದ ಅಂಗವಾದ ಎಎಸ್‌ಐ ಮುಂದಾಗುತ್ತದೆಂದರೆ ಅದು ಎರಡನೆ ಬಾರಿಗೆ ಧಾಬೋಲ್ಕರ್ ಅವರನ್ನು ಕೊಲೆ ಮಾಡಿದ್ದಕ್ಕೆ ಸಮ. ಇದರ ಬಗ್ಗೆ ಕೇಳಿ ಜಗತ್ತಿನ ಇತರೆ ದೇಶಗಳ ಜನ ಭಾರತೀಯರನ್ನು ಅಪಹಾಸ್ಯ ಮಾಡುವುದಿಲ್ಲವೆ?" ಎಂದೆನಿಸಿತು.

ಆರ್ಕಿಅಲಾಜಿ ಎಂಬುದು ಐತಿಹಾಸಿಕ ಸಾಕ್ಷ್ಯ ಮತ್ತು ವೈಜ್ಞಾನಿಕ ಅಧ್ಯಯನ ಎಂಬ ಎರಡು ಅಂಶಗಳ ಮೇಲೆ ನಿಂತಿರುವ ಒಂದು ಶಾಸ್ತ್ರ. ಆದರೆ ಎಎಸ್‌ಐ ಅಧಿಕಾರಿಗಳಿಗೆ ಐತಿಹಾಸಿಕ ಸಾಕ್ಷ್ಯಕ್ಕಿಂತ ಪುರಾಣಗಳು, ವೈಜ್ಞಾನಿಕ ಅಧ್ಯಯನಕ್ಕಿಂತ ಆಧಾರವಿಲ್ಲದ ಕಪೋಲಕಲ್ಪಿತ ಕತೆಗಳೇ ಮುಖ್ಯ 'ಶಾಸ್ತ್ರ'ಗಳಾಗಿವೆ. ಎಎಸ್‌ಐ ಅಧಿಕಾರಿಗಳಿಗೆ ಅಕಸ್ಮಾತ್ತಾಗಿ ದೌಂಡಿಯಾ ಖಿಡಾದ ಇತಿಹಾಸ ಮುಖ್ಯವಾಗಿದ್ದರೆ, ಈ ಹಿಂದೆ ಅದೊಂದು ಪುಟ್ಟ ಪಾಳೆಪಟ್ಟ ಆಗಿತ್ತಷ್ಟೇ ಎಂಬುದೂ, ಬ್ರಿಟಿಷರ ವಿರುದ್ಧ ಹೋರಾಡಿದ್ದಕ್ಕೆ ಗಲ್ಲಿಗೇರಿದ ಈ ಪ್ರದೇಶದ ರಾಜರಾವ್ ರಾಮ್ ಬಕ್ಸ್ ಸಿಂಗ್ ಸ್ವಾತಂತ್ರ್ಯ ಸಂಗ್ರಾಮದ ವೀರ ಯೋಧನಾಗಿದ್ದರೂ ಆತನ ಬಳಿ 1,000 ಟನ್‌ನಷ್ಟು ಚಿನ್ನ ಇದ್ದಿರುವ ಸಾಧ್ಯತೆಯೇ ಇಲ್ಲ ಎಂಬುದೂ ಅರ್ಥವಾಗುತ್ತಿತ್ತು. ಆದರೆ ಸಾಧುಗೆ ಬಿದ್ದ ಕನಸನ್ನೇ ನಂಬುವ ಅಧಿಕಾರಿಗಳು ಇಂತಹ 'ಐತಿಹಾಸಿಕ' ಸೂಕ್ಷ್ಮತೆಗಳು ಅರ್ಥವಾಗುವುದಾದರೂ ಹೇಗೆ?!



ಎಎಸ್‌ಐ ಈಗ ಮಾಡುತ್ತಿರುವ ಉತ್ಖನನ ಒಂದು ಸ್ಟುಪಿಡ್ ಜೋಕ್ ಎಂಬುದು ಎಲ್ಲಾ ಪ್ರಜ್ಞಾವಂತರಿಗೂ ಅರ್ಥವಾಗಿದೆ. ಅಪಾಯ ಇರುವುದು ಎಲ್ಲಿ ಎಂದರೆ ಆ ಪ್ರದೇಶದಲ್ಲಿ ಒಂದು ಸಾವಿರ ಟನ್‌ನಷ್ಟು ಚಿನ್ನದ ನಿಧಿ ಇರಲಿ, ಒಂದು ಚಿನ್ನದ ನಾಣ್ಯ ಸಿಕ್ಕರೂ ಮೌಢ್ಯವನ್ನು, ಸಾಧುಸಂತರನ್ನು ನಂಬುವ ನಮ್ಮ ಜನರಲ್ಲಿ ಅವೈಜ್ಞಾನಿಕ ನಂಬಿಕೆಗಳು ಮತ್ತಷ್ಟು ಹೆಚ್ಚುತ್ತವೆ.

ಈ ಎಎಸ್‌ಐ ಅಧಿಕಾರಿಗಳು ಎಂತಹ ಅಜ್ಞಾನಿಗಳೆಂದರೆ ಅವರು ಕಳೆದ ಹಲವಾರು ವರ್ಷಗಳಿಂದ ಕಪೋಲಕಲ್ಪಿತ ಸರಸ್ವತಿ ನದಿಯ ಪತ್ತೆಗಾಗಿ ಅಕ್ರಮವಾಗಿ ಸಾರ್ವಜನಿಕರ ಕೋಟ್ಯಾಂತರ ರೂಪಾಯಿಗಳನ್ನು ವೆಚ್ಚ ಮಾಡಿದ್ದಾರೆ. ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ತೊಲಗಿ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಅಧಿಕಾರಕ್ಕೆ ಬಂದನಂತರ ಸರಸ್ವತಿ ನದಿಯ ಪತ್ತೆಗಾಗಿ ಹಣಕ್ಕೆ ಎಎಸ್‌ಐ ಅರ್ಜಿ ಸಲ್ಲಿಸಿತ್ತು. ಆಗ ಕೇಂದ್ರ ಸರ್ಕಾರ ಸಂಸತ್ತಿನ ಒಂದು ಸಮಿತಿಯನ್ನು ರಚಿಸಿ ಅದರ ಮುಂದೆ ಎಎಸ್‌ಐನ ಈ ಅಹವಾಲನ್ನು ಇಟ್ಟಿತ್ತು. "ಸರಸ್ವತಿ ನದಿ ಇತ್ತು ಎಂಬುದಕ್ಕೆ ಯಾವುದೇ ಐತಿಹಾಸಿಕ ಸಾಕ್ಷ್ಯ ಅಥವಾ ವೈಜ್ಞಾನಿಕ ಅಧ್ಯಯನದ ಸುಳಿವು ಇದೆಯೇ?" ಎಂಬ ಪ್ರಶ್ನೆಗೆ ಎಎಸ್‌ಐ ಅಧಿಕಾರಿಗಳು ಇಲ್ಲ ಎಂದಿದ್ದರು. ಆಗ ಆ ಸಂಸತ್ ಸಮಿತಿಯು ಸರಸ್ವತಿ ನದಿಯ ಪತ್ತೆಗೆ ಸಾರ್ವಜನಿಕರ ಹಣವನ್ನು ಪೋಲು ಮಾಡಬಾರದೆಂದು ಆದೇಶಿಸಿತ್ತು. ಆದರೇನಂತೆ, ಎಎಸ್‌ಐ ಅಧಿಕಾರಿಗಳು ಸುಮ್ಮನೆ ಕೂರಲಿಲ್ಲ. ಹಲವು ಅಧಿಕಾರಿಗಳೇ ಪತ್ರಕರ್ತರ ಮುಂದೆ ಒಪ್ಪಿಕೊಂಡಿರುವಂತೆ, ಎಎಸ್‌ಐ ವಿವಿಧ ಕಾರಣಗಳನ್ನು ನೆಪವಾಗಿ ನೀಡಿ ಸರಸ್ವತಿ ನದಿಯನ್ನು ಪತ್ತೆ ಮಾಡಲು ಯತ್ನಿಸುತ್ತಲೇ ಇದೆ!

ಎಲ್ಲರಿಗೂ ಗೊತ್ತಿರುವಂತೆ ಸರಸ್ವತಿ ಎಂಬ ನದಿ ಇತ್ತೆಂದು ನಂಬಿರುವವರು ಆಧಾರರಹಿತವಾದ ವೇದ, ಪುರಾಣ, ಉಪನಿಷತ್ತು ಇತ್ಯಾದಿಗಳನ್ನೇ ತಮ್ಮ ಸಾಮಾಜಿಕ ಮತ್ತು ರಾಜಕೀಯ ಅಸ್ತ್ರಗಳನ್ನಾಗಿಸಿಕೊಂಡಿರುವ ಚೆಡ್ಡಿಗಳು ಮಾತ್ರ. ಅಂತಹ ಹಲವು ಚೆಡ್ಡಿಗಳು ಎಎಸ್‌ಐ ಒಳಗೂ ಸೇರಿಕೊಂಡಿರುವುದರಿಂದ ಅತ್ತ ಸರಸ್ವತಿ ನದಿಯ ಪತ್ತೆ ಕೆಲಸ, ಇತ್ತ ಕನಸಿನಲ್ಲಿ ಸಾಧು ಒಬ್ಬನಿಗೆ ಕಂಡ ಒಂದು ಸಾವಿರ ಟನ್ ಚಿನ್ನದ ನಿಧಿಗಾಗಿ ಉತ್ಖನನ ನಡೆಯುತ್ತದೆ.

ಬಿಜೆಪಿಯೇ ಅಧಿಕಾರದಲ್ಲಿರಲಿ, ಕಾಂಗ್ರೆಸ್ ಆಡಳಿತ ಬಂದಿರಲಿ, ಏನೇ ಆದರೂ ಎಎಸ್‌ಐ ಸಂಸ್ಥೆಯಲ್ಲಿ ವೈಜ್ಞಾನಿಕ ಮನೋಭಾವಕ್ಕೆ ಚಿಕ್ಕಾಸು ಬೆಲೆಯೂ ಇಲ್ಲ ಎಂಬಂತಾಗಿದೆ. ಅದಕ್ಕೆ ಸಾಕ್ಷಿ ರಾಮಸೇತು ವಿವಾದದಲ್ಲಿ ವೈಜ್ಞಾನಿಕ ನಿಲುವನ್ನು ತೆಗೆದುಕೊಂಡಿದ್ದಕ್ಕೆ, ಅಮಾನತ್ತುಗೊಂಡ ಇಬ್ಬರು ಅಧಿಕಾರಿಗಳು.

ಹಲವು ವರ್ಷಗಳ ಹಿಂದೆ ರಾಮಸೇತುಗೆ ಸಂಬಂಧಿಸಿದಂತೆ ದೊಡ್ಡ ವಿವಾದವೆದ್ದಿತ್ತು. ಸಹಸ್ರಾರು ವರ್ಷಗಳಿಂದ ಭಾರತ ಮತ್ತು ಶ್ರೀಲಂಕಾ ನಡುವೆ ಭರತದ ಉಬ್ಬರವಿಳಿತದಿಂದಾಗಿ ನೈಸರ್ಗಿಕವಾಗಿ ಸಿರಿಸೃಷ್ಟಿಯಾಗಿರುವ ದಿಬ್ಬವನ್ನು ಒಡೆದು ಹಡಗುಗಳು ಶ್ರೀಲಂಕಾವನ್ನು ಸುತ್ತಿಬಳಸಿ ಬರುವುದನ್ನು ತಪ್ಪಿಸುವ ಯೋಜನೆಯೊಂದನ್ನು ಹಲವು ಪಟ್ಟಭದ್ರ ಹಿತಾಸಕ್ತಿಗಳು ಪ್ರೋತ್ಸಾಹಿಸುತ್ತಿದ್ದರು. ಆಗ ಅದಕ್ಕೆ ಎಡ ಮತ್ತು ಬಲ - ಎರಡೂ ಕಡೆಗಳಿಂದ ವಿರೋಧ ವ್ಯಕ್ತವಾಗಿತ್ತು. ಎಡ ಪಂಥೀಯರು ರಾಮಸೇತುವನ್ನು ಒಡೆದರೆ ಅಲ್ಲಿ ಹಲವಾರು ಶತಮಾನಗಳಿಂದ ಸೃಷ್ಟಿಯಾಗಿರುವ ಸೂಕ್ಷ್ಮವಾದ ನೈಸರ್ಗಿಕ ಜಲ ಸಂಪತ್ತು ನಾಶವಾಗುತ್ತದೆ, ಜೊತೆಗೆ ಬಡ ಮೀನುಗಾರರ ಜೀವನೋಪಾಯವನ್ನೇ ನಾಶಮಾಡುತ್ತದೆ ಎಂದು ವೈಜ್ಞಾನಿಕ ಮತ್ತು ಸಾಮಾಜಿಕ ಅಂಶಗಳ ಮೇಲೆ ತಮ್ಮ ವಾದವನ್ನು ಮಂಡಿಸಿದ್ದರು. ಅದೇ ಹೊತ್ತಿಗೆ ಬಲ ಪಂಥೀಯರು "ರಾಮ ಸೇತು ಸಹಜವಾಗಿಯೇ ಸೃಷ್ಟಿಯಾದ ದಿಬ್ಬವಲ್ಲ, ಬದಲಾಗಿ ಅದೊಂದು ಸೇತುವೆ. ಅದನ್ನು ಕಟ್ಟಿದ್ದು ಶ್ರೀರಾಮ. ನಮ್ಮ ಧಾರ್ಮಿಕ ಗ್ರಂಥಗಳಲ್ಲೂ ಇದರ ಬಗ್ಗೆ ಪ್ರಸ್ತಾಪವಿದೆ. ಇದು ನಮ್ಮ ನಂಬಿಕೆ. ಆದ್ದರಿಂದ ಯಾವ ಕಾರಣಕ್ಕೂ ರಾಮ ಸೇತುವನ್ನು ಒಡೆಯಬಾರದು" ಎಂದು ವಾದಿಸಿದ್ದರು. ಎಂಥಾ ಮೂರ್ಖನಿಗೂ ಎಡಪಂಥೀಯರ ವಾದ ಸರಿಯಾದದ್ದು ಎಂದು ಗೊತ್ತಾಗುತ್ತದೆ.

ಕೊನೆಗೆ ಈ ವಿವಾದ ಸುಪ್ರೀಂಕೋರ್ಟಿನ ಮೆಟ್ಟಿಲನ್ನು ಏರಿತು. ಕೋರ್ಟ್ ಎಎಸ್‌ಐ ಸಂಸ್ಥೆಯ ಅಭಿಪ್ರಾಯವನ್ನು ಕೋರಿತು. ಆಗ ಎಎಸ್‌ಐ ಸಲ್ಲಿಸಿದ ಅಫಿಡವಿಟ್‌ನಲ್ಲಿ "ರಾಮಸೇತು ನಿಸರ್ಗ ಸಹಜವಾಗಿ ನಿರ್ಮಾಣಗೊಂಡಿರುವ ದಿಬ್ಬ, ಅದಕ್ಕೆ ಯಾವ ಇತಿಹಾಸವೂ ಇಲ್ಲ, ವಾಲ್ಮೀಕಿಯ ರಾಮಾಯಣ ಮತ್ತು ತುಳಸಿದಾಸನ ರಾಮಚರಿತಮಾನಸ ನಮ್ಮ ಪುರಾತನ ಕತೆಗಳಾಗಿದ್ದರೂ ಅವುಗಳನ್ನು ಐತಿಹಾಸಿಕ ಸಾಕ್ಷಿಗಳೆಂದು ಪರಿಗಣಿಸಲಾಗುವುದಿಲ್ಲ" ಎಂದಿತ್ತು. ಆ ಮೂಲಕ ಎಎಸ್‌ಐ ಅಪರೂಪಕ್ಕೆ ವೈಚಾರಿಕ ಪ್ರವೃತ್ತಿಯನ್ನು ಪ್ರದರ್ಶಿಸಿತ್ತು.

ಈ ಅಫಿಡವಿಟ್‌ನಲ್ಲಿದ್ದ ವಿಚಾರಗಳನ್ನು ಮಾಧ್ಯಮಗಳು ವರದಿ ಮಾಡಿದ್ದೇ ತಡ, ಚೆಡ್ಡಿಗಳು "ಸಂಸ್ಕೃತಿ ನಾಶ, ಧಾರ್ಮಿಕ ನಂಬಿಕೆಗಳಿಗೆ ಧಕ್ಕೆ" ಎಂದೆಲ್ಲಾ ಬಾಯಿಬಡಿದುಕೊಳ್ಳಲಾರಂಭಿಸಿದರು. ಅವರ ಆರ್ಭಟವನ್ನು ಕಂಡು ಹೆದರಿದ ಕಾಂಗ್ರೆಸ್ ನೇತೃತ್ವದ ಸರ್ಕಾರ ಅಂತಹ ಅಫಿಡವಿಟ್ಟನ್ನು ಸಲ್ಲಿಸಿದ್ದ ಇಬ್ಬರು ಎಎಸ್‌ಐ ಅಧಿಕಾರಿಗಳನ್ನು ಅಮಾನತ್ತಿನಲ್ಲಿಟ್ಟಿತ್ತಲ್ಲದೆ, ಅಫಿಡವಿಟ್ಟನ್ನೇ ನ್ಯಾಯಾಲಯದಿಂದ ಹಿಂದೆ ಪಡೆದಿತ್ತು.

ಇಂತಹ ಎಎಸ್‌ಐ ಶೋಭನ್ ಸರ್ಕಾರ್ ಎಂಬ ಸಾಧುವಿನ ಕನಸಿನ ತಾಳಕ್ಕೆ ಅಗೆಯುತ್ತಿರುವುದು ಅಚ್ಚರ ಅಲ್ಲ, ಅಲ್ಲವೇ?

ಅಂದಹಾಗೆ, ಯುಪಿಎ ಸರ್ಕಾರ ಮತ್ತು ಅದರ ಅಡಿ ಬರುವ ಎಎಸ್‌ಐ ಸಂಸ್ಥೆಯ ಬುದ್ಧಿಹೀನ ನಡವಳಿಕೆಯ ಮಧ್ಯೆ ನಿಜವಾಗಲೂ ಪ್ರಜ್ಞಾವಂತರಾಗಿ ಪ್ರತಿಕ್ರಿಯಿಸಿರುವವರು ದೌಂಡಿಯಾ ಖಿಡಾ ಎಂಬ ಪುಟ್ಟ ಗ್ರಾಮದಲ್ಲಿ ವಾಸಿಸುತ್ತಿರುವ ಸುಮಾರು ಒಂದು ಸಾವಿರ ಹಳ್ಳಿ ಜನರು. ಅವರ ನಾಯಕ ಅಜಯ್‌ಪಾಲ್ ಸಿಂಗ್ ಎಂಬುವವರು "ಅಕಸ್ಮಾತ್ ಈ ಪ್ರದೇಶದಲ್ಲಿ ಚಿನ್ನ ಸಿಕ್ಕಿದರೆ ನಮ್ಮ ಪ್ರದೇಶಕ್ಕೆ ಇಲ್ಲಿ ಪಟ್ಟಿ ಮಾಡಿರುವ ಸವಲತ್ತುಗಳನ್ನು ಸರ್ಕಾರ ನೀಡಬೇಕು. ನಮಗೆ ಒಂದು ರೈಲು ನಿಲ್ದಾಣ, ವೈದ್ಯಕೀಯ ಕಾಲೇಜು, ಕೈಗಾರಿಕಾ ವಲಯ, ಮಹಿಳೆಯರಿಗೊಂದು ಕಾಲೇಜು, ಕೃಷಿ ಅಧ್ಯಯನ ಕೇಂದ್ರ, ಸೌರ ವಿದ್ಯುಶಕ್ತಿ ಮತ್ತು ಪ್ರತಿ ಮನೆಯ ಒಬ್ಬರಿಗೆ ಸರ್ಕಾರಿ ನೌಕರಿ ಕೊಡಬೇಕು" ಎಂದು ಹೇಳಿದ್ದಾರೆ.

******

"ಮಲ ಹೊರುವುದು ಆಧ್ಯಾತ್ಮಿಕ"

"ಜೀವನೋಪಾಯಕ್ಕೆ ಬೇರೆ ವಿಧಿ ಇಲ್ಲದೇ ಇಂತಹ ಕೆಲಸವನ್ನು ಅವರು ಮಾಡುತ್ತಾ ಬಂದಿದ್ದಾರೆಂದು ನಾನು ನಂಬುವುದಿಲ್ಲ. ಜೀವನೋಪಾಯಕ್ಕೆಂದೇ ಅವರು ತಲತಲಾಂತರದಿಂದ ಇಂತಹ ವೃತ್ತಿಯನ್ನು ಅವಲಂಬಿಸುತ್ತಿರಲಿಲ್ಲ. ಯಾವುದೋ ಒಂದು ಕಾಲದಲ್ಲಿ ಸಫಾಯಿ ಕರ್ಮಚಾರಿಗಳಿಗೆ ಇತರರ ಮಲ ಹೊರುವ ಮೂಲಕ ದೇವರ ಮತ್ತು ಸಮಾಜದ ಸೇವೆ ಮಾಡುವುದೇ ತಮ್ಮ ಕರ್ತವ್ಯ ಎಂದು ಜ್ಞಾನೋದಯ ಆಗಿರಬೇಕು. ಅಷ್ಟೇ ಅಲ್ಲ, ಶತಮಾನಗಳ ಕಾಲ ಮಲ ಹೊರುವ ಕಾಯಕವನ್ನು ಮುಂದುವರೆಸುವ ಮೂಲಕ ತಾವು ಆಂತರಿಕ ಆಧ್ಯಾತ್ಮಿಕ ಪ್ರಕ್ರಿಯೆಯಲ್ಲಿ ತೊಡಗಿದ್ದೇವೆ ಎಂದು ಅವರು ಬಲವಾಗಿ ನಂಬಿರಬೇಕು. ಇವರ ಪುರಾತನರಿಗೆ ಇದನ್ನು ಬಿಟ್ಟು ಇತರೆ ಕಾಯಕ ಅಥವಾ ವೃತ್ತಿಯನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶವೇ ಹಿಂದಿನ ಕಾಲದಲ್ಲಿ ಇರಲಿಲ್ಲ ಎಂಬುದನ್ನು ನಾನು ನಂಬಲಾರೆ. ಸಫಾಯಿ ಕರ್ಮಚಾರಿಗಳ ಕೆಲಸವಾದರೂ ಎಂತಹದ್ದು? ಪೂಜಾರಿಯೊಬ್ಬ ಪ್ರಾರ್ಥನೆ ಸಲ್ಲಿಸುವ ಮುನ್ನ ಗರ್ಭಗುಡಿಯನ್ನು ಸ್ವಚ್ಛಗೊಳಿಸುತ್ತಾನೆ. ಹಾಗೆಯೇ ಸಫಾಯಿ ಕರ್ಮಚಾರಿಗಳು ನಗರಗಳನ್ನು ಸ್ವಚ್ಛವಾಗಿಸುತ್ತಾರೆ. ಸಫಾಯಿ ಕರ್ಮಚಾರಿಗಳು ಮತ್ತು ದೇವಾಲಯದ ಪೂಜಾರಿಗಳು ಒಂದೇ ತರಹದ ಕೆಲಸ ಮಾಡುತ್ತಾರೆ.."

ನಮ್ಮ ದೇಶದಲ್ಲಿ ಅತಿ ಹಿಂದುಳಿದ, ಅವಮಾನಕ್ಕೆ ಗುರಿಯಾಗಿರುವ, ತಿರಸ್ಕಾರವನ್ನೇ ಕಂಡಿರುವ ಸಫಾಯಿ ಕರ್ಮಚಾರಿಗಳ ಬಗ್ಗೆ ಇಷ್ಟೊಂದು 'ಸೂಕ್ಷ್ಮ' ಮಾತುಗಳನ್ನು ತನ್ನ ಸರ್ಕಾರ ಪ್ರಕಟಿಸಿದ ಪುಸ್ತಕವೊಂದರಲ್ಲಿ ದಾಖಲಿಸಿದ ಮುಖ್ಯಮಂತ್ರಿ ಯಾರಿರಬಹುದು?

ಇನ್ನ್ಯಾರು?

ಗುಜರಾತಿನ ಮಾರಣಹೋಮದಲ್ಲಿ ಸಾವಿಗೀಡಾದ ಅಮಾಯಕ ಮುಸಲ್ಮಾನರನ್ನು ಕಾರಿನ ಚಕ್ರಕ್ಕೆ ಸಿಕ್ಕಿದ 'ಕುನ್ನಿ'ಗಳು ಎಂದ ನರೇಂದ್ರ ಮೋದಿ.


ಇಂತಹ ಕನಿಷ್ಠ ಮತ್ತು ಕ್ರೂರ ಚಿಂತನೆಯ ಮನುಷ್ಯ ಈ ದೇಶದ ನಾಯಕನಾಗಬೇಕೆ? ಎಲ್ಲರೂ ಮತ್ತೊಮ್ಮೆ ಯೋಚಿಸಿ. ಆತ ನಮ್ಮ ಸಮಾಜದ ಅಸಹಾಯಕರ ಬಗ್ಗೆ ಆಡಿರುವ ಈ ಅಸೂಕ್ಷ್ಮ ಮಾತುಗಳನ್ನು ಪ್ರಚಾರ ಮಾಡುವ ಮೂಲಕ ಆತನ ಮಹತ್ವಾಕಾಂಕ್ಷೆಗೆ ಅಡ್ಡಿಯನ್ನು ಎಲ್ಲರೂ ಒಡ್ಡಬೇಕೆಂದು ನಾನು ಮನವಿ ಮಾಡುತ್ತಿದ್ದೇನೆ.

ಕಂಡಹಾಗೆ



• ಗೌರಿ ಲಂಕೇಶ್
editorlankesh@gmail.com

ನಿರೂಪಕರ ಅವಾಂತರಗಳು



ವಾಲ್ಮೀಕಿ ಜಯಂತಿ ದಿನದಂದು ನಿರೂಪಕಿ ಬಂದು ತನ್ನ ಕಾಗೆ ಕಂಠದಲ್ಲಿ "ಈಗ ನಾಡಗೀತೆ. ಎಲ್ಲರೂ ಎದ್ದು ನಿಂತು ಕೇಳಿ" ಎಂದಳು. ನಾವೆಲ್ಲ ಹಾಗೇ ಮಾಡಿದ್ದಾಯ್ತು. ಮತ್ತೆ ಬಂದ ಆಕೆ "ಇದುವರೆವಿಗೂ ರೈತ ಗೀತೆಯನ್ನು ಕೇಳಿದಿರಿ. ಈಗ ಕುವೆಂಪುರವರ ನೇಗಿಲಯೋಗಿ ರೈತಗೀತೆ" ಎಂದಳು. ನಮ್ಮ ಜನಕ್ಕೆ ತಪ್ಪನ್ನು ತಿದ್ದಿಕೊಂಡು ನಡೆಯುವ ಗುಣ ಅನಾದಿಕಾಲದಿಂದಲೂ ರೂಢಿಯಾಗಿದೆ. ಆದ್ದರಿಂದ ಆಕೆಯ ತಪ್ಪನ್ನು ತಿದ್ದದೆ ರೈತಗೀತೆಯಲ್ಲಿ ಮುಳುಗಿದರು. ಆದರೆ ಸಿ. ಅಶ್ವತ್ಥ್ ಹಾಕಿದ ಮಟ್ಟಿಗೆ ವಿಚಿತ್ರ ಮ್ಯೂಸಿಕ್ ಮತ್ತು ಗಾರ್ದಭ ದನಿ ಬಳಸಿ ಹಾಡಿದ್ದರಿಂದ "ಉಳುವ ಯೋಗಿಯ ನೋಡಲ್ಲಿ" ಎಂಬ ಗೀತೆ "ಯಾವುದೋ ಅನಾಹುತ ಮಾಡುತ್ತಿದ್ದಾನೆ ನೋಡಲ್ಲಿ" ಎಂಬ ಉದ್ಗಾರದಂತೆ ಕೇಳತೊಡಗಿತು. ಅಂತೂ ಅದೂ ಮುಗಿಯಿತು.

ನಂತರ ಸ್ವಾಗತಕಾರ ಬಂದ. ಆತ ಬಹಳವಾಗಿ ತಯಾರಿ ನಡೆಸಿಕೊಂಡು ಬಂದಂತೆ ಕಂಡ. ತಲೆಯ ಎಡಭಾಗದಲ್ಲಿ ಹಾರಾಡುತ್ತಿದ್ದ ಕೂದಲನ್ನು ಹಿಡಿದು ನಡುನೆತ್ತಿಯ ಮೇಲಕ್ಕೆ ಬಳಿದುಕೊಂಡು "ಬಾಗಿಲೊಳು ಕೈಮುಗಿದು ಒಳಗೆ ಬಾ ಯಾತ್ರಿಕನೆ ಶಿಲೆಯಲ್ಲವೀ ಗುಡಿಯು ಕಲೆಯ ಬಲೆಯೂ" ಎಂಬ ಕುವೆಂಪು ಕವನ ಹೇಳಿದ. ಮುಂದುವರಿದು ಹೆಚ್ಚುಕಡಿಮೆ ಮುಕ್ಕಾಲು ಕವನವನ್ನು ಹೇಳುತ್ತಿದ್ದಂತೆ ವಾಲ್ಮೀಕಿ ಜಯಂತಿ ಮತ್ತು ಕುವೆಂಪು ಸೋಮನಾಥಪುರದ ದೇವಾಲಯವನ್ನು ನೋಡಿ ಬರೆದಿರುವ ಕವನವನ್ನು ಈ ಸ್ವಾಗತಕಾರ ಜೋಡಿಸಿ ಅರ್ಥಪೂರ್ಣ ಸ್ವಾಗತ ಮಾಡುತ್ತಾನೆಂದು ಕಾದೆ. ಆದರೆ ಹಾಗಾಗಲಿಲ್ಲ, ಋಷಿ ಕವಿ ಮತ್ತು ಕವನ ಹಾಗು ಸ್ವಾಗತಕಾರನ ನಡುವೆ ಯಾವ ಸಂಬಂಧವೂ ಗೋಚರಿಸದೆ ನಿರಾಶನಾದೆ.

ಸ್ವಾಗತಕಾರನಿಗೆ ಮಹಿಳಾ ಅತಿಥಿ ಕಣ್ಣಿಗೆ ಬಿದ್ದಳು. ಕೂಡಲೇ ಆತ "ನಾನಿನಗೆ ನೀನೆನಗೆ ಜೇನಾಗುವ ರಸದೇವ ಗಂಗೆಯಲಿ ಮೀನಾಗುವ ರತಿರೂಪಿ ಭಗವತಿಗೆ ಮುಡಿಪಾಗುವ" ಎಂದು ಇನ್ನೊಂದು ಕವನ ಹೇಳಿ ಸ್ವಾಗತಿಸಿದ. ಸ್ವಾಗತಿಸಿಕೊಂಡ ಮಹಿಳೆ ರತಿಯಾಗಿರಲಿಲ್ಲ, ಜೊತೆಗೆ ಈ ಕವನಕ್ಕೆ ನನ್ನನ್ನೆ ಏಕೆ ಈ ಮೂರ್ಖ ಗುರಿ ಮಾಡಿಕೊಂಡ ಎಂಬುದನ್ನು ಗ್ರಹಿಸದವಳಾಗಿದ್ದಳು. ಜೇನಾಗುವ ಕವಿಕೆ ಕುವೆಂಪುರವರ ಅದ್ಭುತ ಪ್ರೇಮಗೀತೆ. ನಾನಿನಗೆ ನೀನೆನಗೆ ಜೇನಾಗುವಾ ಎಂದು ಕಣ್ಮುಚ್ಚಿ ಆಲಂಗಿಸಿದ ಕೂಡಲೇ ರಸದೇವಗಂಗೆಯಲಿ ವಿಹರಿಸುವ ಪಾರಮಾರ್ಥಿಕ ಉನ್ಮಾದಕ್ಕೆ ಸೆಳೆಯುವ ಆ ಕವನ ನೆನೆಸಿಕೊಂಡು ಸಭೆಯಿಂದ ಹೊರನಡೆದು ಮಹಿಳಾ ಅತಿಥಿಯ ಭಾಷಣದಿಂದ ಪಾರಾದೆ.

ಇತ್ತೀಚಿನ ಸಭೆಗಳಲ್ಲಿ ನಿರೂಪಕರು, ಸ್ವಾಗತಕಾರರು ಮತ್ತು ವಂದನಾರ್ಪಣೆ ಗಿರಾಕಿಗಳು ಭಯಹುಟ್ಟಿಸತೊಡಗಿದ್ದಾರೆ. ಇನ್ನು ಅತಿಥಿಗಳಂತೂ ಏನಾಗಿದ್ದಾರೆಂದರೆ ಏನನ್ನ ಎಷ್ಟು ಹೇಳಬೇಕು, ಈ ಸಭೆಯ ಔಚಿತ್ಯವೇನು, ಇಲ್ಲಿ ತಾನೊಬ್ಬನೇ ಮಾತನಾಡುವವನೊ ಇನ್ನೂ ಇದ್ದಾರೊ ಎಂಬ ಪ್ರಾಥಮಿಕ ತಿಳಿವಳಿಕೆಯ ಅಭಾವವುಳ್ಳರಾಗಿದ್ದಾರೆ. ಸಹನೆ ಮೀರುವಂತೆ ಹೇಳುವುದನ್ನೆಲ್ಲಾ ಹೇಳಿ ನನ್ನೆರಡು ಮಾತನ್ನು ಮುಗುಸ್ತಿನಿ ಅನ್ನುವವರ ಸಂಖ್ಯೆ ದಿನೇದಿನೇ ಜಾಸ್ತಿಯಾಗುತ್ತಿದೆ. ಇದೆಲ್ಲಕ್ಕಿಂತಲೂ ಇನ್ನೂ ಭಯಾನಕ ಸಂಗತಿ ಎಂದರೆ ವೇದಿಕೆಯ ಮೇಲೆ ಕುಳಿತ ಎಲ್ಲಾ ಮೇಧಾವಿಗಳ ಹಾಜರಾತಿಯ ಕರೆ. ಇದಕ್ಕೆ ಪೂರಕವಾದ ಒಂದು ಘಟನೆ ಶಿರಾಳಕೊಪ್ಪದ ಸಮೀಪದಲ್ಲಿರುವ ಎಣ್ಣೆಕೊಪ್ಪ ಎಂಬ ಊರಿಗೆ ಹೋದಾಗ ನಡೆಯಿತು. ಅಲ್ಲಿ ವಿನೋಭಾಭಾವೆಯವರ ಶಿಷ್ಯ ಮಲ್ಲಿಕಾರ್ಜುನಪ್ಪ ಗೌಡರ ನೆನಪಿನ ಸಭೆಯಿತ್ತು, ಸುಮಾರು ಏಳು ಜನ ಸ್ವಾಮಿಗಳು ಬಂದಿದ್ದರು. ಅವರ ನಡುವೆ ಗದುಗಿನ ತೋಂಟದಾರ್ಯ ಸ್ವಾಮಿಗಳೂ ಇದ್ದರು. ಭಾಷಣಕ್ಕೆ ಎದ್ದು ನಿಂತ ಎಲ್ಲರೂ ಏಳು ಜನ ಸ್ವಾಮಿಗಳ ಹೆಸರಿನ ಹಿಂದೆ ಶ್ರೀಶ್ರೀಶ್ರೀ ಸೇರಿಸುತ್ತಿದ್ದರು. ನಾನು "ಸತ್ತವಲ್ಲಪ್ಪ ದೇವರೆ" ಎಂದುಕೊಂಡು ಗದುಗಿನ ಸ್ವಾಮಿ ಮಾತನಾಡುವ ಸಮಯಕ್ಕೆ ಸರಿಯಾಗಿ ಬಂದರಾಯ್ತು ಎಂದು ಊರೆಲ್ಲಾ ಸುತ್ತ ಬಂದರೂ ಇನ್ನು ನಾಲ್ಕು ಸ್ವಾಮಿಗಳು ಮಾತನಾಡುತ್ತಿದ್ದರು. ಇಂತಹ ಸ್ವಾಮಿಗಳು ಇತ್ತೀಚೆಗೆ ಸಾಹಿತ್ಯ ಸಮ್ಮೇಳನಕ್ಕೂ ಬರುತ್ತವೆ. ಇವರಿಗೆ ಮೊಟ್ಟಮೊದಲು ಆಹ್ವಾನ ಕೊಟ್ಟವನು ಹಂ.ಪ. ನಾಗರಾಜಯ್ಯ, ಈತ ಧರ್ಮಾಧಿಕಾರಿಗಳಿಗೆ ಹಾಸಿದ ಕಂಬಳಿ ದೆಸೆಯಿಂದಾಗಿ ಸಾಹಿತ್ಯ ಸಮ್ಮೇಳನಗಳು. ಮುಜುಗರಕ್ಕೆ ಒಳಗಾಗಿದೆ.

ಗುರುಗಳಿಗಾಗಿ ಎತ್ತರದ ಕುರ್ಚಿ ಹಾಕುತ್ತಾರೆ. ಇಂತಹ ಸಮಯದಲ್ಲಿ ನಿರೂಪಕ ವಿಶೇಷವಾದ ನುಡಿಗಟ್ಟು ಮತ್ತು ಮಾತನಾಡಿದವರ ಸಂಕ್ಷಿಪ್ತ ವಿವರದ ನುಡಿಗಟ್ಟನ್ನು ಬಿತ್ತರಿಸಲು ತಯಾರಾಗಿರುತ್ತಾನೆ. ಹಾಗೆ ನೋಡಿದರೆ ಈ ಅವಾಂತರಿಕಾರಿ ನಿರೂಪಕರಿಗೆ ಸಭಾಗ್ಣಿರೇ ಹೊಂದಿಕೊಂಡು ಮಾತನಾಡಿ ಹಾಸ್ಯಾಸ್ಪದರಾಗತೊಡಗಿದ್ದಾರೆ.

ಉದಾಹರಣೆಗೆ ಒಮ್ಮೆ ಒಬ್ಬ ನಿರೂಪಕ "ನಮ್ಮ ಸಾಹೇಬರು ಹೊಸದಾಗಿ ಮದುವೆಯಾದರೂ ಹನಿಮೂನ್‌ಗೂ ಕೂಡ ಹೋಗದೆ ನಮ್ಮ ಸಮಾರಂಭದಲ್ಲಿ ತೊಡಗಿಸಿಕೊಂಡಿದ್ದಾರೆ" ಎಂದ. ಇದರಿಂದ ಸಾಹೇಬರು ಮುಜುಗರಗೊಂಡಿರಬಹುದು ಎಂದು ಭಾವಿಸಿದ್ದೆವು. ಆದರೆ ಅವರು "ನಾನು ಮಾರಿಷಸ್‌ಗೆ ಹೋಗಬೇಕಿತ್ತು, ಪ್ರಯಾಣದ ಪ್ಯಾಕೇಜಿನಲ್ಲಿ ಏನೋ ಎಡವಟ್ಟಾಗಿ ಅದಕ್ಕಿಂತಲೂ ಇದೇ ಮುಖ್ಯ ಅಂತ ಭಾವಿಸಿ ಈ ಸಮಾರಂಭದ ಯಶಸ್ಸಿಗೆ ದುಡಿಯುತ್ತಿದ್ದೇನೆ" ಎಂದರು.

ಈ ಥರದ ಸೂಪರ್‌ಡೆಂಟ್ ಒಬ್ಬ ಮೊನ್ನೆ ನಿವೃತ್ತಿಯಾದ. ಇಡೀ ಜೀವನದಲ್ಲಿ ಎಂದೂ ಸೂಟ್ ಹಾಕದ ಆತ ನಿವೃತ್ತಿ ದಿನ ಹೊಸ ಸೂಟ್ ಧರಿಸಿ ಎತ್ತಿಗೆ ಶೃಂಗಾರ ಮಾಡಿದಂತೆ ಕಾಣುತ್ತಿದ್ದ. ಆ ಸಭೆಯ ವಿಶೇಷತೆ ಏನೆಂದರೆ ಸ್ವಾಗತಕಾರ, ನಿರೂಪಕ ಮತ್ತು ಪ್ರಸ್ತಾವನೆಯನ್ನು ಒಬ್ಬನೇ ವಹಿಸಿಕೊಂಡಿದ್ದು, ಅದಕ್ಕಾಗಿಯೇ ಏನೋ ಸ್ವಾಗತ ಮರೆತು ಪ್ರಸ್ತಾವನೆಗೆ ತೊಡಗಿದ. ಆ ಪ್ರಸ್ತಾವನೆ ನಿವೃತ್ತಿ ಹೊಂದಲಿರುವ ಅಧಿಕಾರಿಯ ಹುಟ್ಟು, ವಿದ್ಯೆ, ಹುದ್ದೆ ಅದರ ನಿರ್ವಹಣೆಯಲ್ಲಿ ವರ್ಗಗೊಂಡ ಊರು, ಈ ನಡುವೆ ಹುಟ್ಟಿದ ಮಕ್ಕಳು, ಅವುಗಳ ವಿದ್ಯಾಭ್ಯಾಸವನ್ನೆಲ್ಲಾ ಹೇಳಿ, ನಿವೃತ್ತನಾಗಲಿರುವವನ ಗುಣಗಾನ ಮಾಡತೊಡಗಿದ.

ಆಗ ಇಡೀ ವೇದಿಕೆಯಲ್ಲಿದ್ದ ಎಂಟು ಕುರ್ಚಿಗಳೂ ಖಾಲಿ ಇದ್ದವು. ಸಭಾಂಗಣದಿಂದ ಯಾರೋ ಕೂಗಿ "ಮೊದಲು ಅತಿಥಿಗಳನ್ನು ವೇದಿಕೆಗೆ ಕರಿಯಪ್ಪ" ಎಂದರು. ಆಗ ಎಚ್ಚೆತ್ತುಕೊಂಡ ನಿರೂಪಕ ಎಲ್ಲರನ್ನು ವೇದಿಕೆಗೆ ಕರೆದ. ಆದರೆ ಸಭೆಯ ಅಧ್ಯಕ್ಷತೆ ವಹಿಸಬೇಕಿದ್ದ ಹಿರಿಯ ಅಧಿಕಾರಿಯನ್ನೇ ಕರೆಯಲಿಲ್ಲ!

ನಡುವೆಯಿದ್ದ ಖಾಲಿ ಕುರ್ಚಿಯನ್ನು ನೋಡದೆ ನಿವೃತ್ತಿಯಾಗಲಿರುವ ಅಧಿಕಾರಿಯ ಹೆಂಡತಿಯನ್ನು ವೇದಿಕೆಗೆ ಕರೆಯತೊಡಗಿದ. ಆದರೆ ಆಕೆಯ ಹೆಸರೇ ಬೇರೆ, ಇವನು ಕರೆಯುತ್ತಿದ್ದ ಹೆಸರೇ ಬೇರೆ. ಹಳ್ಳಿಯ ಹೆಣ್ಣುಮಗಳಾದ ಆಕೆ ಬೇರೆಯವರ ಹೆಸರಿಗೆ ಓಗೊಡುವವಳಲ್ಲ, ಆದ್ದರಿಂದ ಆಕೆಯ ನಿಜವಾದ ಹೆಸರನ್ನು ಪತ್ತೆಹಚ್ಚಿ ಕರೆದುದಲ್ಲದೆ ಎರಡು ಜನ ಸಹಾಯಕಿಯರ ಸಹಾಯದಿಂದ ಆಕೆಯನ್ನು ವೇದಿಕೆಗೆ ಕರೆಸಲಾಯ್ತು, ಅಲ್ಲಿಗೆ ವೇದಿಕೆಯ ಕುರ್ಚಿ ಭರ್ತಿಯಾದವು. ಆಗ ಯಾರೋ ಸಿಟ್ಟಿನಿಂದ "ಅಧ್ಯಕ್ಷರನ್ನ ಕರೀರಿ" ಎಂದರು. "ಸಾರಿ, ನಮ್ಮ ಸಾಯಾಬರನ್ನೇ ಮರೆತಿದ್ದೆ" ಎಂದ ನಿರೂಪಕ ಅಚಾತುರ್ಯವನ್ನೇ ರಗಳೆ ಮಾಡಿಕೊಂಡು ತತ್ತರಿಸಿಹೋದ. ಆದರೇನು, ಆತ ವೇದಿಕೆಗೆ ಕರೆಯುವವರ ಸಂಖ್ಯೆ ದ್ವಿಗುಣಗೊಂಡು ಕುರ್ಚಿ ಸಾಲದಾದವು. ಯಾರ್‍ಯಾರೋ ಬಂದು ಕಿವಿಯಲ್ಲಿ ಜನರಿಗೆ ಕೇಳುವಂತೆಯೇ ಪಿಸುಗುಟ್ಟಿದಂತೆಲ್ಲಾ ಕೆಳಗಿನಿಂದ ಒಂದೊಂದೇ ಕುರ್ಚಿ ಮೇಲೆ ಹೋಗುತ್ತಿದ್ದವು. ಅಷ್ಟರಲ್ಲಿ ನನ್ನ ಸಹನೆ ಹಾಳಾಗಿ ಶಿವಮೊಗ್ಗದಿಂದ ಬೆಂಗಳೂರಿಗೆ ಹೋದಷ್ಟೇ ಬೇಸರದಿಂದ ಓಡಿಬಂದೆ.

ಅವರಿವರನ್ನು ಆಡಿಕೊಳ್ಳುವ ನನ್ನ ಪಾಲಿಗೆ ಒಮ್ಮೆ ನಿರೂಪಕನ ಜವಾಬ್ದಾರಿ ಬಿತ್ತು, ಹೊಸ ಕಟ್ಟಡವೊಂದರ ಉದ್ಘಾಟನೆಗೆ ಈಶ್ವರಪ್ಪ ಬಂದ. ನಾನು ಹತ್ತಿರ ಸುಳಿದು "ಕಾರ್ಯಕ್ರಮ ಎಷ್ಟೊತ್ತು ಮಾಡ್ಲಿ" ಎಂದೆ. "ಐದು ನಿಮಿಷದಲ್ಲಿ ಮುಗಿಸಿ" ಎಂದ. ಕೂಡಲೆ ನಾನು "ಮೂರು ನಿಮಿಷದಲ್ಲಿ ಮುಗುಸ್ತಿನಿ" ಎಂದದ್ದಲ್ಲದೆ, ಮೈಕ್ ತೆಗೆದುಕೊಂಡು "ಈ ಸಭೆಗೆ ಆಗಮಿಸಿರುವ ಜನಪ್ರತಿನಿಧಿಗಳು ಮತ್ತು ಸಾರ್ವಜನಿಕರಿಗೆ ಸ್ವಾಗತ. ಈಗ ನಮ್ಮ ಮಂತ್ರಿವರ್ಯರಾದ ಈಶ್ವರಪ್ಪನವರು ನೂತನ ಕಟ್ಟಡ ಉದ್ಘಾಟಿಸಿ ಭಾಷಣ ಮಾಡ್ತಾರೆ" ಎಂದೆ.

ಈಶ್ವರಪ್ಪ ಎದ್ದು ಬಂದು ಭುಜ ಮುಟ್ಟಿ "ಬೇಷ್ ಒಳ್ಳೆ ಕೆಲಸ ಮಾಡಿದ್ರಿ. ನಾನು ಕುವೆಂಪು ಸ್ಟ್ಯಾಚು ಉದ್ಘಾಟನೆಗೆ ಹೋಗಬೇಕು" ಎಂದು ನಾಲ್ಕು ಮಾತನಾಡಿ ಹೊರಟುಬಿಟ್ಟ.

ಆ ಕೂಡಲೇ ಆ ಏರಿಯಾದ ಕೌನ್ಸಿಲರ್ ನನ್ನ ಮೇಲೆ ಏರಿ ಬಂದ. ಪಾಪ ಆತ ತನ್ನ ವಾರ್ಡಿನಲ್ಲಿ ನಿರ್ಮಾಣಗೊಂಡ ಕಟ್ಟಡಕ್ಕೆ ಹಾಕಿದ ತನ್ನ ಶ್ರಮವನ್ನು ಮಂತ್ರಿ ಎದುರು ಕೊಚ್ಚಿಕೊಳ್ಳಲು ತಯಾರಿ ನಡೆಸಿಕೊಂಡು ಬಂದಿದ್ದ, ಆದ್ದರಿಂದ ಭಾಷಣಕ್ಕೆ ಅವಕಾಶ ಸಿಗದಿದ್ದುದಕ್ಕೆ ಕೆಂಡಮಂಡಲವಾಗಿದ್ದ, ನನ್ನನ್ನು ಎಂದೂ ಕ್ಷಮಿಸದವನಾಗಿದ್ದ, ನನ್ನ ಅದೃಷ್ಟಕ್ಕೆ ಆತ ಚುನಾವಣೆಯಲ್ಲಿ ಮಣ್ಣುಮುಕ್ಕಿ ನನ್ನ ಮನಸ್ಸಿಗೆ ನೆಮ್ಮದಿಯುಂಟು ಮಾಡಿದ.

ಹೋದ ವರ್ಷ ದಸರಾ ಸಂದರ್ಭದಲ್ಲಿ ಜಿಲ್ಲಾಡಳಿತ ನಡೆಸಿದ ದಸರಾ ಉತ್ಸವದ ವೇದಿಕೆಯಲ್ಲಿ ಒಂದೆರಡು ಅಪರೂಪದ ನಿರೂಪಕಿಯರು ಕಾಣಿಸಿಕೊಂಡರು. "ಈಗ ವೇದಿಕೆಗೆ ಚಾಮುಂಡಿ ಬರ್ತಾಳೆ. ನಾಟ್ಯ ಮಾಡ್ತಾಳೆ. ಅವಳನ್ನ ಬರಮಾಡಿಕೊಬೇಕಾದ್ರೆ ನೀವೆಲ್ರು ಚಪ್ಪಾಳೆ ತಟ್ಟಿ. ಜೋರಾಗಿ ತಟ್ಟಿ. ಯಾಕೆ ನಮ್ಮ ಶಿವಮೊಗ್ಗದ ಜನಕೆ ಶಕ್ತೀನೆ ಇಲ್ವ? ನೀವು ಹಿಂಗೆ ಮಾಡಿದ್ರೆ ಚಾಮುಂಡೇಶ್ವರಿ ವೇದಿಕೆಗೆ ಬರೋದೆಯಿಲ್ಲ, ಎಲ್ಲ ಜೋರಾಗಿ ಚಪ್ಪಾಳೆ ಹೊಡಿರಿ" ಎಂದು ಹಟಕ್ಕೆ ಬಿದ್ದ ಹುಡುಗಿಗೆ ಜನ ಕೇರ್ ಮಾಡಲಿಲ್ಲ.


ಮರುದಿನ ಮತ್ತೊಬ್ಬಳು ಬಂದು ಇನ್ನೂ ಅದ್ವಾನ ಮಾಡತೊಡಗಿದಳು. ಅದ್ವಾನ ಎಂದರೆ ನಡೆಯುವ ಕಾರ್ಯಕ್ರಮಕ್ಕೂ ಅವಳ ಅಸಂಬದ್ಧ ನಿರೂಪಣೆಗೂ ಸಂಬಂಧವೇ ಇರಲಿಲ್ಲ, ಅವಳ ಕೆಟ್ಟ ನಿರೂಪಣೆಯಿಂದ ತಪ್ಪಿಸಿಕೊಂಡಿದ್ದರಿಂದ ಅಪರೂಪದ ಜಾನಪದ ಕುಣಿತ ನೋಡಲಾಗಲಿಲ್ಲ!

■ ಬಿ. ಚಂದ್ರೇಗೌಡ

ಖಡ್ಗ ದೀಕ್ಷೆ: ಕಾಂಗ್ರೆಸ್ಸಿಗರ ಜಾಣಮೌನದ ರಹಸ್ಯವೇನು?

ಒಂದೆಡೆ ನಮ್ಮ ಮುಖ್ಯಮಂತ್ರಿ ಸಮಾಜವಾದಿ ಸಿದ್ಧರಾಮಯ್ಯ ಕೋಮುವಾದಿ ಶಕ್ತಿಗಳನ್ನು ನಿರ್ದಾಕ್ಷಿಣ್ಯವಾಗಿ ಹೆಡೆಮುರಿ ಕಟ್ಟಲಾಗುವುದು ಎಂದು ಹೋದಲ್ಲೆಲ್ಲಾ ಹೇಳುತ್ತಾ ಬರುತ್ತಿದ್ದಾರೆ. ಇನ್ನೊಂದೆಡೆ ಕೋಮುಕ್ರಿಮಿಗಳು ಕೋಮುವಾದ ಹರಡುವ ದುಷ್ಕೃತ್ಯಗಳನ್ನು ನಿರಾತಂಕವಾಗಿ ಮುಂದುವರಿಸುತ್ತಾ ಇವೆ. ಇವುಗಳನ್ನೆಲ್ಲಾ ನೋಡುತ್ತಾ ಅಸಹಾಯಕ ಶಾಂತಿಪ್ರಿಯ ನಾಗರಿಕರು "ಕಾಂಗ್ರೆಸ್‌ಗಿಂತ ಬಿಜೆಪಿ ಅಧಿಕಾರದಲ್ಲಿದ್ದರೆ ಒಳಿತು, ಯಾಕೆಂದರೆ ತಮ್ಮ ಸರಕಾರಕ್ಕೆ ಕೆಟ್ಟ ಹೆಸರು ಬರದಂತೆ ತಡೆಯುವ ಸಲುವಾಗಿಯಾದರೂ ಅಧಿಕಾರದಲ್ಲಿರುವವರು ಅನೇಕ ಸಂದರ್ಭದಲ್ಲಿ ತಮ್ಮ ವ್ಯಾಧಿಗ್ರಸ್ತ ಕೋಮುಕ್ರಿಮಿಗಳನ್ನು ಹತೋಟಿಯಲ್ಲಿಡುತ್ತಾರೆ" ಎಂದು ಹುಲುಬುವಂತಾಗಿದೆ. ಇದು ಸಂಪೂರ್ಣ ಸತ್ಯವಲ್ಲದಿದ್ದರೂ ಅರ್ಧ ಸತ್ಯವಂತೂ ಹೌದು. ಶಾಂತಿಪ್ರಿಯ ನಾಗರಿಕರು ಈ ರೀತಿ ಭ್ರಮನಿರಸನಗೊಂಡು ಮುಂದೊಂದು ದಿನ ಋಣಾತ್ಮಕವಾಗಿ ಯೋಚಿಸಿ ನೆಮ್ಮದಿಯ ಬದುಕಿಗಾಗಿ ಆಶಿಸಿ ಕೋಮುವಾದಿ ಶಕ್ತಿಗಳನ್ನು ಅಧಿಕಾರದ ಗದ್ದುಗೆಗೆ ಏರಿಸಬೇಕಾದಂತಹ ಅನಿವಾರ್ಯತೆಗೆ ಅಥವಾ ಅಸಹಾಯಕತೆಗೆ ಸಿಲುಕಿದರೆ ಅದಕ್ಕೆ ಕಾಂಗ್ರೆಸ್‌ನ ಈ ರೀತಿ ಬೇಜವಾಬ್ದಾರಿತನವೇ ಕಾರಣ.

ಇತ್ತೀಚೆಗೆ ಮಂಗಳೂರಿನಲ್ಲಿ ಹಿಂದೂ ಮಹಾಸಭಾ ಎಂಬ ಗಾಂಧಿ ಹಂತಕರ ಜನಿಸಂತಾನಿಗಳು ಧರ್ಮ, ಸ್ತ್ರೀ ಮತ್ತು ಗೋವುಗಳ ರಕ್ಷಣೆಗಾಗಿ ಹಿಂದೂ ಯುವಕರಿಗೆ ಖಡ್ಗ ದೀಕ್ಷೆ ನೀಡಲಾಗುವುದು ಎಂದು ಬಹಿರಂಗವಾಗಿ ಕಾನೂನು ಕೈಗೆತ್ತಿಕೊಳ್ಳುವ ಮಾತನ್ನಾಡಿದ್ದಾರೆ. ಅದನ್ನು ಕಾಂಗ್ರೆಸ್‌ನ ಯಾವೊಂದು ಪಿಳ್ಳೆಯೂ ವಿರೋಧಿಸಲಿಲ್ಲ, ಅವರ ವಿರುದ್ಧ ಕನಿಷ್ಠ ಒಂದು ದೂರನ್ನೂ ದಾಖಲಿಸಲಿಲ್ಲ, ಎಲ್ಲಾ ಬಿಡಿ ತಮ್ಮ ಪ್ರಚಾರದ ತೆವಲಿಗಾಗಿ ಒಂದು ಖಂಡನಾ ಹೇಳಿಕೆಯನ್ನೂ ನೀಡಲಿಲ್ಲ, ಇಷ್ಟೊಂದು ಬಹಿರಂಗವಾಗಿ ಮಾರಕಾಸ್ತ್ರ ಹಂಚುವ ಬಗ್ಗೆ ಬಹಿರಂಗವಾಗಿ ಹೇಳಿಕೆ ನೀಡುತ್ತಿರುವಾಗ ಪೊಲೀಸರೇ ಸ್ವಯಂಪ್ರೇರಿತರಾಗಿ ಅವರ ವಿರುದ್ಧ ದೂರು ದಾಖಲಿಸಿ ಕಂಬಿಯ ಹಿಂದೆ ತಳ್ಳಬೇಕಾಗಿತ್ತು, ಆದರೆ ಆರೆಸ್ಸೆಸ್ಸಿನ ಕಾಲಾಳುಗಳಿಂದಲೇ ತುಂಬಿರುವ ಪೊಲೀಸ್ ಇಲಾಖೆಯಿಂದ ಇಂತಹ ಕ್ರಮವನ್ನು ನಿರೀಕ್ಷಿಸುವುದೇ ಮೂರ್ಖತನ.




ಪ್ರಣವಾನಂದ ರಾಮಸ್ವಾಮಿ

ಕಳೆದ ಹತ್ತು ವರ್ಷಗಳಿಂದೀಚೆಗೆ ಎಲ್ಲಾ ವಿಧದ ಕೋಮುಶಕ್ತಿಗಳ ವಿರುದ್ಧ ನಿರಂತರ ಕಾನೂನು ಹೋರಾಟ, ಬೀದಿ ಹೋರಾಟ ಮತ್ತು ವೈಚಾರಿಕ ಸಮರ ನಡೆಸುತ್ತಾ ಬಂದ ನಾವು (ಕರ್ನಾಟಕ ಕೋಮು ಸೌಹಾರ್ದ ವೇದಿಕೆಯ ಸಂಗಾತಿಗಳು) ಖಡ್ಗ ದೀಕ್ಷೆಯ ವಿಚಾರವನ್ನು ಗಂಭೀರವಾಗಿ ಪರಿಗಣಿಸಿ ವಿವಿಧ ಹಂತದ ಪೊಲೀಸ್ ಅಧಿಕಾರಿಗಳನ್ನು ಸಂಪರ್ಕಿಸಿ ಇಂತಹ ಕಾನೂನುಭಂಜಕ ಶಕ್ತಿಗಳ ಮೇಲೆ ಕಠಿಣ ಕಾನೂನು ಕ್ರಮ ಕೈಗೊಳ್ಳಲು ಒತ್ತಾಯಿಸಿದ್ದು ಮಾತ್ರವಲ್ಲದೇ ಸಂಬಂಧಪಟ್ಟ ಪೊಲೀಸ್ ಠಾಣೆಯಲ್ಲಿ ನಮ್ಮ ಅಧ್ಯಕ್ಷ ಸುರೇಶ್ ಭಟ್ ಬಾಕ್ರಬೈಲ್‌ರ ನೇತೃತ್ವದಲ್ಲಿ ದೂರು ದಾಖಲಿಸಿದೆವು. ಇದಾಗಿ ಎರಡು ವಾರಗಳ ಕಾಲ ಪೊಲೀಸರು ಆರೋಪಿಗಳ ವಿರುದ್ಧ FIR ದಾಖಲಿಸಲೂ ಇಲ್ಲ, ನಾವು ಈ ಕುರಿತಂತೆ ಮತ್ತೆ ಮತ್ತೆ ಒತ್ತಡ ಹೇರಿದ್ದರ ಪರಿಣಾಮ ಕೊನೆಗೂ FIR ದಾಖಲಿಸಿದರು. FIR ದಾಖಲಾಗಿ ಈಗಾಗಲೇ ಹದಿನೈದು ದಿನಗಳು ಕಳೆದಿವೆಯಾದರೂ ಆರೋಪಿಗಳನ್ನು ಬಂಧಿಸುವುದು ಬಿಡಿ ಕನಿಷ್ಠ ಅವರನ್ನು ಕರೆಸಿ ಒಂದು ನಾಮಕಾವಸ್ತೆಯ ವಿಚಾರಣೆಯನ್ನೂ ಪೊಲೀಸರು ನಡೆಸಲಿಲ್ಲ, ಇದು ಏನನ್ನು ಸೂಚಿಸುತ್ತದೆ? ಇದರ ಹಿಂದೆ ಪೊಲೀಸರ ನಿಷ್ಕ್ರಿಯತೆಗಿಂತಲೂ ಹೆಚ್ಚಾಗಿ ಅಧಿಕಾರಸ್ಥ ಕಾಂಗ್ರೆಸ್ಸಿಗರ ಒತ್ತಡವಿರಬಹುದೆಂಬ ಬಲವಾದ ಸಂಶಯ ನಮ್ಮನ್ನು ಕಾಡುತ್ತಿದೆ. ಕಾಂಗ್ರೆಸ್ ಅಧಿಕಾರದಲ್ಲಿದ್ದರೂ ಕರಾವಳಿಯ ಕೆಲವು ಕಾಂಗ್ರೆಸ್ಸಿಗರು ರಾಜ್ಯಭಾರ ನಡೆಸುವುದು ಆರೆಸ್ಸೆಸ್ಸಿನ ಡಾನ್‌ಗಳ ಆಣತಿಯ ಮೇರೆಗೆ ಎಂಬುದು ಈಗ ಗುಟ್ಟಾಗೇನೂ ಉಳಿದಿಲ್ಲ.

ಈತನ್ಮಧ್ಯೆ ಖಡ್ಗ ದೀಕ್ಷೆ ಎಂಬ ಕಾನೂನು ಭಂಜಕ ವಿಚಾರವನ್ನು ಖಂಡಿಸಿ ನಾವು ಕರೆದ ಪತ್ರಿಕಾಗೋಷ್ಠಿಗೆ ಉತ್ತರವೆಂಬ ರೀತಿಯಲ್ಲಿ ಅವೇ ಗಾಂಧಿ ಹಂತಕರು ಪತ್ರಿಕಾಗೋಷ್ಠಿ ಕರೆದು ತಮ್ಮ ಉದ್ದೇಶಿತ ಯೋಜನೆಯನ್ನು ಸಮರ್ಥಿಸಿದ್ದಲ್ಲದೇ ಕಾನೂನು ಉಲ್ಲಂಘಿಸುವ ತಮ್ಮ ಹೇಳಿಕೆಯನ್ನು ಬಹಿರಂಗವಾಗಿ ಪುನರುಚ್ಚರಿಸಿದರು. ಖಡ್ಗ ದೀಕ್ಷೆಯನ್ನು ಯಾರಿಂದಲೂ ತಡೆಯಲು ಸಾಧ್ಯವಿಲ್ಲ ಎಂದು ಕಾನೂನಿಗೇ ಬೆದರಿಕೆ ಹಾಕಿದ್ದಾರೆ. ಈ ಕುರಿತಂತೆ ನಾವು ಮತ್ತೆ ಮತ್ತೆ ಹಿರಿಯ ಪೊಲೀಸ್ ಅಧಿಕಾರಿಗಳ ಮೇಲೆ ಒತ್ತಡ ಹೇರಿದೆವು, ಮಾತ್ರವಲ್ಲ ವಿಷಯದ ಗಂಭೀರತೆಯನ್ನು ಮನವರಿಕೆ ಮಾಡಿಕೊಟ್ಟೆವು. ಅದಾಗ್ಯೂ ಪೊಲೀಸರು ಕಾನೂನು ಭಂಜಕರನ್ನೂ ಕಾನೂನಿನ ಕುಣಿಕೆಯಿಂದ ರಕ್ಷಿಸಲು ಪಿಳ್ಳೆ ನೆವ ಹುಡುಕುತ್ತಿದ್ದಾರೆ.

ಕುಂದಾಪುರ: ಮುಸ್ಲಿಮರಿಗೆ 'ಧರ್ಮದೇಟು'

ಪಶ್ಚಿಮಘಟ್ಟದಲ್ಲಿ ಹುಟ್ಟುವ ಹೊಳೆಗಳು ಅರಬ್ಬೀ ಸಮುದ್ರವನ್ನು ಕೂಡುವ ಮುನ್ನ ಒಂದಷ್ಟು ದೂರ ಸಮುದ್ರಕ್ಕೆ ಸಮಾನಾಂತರದಲ್ಲಿ ಹರಿಯುತ್ತವೆ. ಕೆಲವೆಡೆ ಹೊಳೆಯಿಂದ ಸಮುದ್ರ ಕೆಲವೇ ಹೆಜ್ಜೆಗಳಷ್ಟು ದೂರದಲ್ಲಿ, ಹರಿದು ಮುಂದೆಲ್ಲೋ ಸಮುದ್ರವನ್ನು ಸೇರುತ್ತದೆ. ಕುಂದಾಪುರ ಸಮೀಪದ ಖ್ಯಾತ ಪ್ರವಾಸಿತಾಣ ಮರವಂತೆ ಇಂತಹವುಗಳಲ್ಲಿ ಒಂದು. ಹೊಳೆ ಮತ್ತು ಸಮುದ್ರಗಳ ನಡುವಿನ ಈ ಕಿರಿದಾದ ನೆಲದ ನಾಲಗೆಯಂತಹ ಪ್ರದೇಶಕ್ಕೆ ಕೋಡಿ ಎನ್ನುತ್ತಾರೆ. ಕರಾವಳಿಯ ಉದ್ದಕ್ಕೂ ಹಲವು ಕೋಡಿಗಳಿವೆ. ಈ ಕೋಡಿಗಳ ಹತ್ತಿರದ ಊರುಗಳೊಡನೆ ಇವುಗಳನ್ನು ಗುರುತಿಸಲಾಗುತ್ತದೆ. ಉದಾ: ಹೆಜಮಾಡಿ ಕೋಡಿ, ಮಲ್ಪೆ ಕೋಡಿ, ಕಾರಂತರ 'ಮರಳಿಮಣ್ಣಿಗೆ' ಯ ಕೋಟದ ಕನ್ನಾನ ಕೋಡಿ, - ಹೀಗೆ.



ಕರಾವಳಿಯ ಊರುಗಳಲ್ಲಿ ಜಾನುವಾರುಗಳ ಜೊತೆ ಮುಸ್ಲಿಮರು ಕಂಡು ಬಂದರೆ, ಗುಂಪು ಹಲ್ಲೆ ನಡೆಸುವುದು ಒಂದು ಮಾಮೂಲು ಸಂಗತಿಯಾಗಿ ಬಿಟ್ಟಿದೆ. ಆದರೆ ಇವು ಹೆಚ್ಚಾಗಿ ಪರಸ್ಪರ ಗುರುತು ಪರಿಚಯವಿಲ್ಲದ ಮುಸ್ಲಿಮರ ಮೇಲೆ ನಡೆಯುವ ದಾಳಿಗಳು. ಆದರೆ ಕುಂದಾಪುರದಲ್ಲಿ ಮೊನ್ನೆ ನಡೆದ ಘಟನೆ ಈ ದೃಷ್ಟಿಯಿಂದ ವಿಲಕ್ಷಣವಾಗಿದೆ.

ಈ ಲೇಖನದಲ್ಲಿ ನಿರೂಪಿಸಿರುವ ಗುಂಪು ಹಲ್ಲೆ ನಡೆದದ್ದು ಕುಂದಾಪುರ ಕೋಡಿಯಲ್ಲಿ. ಈ ಹಲ್ಲೆಗೆ 'ಧರ್ಮದೇಟು' ಎಂಬ ಹೆಸರು ಅತ್ಯಂತ ಸೂಕ್ತವಾಗಿದೆ. ಚೆಡ್ಡಿ ಕರಪತ್ರಗಳಾಗಿ ಬಿಟ್ಟಿರುವ ಕೆಲವು ಪತ್ರಿಕೆಗಳು ಇತ್ತೀಚೆಗೆ ಚಾಲ್ತಿಗೆ ತಂದಿರುವ ಪದ ಪ್ರಯೋಗ ಈ 'ಧರ್ಮದೇಟು'. ಕರಾವಳಿ ಕನ್ನಡದಲ್ಲಿ ಏನನ್ನಾದರೂ 'ಧರ್ಮಕ್ಕೆ ಕೊಡುವುದು' ಅಂದರೆ ಫ್ರೀಯಾಗಿ ಕೊಡುವುದು ಎಂದು ಅರ್ಥ. ಕುಂದಾಪುರದಲ್ಲಿ ಮೊನ್ನೆ ವಿನಾಕಾರಣ ಹೊಡೆತ ತಿಂದ ಮುಸ್ಲಿಮರಿಗೆ ಹೀಗೆ 'ಧರ್ಮಕ್ಕೆ' ಪೆಟ್ಟು ಸಿಕ್ಕಿತು. ಹಿಂದೂ ಧರ್ಮರಕ್ಷಣೆಗಾಗಿಯೇ ಅವರಿಗೆ ಈ ಹೊಡೆತ ಬಿದ್ದಿತು ಎನ್ನುವುದು ಕೂಡ ಅಷ್ಟೇ ಸತ್ಯ. ಆ ದೃಷ್ಟಿಯಿಂದ ನೋಡಿದರೂ ಇದು 'ಧರ್ಮದೇಟು'. ಕುಂದಾಪುರದ ಕೈಪಾಡಿ ಎಂಬಲ್ಲಿ ಅಕ್ಟೋಬರ್ 17ರ ಗುರುವಾರ ಸಂಜೆ ಅಲ್ಲಿಗೆ ಸಮೀಪ ಹೊಳೆಯಾಚೆಯ ಕೋಡಿಯ ಬಶೀರ್ (36) ಮತ್ತು ಬಾತಿಶ್‌ರಿಗೆ (30) ಹಿಂದೂ ಜಾಗರಣಾ ವೇದಿಕೆ ಎಂದು ಕೆಲವರು, ಬಜರಂಗ ದಳ ಎಂದು ಇನ್ನು ಕೆಲವರು ಹೇಳುವ ಸಂಘಟನೆಗೆ ಸೇರಿದ ಯುವಕರ ಗುಂಪೊಂದು ಹಲ್ಲೆ ನಡೆಸಿದ್ದು ಅವರು ಕುಂದಾಪುರದ ವಿನಯ ಆಸ್ಪತ್ರೆಗೆ ಅಡ್ಮಿಟ್ ಆಗಿದ್ದಾರೆ. ಬಶೀರ್ ಅವರ ತಲೆಗೆ ಬಲವಾದ ಹೊಡೆತ ಬಿದ್ದಿದೆ. ಬಾತಿಶ್‌ರ ಹೊಟ್ಟೆಗೆ ಏಟು ಬಿದ್ದಿದ್ದು, ಎರಡು ದಿನಗಳ ನಂತರವೂ ಅವರು ವಾಂತಿ ಮಾಡಿಕೊಳ್ಳುತ್ತಿದ್ದರು.

ಅವರಿಬ್ಬರ ಮೇಲೆ ನಡೆದ ಈ ಹಲ್ಲೆಗೆ ಕಾರಣವಾದದ್ದು ಕೈಪಾಡಿಯಲ್ಲಿ ಹೊಳೆದಂಡೆಯ ಸಮೀಪ ಕಟ್ಟಿದ್ದ ಒಂದು ಕೋಣ. ಕೋಣ ಹೊಳೆಯ ಆಚೆ ದಡದ ಕೋಡಿಯಲ್ಲಿ ಗದ್ದೆ ಬೇಸಾಯ ಮಾಡಿಕೊಂಡಿರುವ ಮಹಮ್ಮದ್ ಸಾಹೇಬರದ್ದಾಗಿತ್ತು. ಕರಾವಳಿಯ ಮುಸ್ಲಿಮರಲ್ಲಿ ಸಾಕಷ್ಟು ಜನ ಹಳ್ಳಿಗಳಲ್ಲಿ ವಾಸಿಸುತ್ತಿದ್ದರೂ ಅವರಲ್ಲಿ ಹೆಚ್ಚಿನವರು ಮೀನುಗಾರಿಕೆ, ವ್ಯಾಪಾರ ಇತ್ಯಾದಿ ಕೃಷಿಯೇತರ ಉದ್ಯೋಗಗಳಲ್ಲಿ ತೊಡಗಿಕೊಂಡಿರುವವರು. ಬೇಸಾಯ ಮಾಡುವ ಮುಸ್ಲಿಮರು ಅಪರೂಪ. ಅಂತಹವರಲ್ಲಿ ಮಹಮ್ಮದ್‌ರೂ ಒಬ್ಬರು. ಕೋಡಿಯಲ್ಲಿ ಜನ ಅವರನ್ನು ಕರೆಯುವುದೇ ಗದ್ದೆ ಮೋನು ಎಂದು. ಮಹಮ್ಮದ್‌ರು ನಾಲ್ಕು ಮುಡಿ ಬತ್ತದ ಅಂದರೆ ಎರಡು ಎಕ್ರೆ ಗದ್ದೆಯ ಬಡ ಕೃಷಿಕ. ಆದರೆ ಅವರು ಒಂದು ಕಾಲಕ್ಕೆ ಕುಂದಾಪುರದಲ್ಲಿ ಆಗರ್ಭ ಶ್ರೀಮಂತರು ಎಂದು ಹೆಸರು ಮಾಡಿದ್ದ ಸೂಫಿ ಬ್ಯಾರಿಗಳ ವಂಶದವರು. ಈ ವಂಶದ ಇನ್ನೊಂದು ಕವಲಿನವರು ತಮ್ಮ ಪೂರ್ವಿಕರ ವ್ಯಾಪಾರ ವಹಿವಾಟುಗಳನ್ನು ಮುಂದುವರಿಸಿಕೊಂಡು ಬಂದಿದ್ದು ಕೋಡಿಯ ಪ್ರತಿಷ್ಠಿತ ಶಿಕ್ಷಣ ಸಂಸ್ಥೆ ಬ್ಯಾರೀಸ್ ಪಬ್ಲಿಕ್ ಸ್ಕೂಲ್‌ನ ಸ್ಥಾಪಕರೂ ಆಗಿದ್ದಾರೆ. ಮಹಮ್ಮದರಾದರೂ ಕೋಡಿಯಲ್ಲಿ ಎಲ್ಲರಿಗೂ ಬೇಕಾದವರೇ.

ಕಳೆದ .ಗುರುವಾರ ಬೆಳಗ್ಗೆ ಮಹಮ್ಮದರ ಕೋಣ, ಹಟ್ಟಿಯಿಂದ ಕುಣಿಕೆ ತಪ್ಪಿಸಿಕೊಂಡು ಓಡಿತು. ಬೆನ್ನಟ್ಟಿ ಬಂಧ ಯಾರ ಕೈಗೂ ಸಿಗದ ಕೋಣ ಅವರ ಮನೆಯಿಂದ ಸ್ವಲ್ಪ ದೂರದಲ್ಲಿರುವ ಹೊಳೆಗೆ- ಆಗ ಹೊಳೆಯಲ್ಲಿ ಭರತವಾದ್ದರಿಂದ (high tide) – ಈಸು ಬಿದ್ದು ಆಚೆ ದಡದ ಕೈಪಾಡಿಯ ಬೆಳೆದು ನಿಂತ ಬತ್ತದ ಪೈರಿನ ಗದ್ದೆಗಳಿಗೆ ನುಗ್ಗಿತು. ಗ್ರಾಮಸ್ಥರೊಬ್ಬರು ಕೋಣವನ್ನು ಹೇಗೋ ಹಿಡಿದು ಕೈಪಾಡಿಯ ಲೈನ್‌ಮನ್ ನರಸಿಂಹಣ್ಣ ಎಂಬವರ ಮನೆಯ ಸಮೀಪ ಮರವೊಂದಕ್ಕೆ ಕಟ್ಟಿ ಹಾಕಿದ್ದರು. ಕೋಣವನ್ನು ಬೆಳಗ್ಗೆಯಿಂದ ಅರಸುತ್ತಿದ್ದ ಮಹಮ್ಮದರಿಗೆ ವಿಷಯ ಗೊತ್ತಾಗಿ ಅವರು ಹೊಳೆ ದಾಟಿ ಕೈಪಾಡಿಗೆ ಬಂದರು. ನರಸಿಂಹಣ್ಣ ಮಹಮ್ಮದರಿಗೆ ತುಂಬಾ ಹಳೆಯ ಪರಿಚಯ. ಅವರ ಮನೆಯ ಬಳಿ ಕಟ್ಟಿದ್ದ ಕೋಣವನ್ನು ಎಳೆದುಕೊಂಡು ಹೋಗಲು ಮಹಮ್ಮದರು ಎಷ್ಟು ಪ್ರಯತ್ನ ಮಾಡಿದರೂ ಕೋಣ ಬರಲಿಲ್ಲ, ಯಾರನ್ನೂ ಅದು ಹತ್ತಿರಕ್ಕೂ ಬಿಟ್ಟುಕೊಳ್ಳುತ್ತಿರಲಿಲ್ಲ. ಅದಕ್ಕೆ ಏನೋ ಗಾಳಿ ಬಡಿದಿದೆ ಎಂದು ಭಾವಿಸಿ, ಮಹಮ್ಮದರು ನರಸಿಂಹಣ್ಣನವರಿಂದ ಒಂದು ತೆಂಗಿನಕಾಯಿ ಇಸಿದು ಕೊಂಡು ಊರಿನ ಇತರ ರೈತರು ಮಾಡುವಂತೆ ಜಟ್ಟಿಗ ದೈವಕ್ಕೆ ಅಲ್ಲೇ ಒಡೆದರು. ಆಗಲೂ ಕೋಣ ಸೆಟೆದುಕೊಂಡೇ ನಿಂತಿತು. ಮಹಮ್ಮದರು ನರಸಿಂಹಣ್ಣನಿಂದಲೇ ಒಂದು ಹಗ್ಗ ಇಸಿದುಕೊಂಡು ಕೋಣಕ್ಕೆ ಮೂಗುದಾರ ಹಾಕಿ, ಅದನ್ನು ಒಯ್ಯಲು ಇನ್ನೂ ಇಬ್ಬರನ್ನು ಕರೆತರುವುದಕ್ಕೆ ಕೋಡಿಗೆ ವಾಪಸ್ಸಾದರು. ತಮ್ಮ ಸಂಬಂಧಿಕರೇ ಆಗಿದ್ದ ಕೋಡಿಯ ಬಶೀರ್ ಮತ್ತು ಬಾತಿಶ್‌ರ ಜೊತೆ ಅವರು ಕೈಪಾಡಿಗೆ ಮರಳಿ ಬಂದಾಗ ಸೂರ್ಯ ಕಂತುವುದಕ್ಕಾಗಿತ್ತು. ಆ ಹೊತ್ತಿನಲ್ಲಿ ಕೋಣವನ್ನು ದೋಣಿಯಲ್ಲಿ ಸಾಗಿಸುವುದಕ್ಕೆ ಸಾಧ್ಯವಿರಲಿಲ್ಲ; ಹೊಳೆಯಲ್ಲಿ ಇಳಿತ (low tide) ಪ್ರಾರಂಭವಾಗಿದ್ದು ದೋಣಿ ನೆಲಕಚ್ಚುತ್ತಿತ್ತು, ಕೋಣವನ್ನು ನಡೆಸಿಕೊಂಡು ಹೋಗಲು ಅಸಾಧ್ಯವೆನ್ನಿಸುವಷ್ಟು ಕೆಸರು ಹೊಳೆಯ ದಡದಲ್ಲಿ ಇತ್ತು. ಮಹಮ್ಮದರು, ಅವರ ಜೊತೆ ಬಂದಿದ್ದ ಬಶೀರ್ ಮತ್ತು ಬಾತಿಶ್‌ರ ಜೊತೆ ಮುಂದೆ ಏನು ಮಾಡುವುದು ಎಂದು ಯೋಚಿಸುತ್ತಿರಬೇಕಾದರೆ ಕೈಪಾಡಿಯಲ್ಲಿ 'ಮೂವರು ಮುಸ್ಲಿಮರು ಕೋಣ ಸಾಗಿಸುತ್ತಿದ್ದಾರೆ' ಎಂಬ ಸುದ್ದಿ ಹಬ್ಬಿತು. ಮಹಮ್ಮದರೇ ಹೇಳಿದಂತೆ ಮೊದಲಿಗೆ ಇಬ್ಬರು ಅವರ ಬಳಿ ಬಂದು ಕೋಣ ಎಲ್ಲಿಂದ ತಂದದ್ದು, ಎಲ್ಲಿಗೆ ಸಾಗಿಸುವುದಕ್ಕೆ ಎಂದು ಮುಂತಾಗಿ ಜಬರ್ದಸ್ತು ಮಾಡತೊಡಗಿದರು. ಮಹಮ್ಮದರು ತಾಳ್ಮೆಯಲ್ಲಿ ಅವರಿಗೆ ವಿವರಣೆ ನೀಡುತ್ತಿದ್ದ ಹಾಗೆಯೇ ಮೊಬೈಲಿನಿಂದ ಮೊಬೈಲಿಗೆ ಮೆಸೇಜು ಹರಿದು ಅರ್ಧತಾಸಿನೊಳಗೆ ಸಮೀಪದ ಕೋಟೇಶ್ವರ, ಅಂಕದ ಕಟ್ಟೆ ಮುಂತಾದೆಡೆಗಳಿಂದ ನೂರಾರು ಯುವಕರು ಬೈಕು ಇತ್ಯಾದಿಗಳಲ್ಲಿ ಧಾವಿಸಿ ಬಂದರು. ಅಷ್ಟು ಹೊತ್ತಿಗೆ, ಈ ಗುಂಪಿನವರೇ ಮುಂದಾಗಿ ತಿಳಿಸಿಯೋ ಅಥವಾ ಕೈಪಾಡಿಯ ಗ್ರಾಮಸ್ಥರೊಬ್ಬರು ಕರೆ ಮಾಡಿಯೋ ಕುಂದಾಪುರ ಪೊಲೀಸು ಠಾಣೆಯ ಮೂವರು ಸಿಬ್ಬಂದಿಗಳು ಸಹ - ಒಬ್ಬರು ಯೂನಿಫಾರ್ಮಿನಲ್ಲಿ, ಇಬ್ಬರು ಮುಫ್ತಿಯಲ್ಲಿ - ಹಾಜರಾದರು. ನರಸಿಂಹಣ್ಣ ಮತ್ತು ಇತರ ಹಲವು ಗ್ರಾಮಸ್ಥರು, ಅಲ್ಲಿ ಸೇರಿದವರಿಗೆ 'ಹೊಡೆಯಬೇಡಿ, ಇವರು ಕೋಡಿಯವರು, ನಮಗೆ ಗೊತ್ತಿರುವವರು, ಕೋಣ ಇವರದ್ದೇ; ಇವರು ಸಾಗುವಳಿದಾರರು' ಎಂದು ಸಾರಿ ಸಾರಿ ಹೇಳಿದರೂ ಗುಂಪು ತನ್ನ ಕೆಲಸ ಪ್ರಾರಂಭಿಸಿಯೇ ಬಿಟ್ಟಿತು. ಮಹಮ್ಮದರು ಯಾರು ಏನು ಎಂದು ಚೆನ್ನಾಗಿ ಗೊತ್ತಿದ್ದ ಹಲವರು ಆ ಗುಂಪಿನಲ್ಲಿದ್ದರು. ಅವರು ಸಹ ಹಲ್ಲೆಗೆ ಕೈಜೋಡಿಸಿದ್ದರು. ಗುಂಪು ಮಹಮ್ಮದ್, ಬಶೀರ್ ಮತ್ತು ಬಾತಿಶ್‌ರನ್ನು ಕೋಣ ಕಟ್ಟಿದ ಜಾಗದಿಂದ, ಕೈಗೆ ಸಿಕ್ಕ ತೆಂಗಿನ ಸೋಟೆ, ಬಡಿಗೆ ಮುಂತಾದ್ದರಿಂದ ಹೊಡೆಯುತ್ತ ಬಾಯಿಗೆ ಬಂದಹಾಗೆ ಬೈಯುತ್ತ ನರಸಿಂಹಣ್ಣನ ಮನೆಯ ಅಂಗಳದವರೆಗೂ ದೂಡಿಕೊಂಡು ಬಂತು. ನರಸಿಂಹಣ್ಣನ ಜೊತೆ ಅವರ ಹೆಂಡತಿ ಸಹ ಈ ಯುವಕರಿಗೆ "ಅವರು ನಮಗೆ ಗೊತ್ತಿರುವವರು; ಹೊಡೆಯಬೇಡಿ" ಎಂದು ಗೋಗರೆದರಂತೆ. ಮಹಮ್ಮದರು ಹೇಳುವ ಪ್ರಕಾರ ಆ ಗುಂಪಿನಲ್ಲಿ ಐವತ್ತು ಅರವತ್ತು ಯುವಕರಿದ್ದರು; ಆದರೆ ತನ್ನ ಹೆಸರು ಹೇಳಲು ಇಚ್ಛಿಸದ ಕೈಪಾಡಿಯ ಗೃಹಸ್ಥರೊಬ್ಬರು ಹೇಳುವ ಪ್ರಕಾರ ಅಲ್ಲಿ ನೂರಾರು ಜನ ಸೇರಿದ್ದರು. ಅವರು ಸಹ ಆ ಯುವಕರಿಗೆ ಮಹಮ್ಮದರ ಗುರುತು ಪರಿಚಯ ತಿಳಿಸಿದರಂತೆ. 'ಗುಂಪಿನಲ್ಲಿದ್ದವರು ಯಾರ ಮಾತನ್ನೂ ಕೇಳುವ ಸ್ಥಿತಿಯಲ್ಲೇ ಇರಲಿಲ್ಲ' ಎಂದು ಅವರು ನನ್ನೊಡನೆ ಹೇಳಿದರು.

ಕರಾವಳಿಯ ಊರುಗಳಲ್ಲಿ ಜಾನುವಾರುಗಳ ಜೊತೆ ಮುಸ್ಲಿಮರು ಕಂಡು ಬಂದರೆ, ಅವರು ಅವನ್ನು ಕದ್ದು ಕಸಾಯಿಖಾನೆಗೆ ಒಯ್ಯುತ್ತಿದ್ದಾರೆ ಎಂದು ಭಾವಿಸಿ ಗುಂಪು ಹಲ್ಲೆ ನಡೆಸುವುದು ಒಂದು ಮಾಮೂಲು ಸಂಗತಿಯಾಗಿ ಬಿಟ್ಟಿದೆ. ತಡರಾತ್ರಿಯ ಹೊತ್ತು ಜಾನುವಾರು ಸಾಗಿಸುವ ವಾಹನಗಳನ್ನು ಬೆನ್ನಟ್ಟಿ ಹೋಗುವುದು, ಅವುಗಳು ಅಪಘಾತಕ್ಕೆ ಈಡಾಗುವುದು, ವಾಹನಗಳ ಒಳಗಿದ್ದವರಿಗೆ ಪುಡ್ಡಿ ಹೋಗುವ ಹಾಗೆ ಹೊಡೆದು ಅವರ ಬಳಿ ಇದ್ದುದನ್ನೆಲ್ಲ ದೋಚುವುದು ಮುಂತಾದ್ದು ಸಹ ನಿರಂತರವಾಗಿ ನಡೆದಿದೆ. ಆದರೆ ಇವು ಹೆಚ್ಚಾಗಿ ಪರಸ್ಪರ ಗುರುತು ಪರಿಚಯವಿಲ್ಲದ ಮುಸ್ಲಿಮರ ಮೇಲೆ ನಡೆಯುವ ದಾಳಿಗಳು. ಆದರೆ ಕುಂದಾಪುರದಲ್ಲಿ ಮೊನ್ನೆ ನಡೆದ ಘಟನೆ ಈ ದೃಷ್ಟಿಯಿಂದ ವಿಲಕ್ಷಣವಾಗಿದೆ. ಕೋಮು ಹಿಂಸೆ ಮತ್ತು ದ್ವೇಷದ ರಾಜಕೀಯ ನಗರಗಳ ವಿದ್ಯಮಾನವಾಗಿದ್ದು ನಮ್ಮ ಹಳ್ಳಿಗಳು ಅದರಿಂದ ಮುಕ್ತವಾಗಿದೆ ಎಂಬ ಬುದ್ಧಿಜೀವಿಗಳಿಗೆ ಪ್ರಿಯವಾದ ಸಿದ್ಧಾಂತ ಸುಳ್ಳು ಎಂಬುದು ಭಾರತದ ಹಲವೆಡೆಗಳಂತೆ ದಕ್ಷಿಣ ಕನ್ನಡದಲ್ಲೂ ಬಹಳ ಹಿಂದೆಯೇ ಸಾಬೀತಾಗಿದೆ. ಕುಂದಾಪುರ ಕೈಪಾಡಿಯಲ್ಲಿ ಮೊನ್ನೆ ನಡೆದ ಘಟನೆ ಈ ಮಾತಿಗೆ ಇತ್ತೀಚಿನ ನಿದರ್ಶನ. ಮುಸ್ಲಿಮರ ಬಗೆಗಿನ ದ್ವೇಷ ಮತ್ತು ಹಿಂಸೆಯ ಪ್ರಚೋದನೆ ಬಿಜೆಪಿಯ ನೇರ ಅಸ್ತ್ರಗಳಾದರೂ, ಆ ಸಮುದಾಯದ ಬಗ್ಗೆ ಸಂದೇಹ, ಉದಾಸೀನ ಮತ್ತು ಅವರು ಪೂರ್ಣ ಪ್ರಮಾಣದ ಪ್ರಜೆಗಳಲ್ಲ ಎಂಬ ಭಾವನೆ, ಎಲ್ಲ ರಾಜಕೀಯ ಪಕ್ಷ ಸಾರ್ವಜನಿಕ ಸಂಘ ಸಂಸ್ಥೆ ಮತ್ತು ಮಾಧ್ಯಮಗಳಲ್ಲೂ ಸಾರ್ವತ್ರಿಕವಾಗಿ ಹಬ್ಬಿದೆ. ಮೊನ್ನೆಯ ಈ ಘಟನೆಯಲ್ಲಿ ಸಹ, ಸಂತ್ರಸ್ತರಿಗೆ ಸಾಂತ್ವನ ಹೇಳಲು ಲೋಕಸಭಾ ಸದಸ್ಯ ಜಯಪ್ರಕಾಶ ಹೆಗ್ಡೆ ಒಬ್ಬರನ್ನು ಬಿಟ್ಟು ಯಾವ ಸ್ಥಳೀಯ ನಾಯಕನೂ ಮುಂದೆ ಬಂದಿಲ್ಲ, ಕೋಡಿಯ ಮುಸ್ಲಿಮರು- ಬರೇ ಮುಸ್ಲಿಮರು ಮಾತ್ರ- ಈ ಗುಂಪು ಹಲ್ಲೆಯ ವಿರುದ್ಧ ಪ್ರತಿಭಟನೆ ನಡೆಸಿದರು. 'ಬಿಜೆಪಿಯವರಾದರೂ ಸಜ್ಜನರು' ಎಂದು ಹೆಸರು ಮಾಡಿದ್ದ ಶಾಸಕ ಹಾಲಾಡಿ ಶ್ರೀನಿವಾಸ ಶೆಟ್ಟರು ಈಗ ಬಿಜೆಪಿ ತೊರೆದಿದ್ದಾರೆ; ಆದರೂ ಸಜ್ಜನರಾಗಿಯೇ ಉಳಿದಿದ್ದಾರೆ. ನಮ್ಮಲ್ಲಿ ಸಜ್ಜನರು ಎಂದರೆ ಏನು ಎಂದು ಗೊತ್ತಲ್ಲ? ಅವರು ಒಳ್ಳೆಯವರ ಬಗ್ಗೆ ಒಳ್ಳೆಯ ಮಾತು ಆಡುವವರು; ಕೆಟ್ಟವರ ಬಗ್ಗೆಯೂ ಒಳ್ಳೆಯ ಮಾತೇ ಆಡುವವರು; ಮತ್ತು ಅಪ್ರಿಯ ಸತ್ಯವನ್ನು ಯಾವತ್ತೂ ಹೇಳದವರು. ಮೊನ್ನೆ ಕೈಪಾಡಿಯಲ್ಲಿ ಮುಸ್ಲಿಮರಿಗೆ ಥಳಿಸಿದ ಗುಂಪಿನಲ್ಲಿ ಈಗಲೂ ಶಾಸಕರ ನಿಕಟವರ್ತಿಗಳೇ ಆಗಿ ಉಳಿದ ಕೆಲವು ಬಜರಂಗಿಗಳಿದ್ದರು ಎಂದು ಸ್ಥಳದಲ್ಲಿದ್ದವರು ಹೇಳುತ್ತಾರೆ. ಶಾಸಕರು ಸಜ್ಜನರು. ಅವರು ಅದನ್ನು ಹೊಟ್ಟೆಗೆ ಹಾಕಿಕೊಳ್ಳುತ್ತಾರೆ. ಅಥವಾ ಅವರು ಸಹ ಭಜರಂಗಿಗಳ ಹಾಗೆ ಮುಸ್ಲಿಮರು ಯಾಕೆ ಜಾನುವಾರುಗಳ ಜೊತೆ ಕಾಣಿಸಿಕೊಳ್ಳಬೇಕು ಎಂದು ಪ್ರಶ್ನಿಸುವವರೋ?

■ ಜಿ.ರಾಜಶೇಖರ್



ಖಡ್ಗ ದೀಕ್ಷೆ ವಿರುದ್ಧ ಕರ್ನಾಟಕ ಕೋಮು ಸೌಹಾರ್ದ ವೇದಿಕೆಯ ಪ್ರತಿಭಟನೆ


ಈ ಕುರಿತಂತೆ ಇತ್ತೀಚೆಗೆ ದಿ ಹಿಂದೂ ಪತ್ರಿಕೆಯ ವರದಿಗಾರರೊಬ್ಬರು ಪೊಲೀಸ್ ಅಧಿಕಾರಿಗಳನ್ನು ಸಂಪರ್ಕಿಸಿ ವಿಷಯ ಪ್ರಸ್ತಾಪಿಸಿದಾಗ "ಅವರ ಮೇಲೆ ಕ್ರಮ ಕೈಗೊಳ್ಳಲು ನಮ್ಮಲ್ಲಿ ಎವಿಡೆನ್ಸ್ ಇಲ್ಲ" ಎಂದಿದ್ದಾರೆ. ಹೀಗೊಂದು ದೂರು ದಾಖಲಾಗಿರುವಾಗಲೂ ಅವರನ್ನು ಈ ಕುರಿತಂತೆ ವಿಚಾರಿಸಲೂ ಇವರಿಗೆ ಎವಿಡೆನ್ಸ್ ಯಾಕೆ? ಯಾವ ಎವಿಡೆನ್ಸೂ ಇಲ್ಲದೇ ಅಮಾಯಕ ಮುಸ್ಲಿಂ ತರುಣರನ್ನು ಭಯೋತ್ಪಾದನೆ ಆರೋಪದಲ್ಲಿ ಬಂಧಿಸಿ ಚಿತ್ರಹಿಂಸೆ ನೀಡುವಾಗ ಇವರಿಗೆ ಯಾವ ಕಾನೂನೂ ತೊಡಕಾಗುವುದಿಲ್ಲ, ನಕ್ಸಲಿಸಂ ನೆಪದಲ್ಲಿ ಅಮಾಯಕ ಗಿರಿಜನರ ಜೀವ ಹಿಂಡಲು ಇವರಿಗೆ ಯಾವ ಎವಿಡೆನ್ಸೂ ಬೇಕಾಗಿಲ್ಲ, ಪ್ರಣವಾನಂದ ರಾಮಸ್ವಾಮಿ ಮತ್ತಾತನ ಪಟಾಲಂ ಮುದ್ರಣ ಮತ್ತು ದೃಶ್ಯ ಮಾಧ್ಯಮಗಳಲ್ಲಿ ಮತ್ತೆ ಮತ್ತೆ ಖಡ್ಗ ದೀಕ್ಷೆ ಮಾಡಿಯೇ ತೀರುತ್ತೇವೆ ಎಂದು ಬಹಿರಂಗವಾಗಿ ಮಾತನಾಡುವುದು ಇವರಿಗೆ ಎವಿಡೆನ್ಸ್ ಆಗದು.

'ದಿ ಹಿಂದೂ ಪತ್ರಿಕೆಯ ಅದೇ ವರದಿಗಾರ ಮಿತ್ರರು ಮಂಗಳೂರು ಬಂದರು ಠಾಣೆಯ ಅಧಿಕಾರಿಗಳನ್ನು ಸಂಪರ್ಕಿಸಿದಾಗ "ಆತ ಖಡ್ಗ ದೀಕ್ಷೆ ಮಾಡುತ್ತೇನೆ ಎಂದಿರುವ ವಿಡಿಯೋ ಕ್ಲಿಪ್ಪಿಂಗ್ ನಮಗೆ ಸಿಕ್ಕಿಲ್ಲ" ಎಂದಿದ್ದಾರೆ. ಅದೇ ಪತ್ರಕರ್ತ ಮಿತ್ರ ಪುನಃ ಪ್ರಣವಾನಂದ ರಾಮಸ್ವಾಮಿ ಎಂಬ ಗಾಂಧಿ ಹಂತಕನ ಪಳಿಯನ್ನು ಸಂಪರ್ಕಿಸಿ ನೀವು ಎಲ್ಲಿ ಖಡ್ಗ ದೀಕ್ಷೆ ಮಾಡುತ್ತೀರಿ ಎಂದು ಪ್ರಶ್ನಿಸಿದಾಗ "ನಾವು ರಹಸ್ಯವಾಗಿ ಈಗಾಗಲೇ ನಿಗದಿಯಾಗಿರುವ 5 ಕಡೆಗಳಲ್ಲಿ 5,000 ಯುವಕರಿಗೆ ಖಡ್ಗ ದೀಕ್ಷೆ ಮಾಡಿಯೇ ತೀರುತ್ತೇನೆ" ಎಂದು ಮತ್ತೆ ಕಾನೂನಿಗೆ ಸವಾಲೆಸೆದಿದ್ದಾನೆ. ಇಷ್ಟಾಗಿಯೂ ಪೊಲೀಸರಿಗೆ ಆತನ ಕೂದಲು ಕೊಂಕಿಸಲು ಸಾಧ್ಯವಾಗಿಲ್ಲ.

ಪ್ರಗತಿಪರ ಸಂಘಟನೆಯವರು ಮಾಡುವ ಪ್ರತಿಯೊಂದು ಪತ್ರಿಕಾಗೋಷ್ಠಿಗೂ ಪ್ರತಿಯೊಂದು ಕಾರ್ಯಕ್ರಮಕ್ಕೂ ಇಂಟೆಲಿಜನ್ಸ್ ಬ್ಯೂರೋದವರು ಹಾಜರಾಗಿ ಪದಪದಗಳನ್ನೂ ತಪ್ಪದೇ ದಾಖಲಿಸುತ್ತಾರೆ. ಪತ್ರಿಕಾಗೋಷ್ಠಿಗಿಂತ ಮುಂಚೆ ಅಥವಾ ನಂತರ ನಾವು ಅನೌಪಚಾರಿಕವಾಗಿ ಆಡುವ ಮಾತುಗಳನ್ನೂ ರೆಕಾರ್ಡ್ ಮಾಡಿಕೊಳ್ಳುತ್ತಾರೆ. ಈ ಖಡ್ಗವಾದಿಗಳ ಪತ್ರಿಕಾಗೋಷ್ಠಿಗಳಾಗುವಾಗ ಈ ಐ.ಬಿ. ಮಂದಿಗಳು ಎಲ್ಲಿದ್ದರು?


ಕೋಮುವಾದಿ ಬಿಜೆಪಿ ತೊಲಗಿ ಕಾಂಗ್ರೆಸ್‌ನ ಸಮಾಜವಾದಿ ಸಿದ್ದರಾಮಯ್ಯ ಅಧಿಕಾರಕ್ಕೆ ಬಂದರೂ ಪರಿಸ್ಥಿತಿಯಲ್ಲಿ ಬದಲಾವಣೆಯೇನೂ ಆಗಿಲ್ಲ. ಎಲ್ಲಿಯವರೆಗೆ ಪೊಲೀಸ್ ಇಲಾಖೆ ಸಂಸ್ಕರಣೆಗೊಳ್ಳುವುದಿಲ್ಲವೋ ಅಲ್ಲಿಯವರೆಗೆ ಪರಿಸ್ಥಿತಿಯಲ್ಲಿ ಬದಲಾವಣೆ ಬಯಸುವುದೇ ಮೂರ್ಖತನ. ಮಂಗಳೂರಿನ 'ಪ್ರಖ್ಯಾತ' ಕೋಮುವಾದಿ ಪೊಲೀಸನೊಬ್ಬನನ್ನು ಆರೆಸ್ಸೆಸ್ಸಿನ ಆಣತಿಯ ಮೇರೆಗೆ ಮಂಗಳೂರಿನಲ್ಲಿ ಉಳಿಸಿಕೊಳ್ಳಲು ಕಾಂಗ್ರೆಸ್‌ನ ಮಹಾಮಂತ್ರಿಯೊಬ್ಬರು ಮುಂದಾಗಿರುವುದು ಈಗ ಗುಟ್ಟಾಗೇನೂ ಉಳಿದಿಲ್ಲ. ಆರೆಸ್ಸೆಸ್ಸಿನ ಗುರುಗಳು ಕಾಂಗ್ರೆಸ್ಸಿಗರಿಗೂ ರಾಜಗುರುಗಳಾಗಿರುವುದು ದುರಂತ. ಇದು ಹೀಗೆ ಮುಂದುವರಿದರೆ ಜನರಿಗೆ ಮುಂದೆ ಆಯ್ಕೆಗಳೇ ಉಳಿಯುವುದಿಲ್ಲ ಎಂಬುವುದನ್ನು ಅಧಿಕಾರಸ್ಥ ಕಾಂಗ್ರೆಸ್ಸಿಗರು ಎಷ್ಟು ಬೇಗ ತಿಳಿದುಕೊಳ್ಳುತ್ತಾರೋ ಅಷ್ಟು ಒಳಿತು.

■ ಇಸ್ಮತ್ ಫಜೀರ್



ಏಕವಚನದ ಠೇಂಕಾರ-ಮೇಲ್ಜಾತಿ ದುರಹಂಕಾರ

ಯಡಿಯೂರಪ್ಪ, ನಿನ್ನ ನಾಲಿಗೆ ಬಿಗಿ ಹಿಡಿಯಪ್ಪ



"ಏಯ್ ಸಿದ್ದರಾಮಯ್ಯ, ನೀನು ಶಿವಮೊಗ್ಗಕ್ಕೆ ಬಂದು ಯಡಿಯೂರಪ್ಪ ಭ್ರಷ್ಟ ಅಂತ ಹೇಳ್ತೀಯಾ, ಅಹಿಂದ ಹೆಸರು ಹೇಳಿಕೊಂಡು ನಾಟಕ ಆಡ್ತೀಯಾ...." ನಿನ್ನ ಸಿಎಂ ಕುರ್ಚಿಯಿಂದ ಕೆಳಗಿಳಿಸೋ ತನಕ ನಾನು ಬಿಡಲ್ಲ...."

-ಯಾವುದೋ ಪೌರಾಣಿಕ ನಾಟಕದ ಡೈಲಾಗ್‌ನಂತೆ ಭಾಸವಾಗುವ ಈ ಮಾತುಗಳನ್ನಾಡಿರುವುದು ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ.

ಕಳೆದ ವಾರ ಸಿದ್ದರಾಮಯ್ಯನವರು ಶಿವಮೊಗ್ಗೆಗೆ ಹೋಗಿದ್ದಾಗ ಪ್ರಾಸಂಗಿಕವಾಗಿ ಮಾತನಾಡುತ್ತಾ "ಶಿವಮೊಗ್ಗದ ಅಭಿವೃದ್ಧಿಯ ಹೆಸರಿನಲ್ಲಿ ಯಡಿಯೂರಪ್ಪ ಮತ್ತು ಈಶ್ವರಪ್ಪ ಸಾವಿರಾರು ಕೋಟಿ ಲೂಟಿ ಹೊಡೆದಿದ್ದಾರೆ. ಈ ಊರಿನಲ್ಲಿ ಕಣ್ಣಿಗೆ ಕಂಡ ಸೈಟು-ಬಿಲ್ಡಿಂಗ್‌ಗಳನ್ನು ಖರೀದಿಸಲು ಪೈಪೋಟಿ ನಡೆಸುತ್ತಿದ್ದರು. ಹಾಗಾಗಿ ಯಡಿಯೂರಪ್ಪ ಜೈಲಿಗೂ ಹೋಗಬೇಕಾಯಿತು" ಅಂದಿದ್ದರು.

ವಾಸ್ತವವಾಗಿ ಇದು ಹಳೆಯ ಕತೆ. ಹಾಗೆ ನೋಡಿದರೆ ಇದೇ ಮಾತುಗಳನ್ನು ಯಡ್ಡಿ ಈಶ್ವರಪ್ಪನಿಗೂ, ಯಡ್ಡಿ ಜೈಲಿಗೆ ಹೋದಾಗ ಈಶ್ವರಪ್ಪ ಯಡ್ಡಿಗೂ ಹೇಳಿದ ಮಾತುಗಳೇ ಆಗಿವೆ. ಅಷ್ಟೇ ಅಲ್ಲ ರಾಜ್ಯ ಬಿಜೆಪಿ ನಾಯಕರು 'ಯಡಿಯೂರಪ್ಪ ಭ್ರಷ್ಟ' ಅಂತಲೇ ರಾಜ್ಯದೆಲ್ಲೆಡೆ ಡಂಗೂರ ಸಾರಿಕೊಂಡು ಬಂದಿದ್ದರು. ಅದೇ ಕಾರಣಕ್ಕಾಗಿ ಮೊನ್ನಿನ ಅಸೆಂಬ್ಲಿ ಎಲೆಕ್ಷನ್‌ನಲ್ಲೂ ರಾಜ್ಯದ ಜನತೆ ಕೆಜೆಪಿ-ಬಿಜೆಪಿಗಳೆರಡನ್ನೂ ಸೋಲಿಸಿದ್ದರು. ವಸ್ತುಸ್ಥಿತಿ ಹೀಗಿರುವಾಗ ಸಿದ್ದರಾಮಯ್ಯನವರ ಮಾತಿಗೆ ಯಡ್ಡಿ ಇಷ್ಟೊಂದು ಉರಿದುಕೊಂಡು ಗಂಟಲು ಹರಿದುಕೊಳ್ಳುವ ಕಾರಣವೇನಿತ್ತು?

ಯಡಿಯೂರಪ್ಪನಿಗಿರುವ ಮೇಲ್ಜಾತಿ ದುರಹಂಕಾರ ಇದಕ್ಕೊಂದು ಕಾರಣವಾಗಿದೆ. ಸಾಮಾಜಿಕವಾಗಿ ಉನ್ನತ ಜಾತಿಯ ಸ್ಥಾನ ಹೊಂದಿರುವ ಆ ಮೇಲ್ಜಾತಿ ಪಾಳೇಗಾರಿಕೆಯ ದೌಲತ್ತು ಮೈಗೂಡಿಸಿಕೊಂಡಿರುವ ಯಡಿಯೂರಪ್ಪನವರಿಗೆ ರಾಜಕೀಯ ಅಧಿಕಾರ ಇರಲಿ ಅಥವಾ ಇಲ್ಲದಿರಲಿ ತನ್ನ ಮೇಲ್ಜಾತಿಯ ಸಾಮಾಜಿಕ ಅಧಿಕಾರ ಹೋಗಿಲ್ಲವೆಂಬ ಭಂಡತನ ಉಳಿದೇ ಇರುತ್ತದೆ. ಹಾಗಾಗಿ ಅವರು ಶೂದ್ರರಾಗಿರುವ ಕಾರಣ ಸಿದ್ದರಾಮಯ್ಯ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯಾಗಿದ್ದಾಗಲೂ ಅವರನ್ನು ಏಕವಚನದಲ್ಲಿ ಗದರಿಸುವ ಧಾರ್ಷ್ಟ್ಯ ಯಡ್ಡಿಗೆ ಬರುತ್ತದೆ. ಇಲ್ಲಿ ಗಮನಿಸಬೇಕಾದ ಇನ್ನೊಂದು ವಿಚಾರವಿದೆ.

ಬಿಜೆಪಿಯ ಅನಂತ್‌ಕುಮಾರ್ ಬಿಟ್ಟೂ ಬಿಡದಂತೆ ಯಡ್ಡಿಗೆ ಕಿರುಕುಳ ನೀಡುತ್ತಾ ಅವಕಾಶ ಸಿಕ್ಕಾಗೆಲ್ಲಾ ತುಳಿಯುತ್ತಾ, ಈಗ ಕೆಜೆಪಿ-ಬಿಜೆಪಿ ವಿಲೀನಕ್ಕೆ ಅಡ್ಡಿ ಮಾಡುತ್ತಾ ಯಡ್ಡಿ ಒಬ್ಬ ಭ್ರಷ್ಟ ಎಂದು ಅಡ್ವಾಣಿಗೆ ಚಾಡಿ ಹೇಳುತ್ತಾ ಇದ್ದರೂ, ಅದು ಯಡ್ಡಿಗೆ ತಿಳಿದಿದ್ದರೂ ಸಹ ಅನಂತಕುಮಾರ್ ಬಗ್ಗೆ ಯಡ್ಡಿ ಏಕವಚನದಲ್ಲಿ ಯಾವತ್ತು ಮಾತನಾಡಿಲ್ಲ!

ಯಾಕೆ?

ಅನಂತ್‌ಕುಮಾರ್ ಒಬ್ಬ ಬ್ರಾಹ್ಮಣ.


ಸಾಮಾಜಿಕವಾಗಿ ಯಡ್ಡಿಗಿಂತಲೂ ಮೇಲಿನ ಸ್ಥಾನದಲ್ಲಿ ಇರುವಾತ ಎಂದಿರಬಹುದೆ?

ಯಡ್ಡಿ ಹೀಗೆ ರಕ್ತದೊತ್ತಡ ಏರುಪೇರಾದಂತೆ ಚೀರಿಕೊಂಡಿದ್ದರ ಹಿಂದೆ ಕೆಲವು ರಾಜಕೀಯ ಕಾರಣಗಳು ಇವೆ.

ಅದು ಹತಾಶೆ.

ಅತಂತ್ರ ಕೆಜೆಪಿ-ಕುತಂತ್ರಿ ಬಿಜೆಪಿ

ಯಡಿಯೂರಪ್ಪ ಈಗ ತಮ್ಮ ಕೆಜೆಪಿ ಪಾರ್ಟಿಯನ್ನು ಉಳಿಸಿಕೊಂಡು, ಮುನ್ನಡೆಸುವ ಧೈರ್ಯವೂ ಇರದೆ, ಬಿಜೆಪಿಯೊಂದಿಗೆ ಸೇರಲು ಅವಕಾಶವೂ ಸಿಗದೆ ಅತಂತ್ರ ಪರಿಸ್ಥಿತಿಯಲ್ಲಿದ್ದಾರೆ. ಕಳೆದ ಮೇ ತಿಂಗಳಲ್ಲಿ ನಡೆದ ಅಸೆಂಬ್ಲಿ



ಎಲೆಕ್ಷನ್‌ನಲ್ಲಿ ತಾನೇ ಕಿಂಗ್‌ಮೇಕರ್ ಆಗುತ್ತೇನೆ ಎಂಬ ಭ್ರಮೆ ಯಡ್ಡಿಗಿತ್ತು, ಚಲಾವಣೆಯಾದ ಓಟುಗಳಲ್ಲಿ ಕೆಜೆಪಿಗೆ ಶೇ. 10 ರಷ್ಟು ಅಂದರೆ 30 ಲಕ್ಷದಷ್ಟು ಓಟು ಬಂದವಾದರೂ ಅದು ಗೆದ್ದ ಸೀಟಿನ ಲೆಕ್ಕಕ್ಕಿಳಿದಾಗ ಯಡ್ಡಿಗೆ ಸಿಕ್ಕಿದ್ದು ಜುಜುಬಿ ಆರು ಶಾಸಕ ಸ್ಥಾನಗಳು ಮಾತ್ರ. ಮತ್ತೊಂದೆಡೆ ಕಾಂಗ್ರೆಸ್‌ಗೆ ಸರ್ಕಾರ ರಚಿಸುವಷ್ಟು ಸರಳ ಬಹುಮತ ಸಿಕ್ಕಿತ್ತಾದ್ದರಿಂದ ಅತಂತ್ರ ವಿಧಾನಸಭೆ ಏರ್ಪಡಲಿಲ್ಲ, ಹಾಗಾಗಿ ಕೆಜೆಪಿಯ ಆರು ಸೀಟಿಗೆ, ಶ್ರೀರಾಮುಲುನ ನಾಲ್ಕು ಶಾಸಕರ ಸಂಖ್ಯೆಗೆ ಕಿಮ್ಮತ್ತೂ ಬರಲಿಲ್ಲ, ಅದರ ಬದಲಾಗಿ ಬಿಜೆಪಿ ಗೆಲ್ಲಬಹುದಾಗಿದ್ದ ಇನ್ನೂ ಇಪ್ಪತ್ತು ಕ್ಷೇತ್ರಗಳಲ್ಲಿ ತೊಡರುಗಾಲು ಹಾಕಿ ಸೋಲಿಸಿದ್ದೇ ಯಡ್ಡಿ-ರಾಮುಲು ಸಾಧನೆಯಾಯಿತಷ್ಟೇ.

ಇದಾದನಂತರ ನಡೆದ ವಿಧಾನ ಪರಿಷತ್ತಿನ ಚುನಾವಣೆಯಲ್ಲಿ ಮತ್ತು ಲೋಕಸಭಾ ಉಪ ಚುನಾವಣೆಯಲ್ಲಿ ಬಿಜೆಪಿ-ಕೆಜೆಪಿ-ಜೆಡಿಎಸ್ ಒಳಒಪ್ಪಂದ ಮಾಡಿಕೊಂಡು ಕದನ ನಡೆಸಿದರೂ ಯಾವ ಸಾಧನೆಯೂ ಆಗಲಿಲ್ಲ,

ಇದು ಯಡ್ಡಿಯನ್ನು ಇನ್ನಷ್ಟು ಹತಾಶೆಗೆ ದೂಡಿತ್ತು,

ಈ ನಡುವೆ ಮತ್ತೆ ಬಿಜೆಪಿಗೆ ಸೇರಲು ಯಡ್ಡಿ ದುಂಬಾಲು ಬಿದ್ದರಾದರೂ ಅದು ಸಲೀಸಾಗಿ ಆಗುತ್ತಿಲ್ಲ, ಯಡಿಯೂರಪ್ಪ ಭ್ರಷ್ಟಾಚಾರದ ನಡೆಸಿರುವುದರಿಂದ ಅದು ಮುಂದಿನ ಲೋಕಸಭಾ ಚುನಾವಣೆಯ ವೇಳೆ ಬಿಜೆಪಿಗೆ ತೊಡಕಾಗಬಹುದೆಂಬ ಆತಂಕ ದೆಹಲಿ ನಾಯಕರಲ್ಲಿದೆ. ಆದರೆ ಈ ಬಿಜೆಪಿಗಳು ಅದೆಂಥಾ ಕುತಂತ್ರಿಗಳೆಂದರೆ ಯಡ್ಡಿ ಹತ್ತಾರು ಕೋಟಿ ತಿಂದು ಸಿಕ್ಕಿಬಿದ್ದರೆ, ಅದೇ ಯಡ್ಡಿ ಮೂಲಕ ನೂರಾರು ಕೋಟಿ ತಿಂದ ಹಿಂದೂತ್ವವಾದಿಗಳ್ಯಾರು ಸಿಕ್ಕಿಬೀಳಲಿಲ್ಲ, ಕೋತಿ ತಾನು ಮೊಸರು ತಿಂದು ಮೇಕೆಯ ಬಾಯಿಗೆ ಒರೆಸಿದಂತೆ ಯಡ್ಡಿಯನ್ನು ಮಾತ್ರ ಸಿಕ್ಕಾಗಿಸಿ ಉಳಿದ ಭ್ರಷ್ಟ ಚೆಡ್ಡಿಗಳು ತಮ್ಮ 'ದೇಶಸೇವೆ' ಮುಂದುವರೆಸಲು ಹೊರಟಿದ್ದಾರೆ.

ಬಿಜೆಪಿಯ ರಾಷ್ಟ್ರ ನಾಯಕರಿಗೆ ಯಡ್ಡಿಯನ್ನು ಬಿಜೆಪಿಗೆ ಮತ್ತೆ ಸೇರಿಸಿಕೊಳ್ಳುವುದರಿಂದ ಆಗಬಹುದಾದ ಲಾಭ ಹಾಗೂ ನಷ್ಟಗಳ ಸ್ಪಷ್ಟ ಕಲ್ಪನೆ ಇದೆ. ಮುಂದಿನ ತಿಂಗಳು ನಡೆಯಲಿರುವ ದೆಹಲಿ, ಮಧ್ಯಪ್ರದೇಶ, ರಾಜಾಸ್ತಾನ ಹಾಗೂ ಛತ್ತೀಸಗಡ ವಿಧಾನಸಭಾ ಚುನಾವಣೆಗಳು ಮುಗಿಯುವ ತನಕವಾದರೂ ಅವರು ಯಡ್ಡಿಯನ್ನು ಕಾಯಿಸುತ್ತಾರೆ. ಆದರೆ ಈ ಮರುಸೇರ್ಪಡೆ ವಿಚಾರದಲ್ಲಿ ಬಿಜೆಪಿ ನಾಯಕರು ಯಡ್ಡಿಯೂರಪ್ಪ ಪೂರ್ತಿ ಮಂಡಿಯೂರಿ ಶರಣಾಗತಿ ತೋರುವಂತೆ ಮಾಡಿದ್ದಾರೆ.

'ನಾನು ಬಿಜೆಪಿ ಸೇರಲು ಸಿದ್ಧನೆಂದು ಯಡ್ಡಿ ಪದೇಪದೇ ಹೇಳಿದರೂ ಪ್ರತಿಕ್ರಿಯಿಸದೆ ಈಗ 'ಎನ್‌ಡಿಎ ಅಂಗ ಪಕ್ಷವಾಗಿ ಕೆಜೆಪಿಯನ್ನು ಪರಿಗಣಿಸಿ' ಎಂದು ಅಂಗಲಾಚಿ ಬೇಡಿದರೂ ಕ್ಯಾರೆ ಅನ್ನದೆ ಅವಮಾನ ಮಾಡುತ್ತಿದ್ದಾರೆ. ಕಾಲಕಸದಂತೆ ಕಾಣುತ್ತಿದ್ದಾರೆ. ಆದರೂ ಈ ಯಡಿಯೂರಪ್ಪ 'ಲೇಯ್ ಅನಂತ್‌ಕುಮಾರ್' ಅಂತಾ ಗರ್ಜಿಸಲಿಲ್ಲ, 'ಅವನ್ಯಾರೊ ಅಡ್ವಾಣಿ' ಅಂತ ಗೊಣಗಲೂ ಇಲ್ಲ.

ಬಿಜೆಪಿಯ ನಿಧಾನ ವಿಷ

ಯಡ್ಡಿಯನ್ನು ಮತ್ತೆ ಬಿಜೆಪಿಗೆ ಸೇರಿಸುವ ಅಥವಾ ಸೇರಿಸದಿರುವ ಬಗ್ಗೆ ಏನೊಂದು ಖಚಿತ ಅಭಿಪ್ರಾಯ ಹೇಳದಿರುವ ಬಿಜೆಪಿಯ ನಾಯಕರು ಸ್ಪಷ್ಟವಾಗಿ ಕಾಣುವಂತೆ ಒಂದು ತಂತ್ರ ಅನುಸರಿಸುತ್ತಿದ್ದಾರೆ.

ಅದು ನಿಧಾನ!

ಕಳೆದ ವರ್ಷ ಯಡ್ಡಿ ಬಿಜೆಪಿ ತ್ಯಜಿಸಿ ಕೆಜೆಪಿ ಪಕ್ಷ ಸ್ಥಾಪಿಸುವಾಗಲೂ ಬೇಕು ಬೇಡ ಏನನ್ನೂ ಖಚಿತವಾಗಿ ಹೇಳದೆ ತಿಂಗಳಾನುಗಟ್ಟಲೆ ಸತಾಯಿಸಿದ್ದರು ಬಿಜೆಪಿಗಳು. ಹಾಗೆ ಮಾಡುವ ಮೂಲಕ ಯಡ್ಡಿಗೆ ತನ್ನ ಹೊಸ ಪಕ್ಷ ಬಲಪಡಿಸಿಕೊಳ್ಳಲು ಕಾಲಾವಕಾಶ ಸಿಗದಂತೆ ತಂತ್ರ ನಡೆಸಿ ಅದರಲ್ಲಿ ಕೊಂಚ ಯಶಸ್ವಿಯೂ ಆಗಿದ್ದರು. ನಂತರ ಯಡ್ಡಿ ಬಿಜೆಪಿಯ ಈ ಪಿತೂರಿಯ ಬಗ್ಗೆ ಹೇಳಿಕೆಯನ್ನು ನೀಡಿದ್ದರು.

ಈಗ ನೋಡಿದರೆ ಬಿಜೆಪಿ ಪುನಃ ಅದೇ ತಂತ್ರ ಬಳಸುತ್ತಿರುವಂತೆ ಕೆಜೆಪಿ ಕಾರ್ಯಕರ್ತರಿಗೆ ಅನಿಸುತ್ತಿದೆ. ಅತ್ತ ಕೆಜೆಪಿಯನ್ನು ಕಟ್ಟಿ ಬೆಳೆಸುತ್ತಾ ಮುಂದುವರೆಯಬೇಕೆ ಇಲ್ಲ ಬಿಜೆಪಿ ಸೇರುವ ಗಳಿಗೆಗಾಗಿ ಕಾಯಬೇಕೆ ಎಂಬ ಕೊನೆಗಾಣದ ಪ್ರಶ್ನೆ ಗೊಂದಲದಲ್ಲಿ ಯಡ್ಡಿ ಹಿಂಬಾಲಕರಿದ್ದಾರೆ.

ಹೀಗೆ ಯಡ್ಡಿ ಪಡೆಯನ್ನು ಸತಾಯಿಸಿ ಸತಾಯಿಸಿ ಮೆತ್ತಗಾಗಿಸುವ ಬಿಜೆಪಿ ತಂತ್ರವು ಎಲ್ಲರಿಗೂ ಅರ್ಥವಾಗುತ್ತಿದೆ.

ಈ ಹತಾಶೆ, ಅತಂತ್ರ ರಾಜಕೀಯ ಪರಿಸ್ಥಿತಿಗಳು, ಕಾರ್ಯಕರ್ತರ ನಿರುತ್ಸಾಹ, ಪಕ್ಷ ಮುನ್ನಡೆಸಲಾಗದ ಹೇಡಿತನ, ಭ್ರಷ್ಟಾಚಾರದ ಹಗರಣಗಳ ತನಿಖೆಯ ಭೀತಿ, ಕರ್ನಾಟಕದ ರಾಜಕೀಯದಲ್ಲಿ ತಾನೆಲ್ಲಿ ನಗಣ್ಯನಾಗಿಬಿಡುವೆನೊ ಎಂಬ ಆತಂಕ ಇವೆಲ್ಲಾ ಯಡ್ಡಿಯನ್ನು ಬಿಟ್ಟೂಬಿಡದೆ ಬಾಧಿಸುತ್ತಿವೆ.

ಸಣ್ಣಪುಟ್ಟದ್ದಕ್ಕೆಲ್ಲಾ ಕಿರುಚಾಡುತ್ತಾ, ಟಿವಿ ಕ್ಯಾಮೆರಾಗಳ ಎದುರಿಗೆ ತನ್ನ ಸಹಾಯಕರ ಕೆನ್ನೆಗೆ ಹೊಡೆಯುವ ದರ್ಪ ತೋರುತ್ತಾ ಮೆರೆಯುತ್ತಿದ್ದ ಯಡ್ಡಿಗೆ ಈಗಿನ ಒತ್ತಡ ಸಹಿಸಲಾಗದಂತಾಗಿದೆ.

ಅವೆಲ್ಲಾ ಒಟ್ಟು ಸೇರಿ ಬುದ್ಧಿ ಭ್ರಮಣೆಯಾದವರಂತೆ ರಾಜ್ಯದ ಮುಖ್ಯಮಂತ್ರಿಯನ್ನೇ ಏಕವಚನದಲ್ಲಿ ನಿಂದಿಸಿ ಗದರಿಸುವ ಒಣ ದೌಲತ್ತು ತೋರಿಸಿದ್ದಾರೆ.

ಯಡಿಯೂರಪ್ಪ ಒಬ್ಬ ಅಪ್ರಬುದ್ಧ ಹಾಗೂ ಅವಿವೇಕಿ ರಾಜಕಾರಣಿ ಎಂಬುದು ಇದರಿಂದ ಇನ್ನೊಮ್ಮೆ ಸಾಬೀತಾಗಿದೆ. ಆ ಠೇಂಕಾರದ ಮಾತುಗಳ ಹಿಂದೆ ಮೇಲ್ಜಾತಿ ದುರಹಂಕಾರವೂ ವ್ಯಕ್ತವಾಗುತ್ತಿರುವುದು ಸುಳ್ಳಲ್ಲ,

■ ಪಾರ್ವತೀಶ

ವಿಲೀನದ ಬಗ್ಗೆ ಒಮ್ಮತವಿಲ್ಲ

ಬಿಜೆಪಿಯೊಂದಿಗೆ ಕೆಜೆಪಿ ಪಕ್ಷದ ವಿಲೀನದ ವಿಚಾರವು ಒಂದು ವೇಳೆ ಆಗುವುದೇ ಆದಲ್ಲಿ ಕೆಜೆಪಿಯು ವಿಭಜನೆಯಾಗುವ ಸಾಧ್ಯತೆಗಳು ಕಾಣುತ್ತಿವೆ. ಕೆಜೆಪಿಯ ಆಳಂದ್ ಶಾಸಕರಾದ ಬಿ.ಆರ್. ಪಾಟೀಲ್ ಹಾಗೂ ಬೀದರ್‌ನ ಗುರುಪಾದಪ್ಪ ನಾಗಮಾರಪಲ್ಲಿಯವರಿಗೆ ಬಿಜೆಪಿ ಸಖ್ಯ ಬೇಕಿಲ್ಲ, ಅವರ ಈ ಅನಿಸಿಕೆ ಯಡ್ಡಿಗೂ ಗೊತ್ತಿದೆ. ಆದರೆ ಕೆಜೆಪಿಯ ಆರು ಶಾಸಕರು ಒಂದು ಪಕ್ಷವಾಗಿ ಬಿಜೆಪಿಯೊಂದಿಗೆ ವಿಲೀನದ ನಿರ್ಧಾರ ಮಾಡಿದರೆ ಕನಿಷ್ಠ ನಾಲ್ವರು ಶಾಸಕರು ಭಿನ್ನಾಭಿಪ್ರಾಯ ಹೊಂದಿದರೆ ಮಾತ್ರ ಅನರ್ಹತೆಯ ನಿಯಮದಿಂದ ಪಾರಾಗಲು ಸಾಧ್ಯ. ಈ ನಡುವೆ ಬೈಲಹೊಂಗಲದ ಶಾಸಕ ಡಾ. ವಿಶ್ವನಾಥ್ ಈರಣ್ಣಗೌಡ ಪಾಟೀಲ್ ಹಾಗೂ ಶಹಾಪುರದ ಗುರುಪಾಟೀಲ್ ಶಿರವಾಳರಿಗೂ ಬಿಜೆಪಿ ಸಖ್ಯದ ಬಗ್ಗೆ ಸಹಮತವಿಲ್ಲ ಎನ್ನಲಾಗುತ್ತಿದೆ. ಇವರ ಪೈಕಿ ಕೆಲವರು ಈಗಾಗಲೇ ಸಿದ್ದರಾಮಯ್ಯನವರೊಂದಿಗೂ ತಮ್ಮ ಭಿನ್ನಾಭಿಪ್ರಾಯದ ಬಗ್ಗೆ ಚರ್ಚಿಸಿದ್ದಾರೆನ್ನಲಾಗಿದೆ.

ಈ ವಿಚಾರ ತಿಳಿದಿರುವ ಯಡ್ಡಿಗೆ ಬಿಜೆಪಿಯೊಂದಿಗೆ ವಿಲೀನಗೊಂಡು ಮತ್ತೆ ಮೆರೆಯಲಿ ಮಾತಿರಲಿ, ಇರುವ ಕೆಜೆಪಿ ಪಾರ್ಟಿಯನ್ನು ಅದು ಈಗಿರುವಂತೆ ಉಳಿಸಿಕೊಂಡರೆ ಸಾಕಪ್ಪ ಎನ್ನುವಂತಾಗಿದೆ.

ಹಾಸನದ ಶ್ರೀರಾಮ ಚಿಟ್ಸ್‌ಗೆ ಬಿತ್ತು ಬೀಗ

ಅಳಿದು-ಉಳಿದು, ಊಟ-ಬಟ್ಟೆ ಕಟ್ಟಿ ಕೂಡಿಟ್ಟ ಹಣವನ್ನು ಶ್ರೀರಾಮ ಚಿಟ್ಸ್‌ನಲ್ಲಿ ಚೀಟಿ ಹಾಕುವ ಮೂಲಕ ಉಳಿತಾಯ ಮಾಡುವ ಕನಸು ಕಂಡಿದ್ದ ಹಾಸನದ ಮಧ್ಯಮ ಮತ್ತು ಬಡ ನಾಗರಿಕರೀಗ ತಲೆ ಮೇಲೆ ಕೈಹೊತ್ತು ಕುಳಿತಿದ್ದಾರೆ. ಅದಕ್ಕೆ ಕಾರಣ ಶ್ರೀರಾಮ ಚಿಟ್ಸ್‌ನ ಆಡಳಿತ ನಡೆಸುತ್ತಿರುವ ಮಹಾತ್ಮರು ಚೀಟಿ ಕೂಗಿದರೂ 6 ತಿಂಗಳು 7 ತಿಂಗಳವರೆಗೆ ಹಣ ನೀಡದೆ ಸತಾಯಿಸುತ್ತಿರುವುದು.

ಕೇಳಿದರೆ ಆ ಕಾರಣ, ಈ ಕಾರಣ ಹೇಳುತ್ತಾ ಕಾಲ ಕಳೆಯುತ್ತಿದ್ದಾರೆ. ಇತ್ತ ಚೀಟಿ ಕೂಗಿದವರು ಬಾಯಿ ಬಡಿದುಕೊಳ್ಳುತ್ತಿದ್ದಾರೆ. ಈ ಬಗ್ಗೆ ಸಂಬಂಧಪಟ್ಟ ಸಂಸ್ಥೆಯಲ್ಲಿ ವಿಚಾರಿಸಿದರೆ ಹಣದ ನಿರ್ವಹಣೆಯಲ್ಲಿ ಕೊಂಚ ವಿಳಂಬವಾಗಿದೆ ಎನ್ನುತ್ತಿದ್ದಾರೆ. ಇದೆಲ್ಲದರಿಂದ ಬೇಸತ್ತವರು ಮೊನ್ನೆ ಮೊನ್ನೆ ಶ್ರೀರಾಮ ಚಿಟ್ಸ್ ಕಚೇರಿಯಲ್ಲಿ ಹಂಗಾಮ ಮಾಡಿದ್ದಾರೆ. ಹಾಸನದ ಕಾವಲುಪಡೆಯ ಕಾರ್ಯಕರ್ತರೊಂದಿಗೆ ಚಿಟ್ಸ್ ಕಚೇರಿಗೆ ತೆರಳಿದ ಚೀಟಿದಾರರು ದುಡ್ಡು ಕೊಡ್ತೋ ...... ಎಂದು ಅಬ್ಬರಿಸಿದ್ದಾರೆ.

ಚೀಟಿದಾರರ ಸಾಫ್ಟ್ ಮಾತಿಗೆ ಶ್ರೀರಾಮ ಚಿಟ್ಸ್‌ನವರು ಕ್ಯಾರೇ ಎನ್ನದಿದ್ದಾಗ ಎಂದಿನ ಶೈಲಿ ಮರುಕಳಿಸಿದೆ. ಕಾವಲುಪಡೆಯ ಕಾರ್ಯಕರ್ತರ ಕೈಗೆ ಸಿಕ್ಕ ಚೇರು ಕುರ್ಚಿಗಳು ಪುಡಿಪುಡಿಯಾಗಿವೆ. ಅಷ್ಟರಲ್ಲಿ ಅಲ್ಲಿದ್ದ ಸಿಬ್ಬಂದಿ ಕಚೇರಿಯಿಂದ ಕಾಲಿಗೆ ಬುದ್ದಿ ಹೇಳಿದ್ದಾರೆ.

ಇಷ್ಟೆಲ್ಲಾ ರಾದ್ಧಾಂತ ನಡೆಯುತ್ತಿದ್ದರೂ ಕೂಗಿದ ಚೀಟಿ ದುಡ್ಡು ಕೊಡುತ್ತೀವಿ ಎಂದು ಹೇಳಿ ಸಮಾಧಾನಪಡಿಸುವ ಜನರೂ ಇಲ್ಲದಂತಾಗಿದೆ. ಆಗ ಶ್ರೀರಾಮ ಚಿಟ್ಸ್ ಕಚೇರಿಗೆ ಬೀಗ ಜಡಿದ ಕಾವಲುಪಡೆ ಕಾರ್ಯಕರ್ತರು ಚೀಟಿ ದುಡ್ಡು ಕೊಡಿ ಆನಂತರ ಬೀಗ ತೆಗೀರಿ ಎಂದು ಅಬ್ಬರಿಸಿದ್ದಾರೆ.

ಕಾವಲುಪಡೆಯ ಹುಡುಗರ ಅಬ್ಬರಕ್ಕೆ ಮೈಸೂರಿನಲ್ಲಿದ್ದ ಡಿ.ಜಿ.ಎಂ. ಚೇರು ತಣ್ಣನೆ ಅಲುಗಿದ ಅನುಭವವಾಗಿದೆ. ಕೂಡಲೇ 7 ತಿಂಗಳ ಹಿಂದೆ ಕೂಗಿದ 2 ಲಕ್ಷದ ಚೀಟಿಯ ಹಣವನ್ನು 7 ತಿಂಗಳ ಚೀಟಿ ಬಾಬ್ತು ಹಣ 60 ಸಾವಿರವನ್ನು ಚೀಟಿ ಹಣದಲ್ಲಿಯೇ ಹಿಡಿದುಕೊಂಡು ಬಾಕಿ 1.45 ಲಕ್ಷ ರೂ. ಡಿ.ಡಿ.ಯನ್ನು ಆ ಕ್ಷಣಕ್ಕೆ ಫ್ಯಾಕ್ಸ್ ಮುಖಾಂತರವೇ ರವಾನಿಸಿ ಪ್ರತಿಭಟನಾಕಾರರ ಮನವೊಲಿಸಿದ್ದಾರೆ.

ಯಾಕೆ ಹೀಗಾಯಿತು?

ಮಕ್ಕಳ ಮದುವೆಗೋ, ಉದ್ಯಮದ ಅಭಿವೃದ್ಧಿಗೋ ಹಣದ ಸಹಾಯವಾಗುತ್ತೆ ಎಂದು ಶ್ರೀರಾಮ ಚಿಟ್ಸ್‌ನಲ್ಲಿ ಅವರ ಕಂಡೀಷನ್ಸ್‌ಗಳಿಗೆ ಕತ್ತುಕೊಟ್ಟು ಚೀಟಿ ಹಾಕಿದವರು ತಮ್ಮ ಸಂದರ್ಭಕ್ಕೆ ಚೀಟಿ ಕೂಗಿದರೆ ಆ ಹಣವನ್ನು ಮುಂದಿನ ಒಂದು ತಿಂಗಳೊಳಗೆ ಪಾವತಿಸುವುದು ಚಿಟ್ಸ್ ನಿಯಮ. ಆದರೆ ಹಾಸನದ ಶ್ರೀರಾಮ ಚಿಟ್ಸ್‌ನಲ್ಲಿ ಚೀಟಿ ಕೂಗಿ ವರ್ಷ ಕಳೆದರೂ ಚೀಟಿ ಹಣ ನೀಡದೆ ಸತಾಯಿಸಲಾಗುತ್ತಿದೆ.

ಇಂತಹದ್ದೆ ಪ್ರಕರಣ ಹಾಸನದ ಬಂಬೂ ಬಜಾರ್ ನಿವಾಸಿಗಳಿಗಾಗಿದೆ. ಇಲ್ಲಿಯ ಮೋಹನ್, ಹೇಮಾವತಿ ನಗರದ ದೀಪಿಕಾ ಮತ್ತು ಮಂಜುನಾಥ್ ಎಂಬುವವರು 2 ಲಕ್ಷದ ಮೂರು ಪ್ರತ್ಯೇಕ ಚೀಟಿಗಳನ್ನು ಬೇರೆ ಬೇರೆ ಸಮಯದಲ್ಲಿ ಹಾಕಿದ್ದರು. ಈ ಮೂವರೂ ಚೀಟಿಗಳನ್ನು ಕೂಗಿ ಈಗಾಗಲೇ 5, 6 ತಿಂಗಳು ಉರುಳಿದೆ. ಆದರೆ ಚೀಟಿ ಹಣ ಪಡೆಯಲು ಬೇಕಾದ ಕಂಡೀಷನ್ಸ್‌ಗಳ ಪ್ರಕಾರ ಮೂವರು ಸಹ ದಾಖಲೆಗಳು ಜಾಮೀನುದಾರರನ್ನು ಒದಗಿಸಿದ್ದಾರೆ.

ಆದರೆ ಒಂದು ತಿಂಗಳೊಳಗೆ ಚೀಟಿ ಹಣ ಪಾವತಿಸಬೇಕಿದ್ದ ಶ್ರೀರಾಮ ಚಿಟ್ಸ್ ಸಂಸ್ಥೆ 5, 6 ತಿಂಗಳಾದರೂ ಚೀಟಿ ಹಣ ಪಾವತಿಸಿಲ್ಲ, ಇದೀಗ ಇಷ್ಟೆಲ್ಲಾ ರಂಪಾಟವಾದ ನಂತರ ಚೀಟಿ ಹಣ ನೀಡಿದ್ದರೂ 6 ತಿಂಗಳ ಚೀಟಿ ಹಣವನ್ನು ಒಟ್ಟಿಗೆ ಕಟ್ ಮಾಡಿಕೊಂಡಿದ್ದಾರೆ. ಸದ್ಯಕ್ಕೆ ಎಷ್ಟೋ ದುಡ್ಡು ಬಂತಲ್ಲಾ ಎಂಬ ಸಮಾಧಾನದಲ್ಲಿ ಚೀಟಿ ಹಾಕಿದ್ದವರು ಶ್ರೀರಾಮ ಚಿಟ್ಸ್‌ಗೆ ಹಿಡಿಶಾಪ ಹಾಕುತ್ತಾ ಚೀಟಿ ಹಣ ಪಡೆದಿದ್ದಾರೆ.


ಆದರೆ ಇನ್ನು ಕೆಲವರು ಚೀಟಿ ಮುಗಿದರೂ ಕೂಗಿದ ಚೀಟಿ ಹಣ ಪಡೆದುಕೊಳ್ಳಲಾಗದೆ ಅತಂತ್ರದಲ್ಲಿದ್ದಾರೆ. ಒಟ್ಟಾರೆ, ಶ್ರೀರಾಮ ಚಿಟ್ಸ್‌ನಲ್ಲಿ ಚೀಟಿ ಹಾಕಿದವರೀಗ ರಾಮ, ರಾಮ ಎನ್ನುತ್ತಾ ಕಣ್ಣು ಬಾಯಿ ಬಿಡುತ್ತಿದ್ದಾರೆ. ಯಾವುದಕ್ಕೂ ಸಿಕ್ಕಸಿಕ್ಕಲ್ಲಿ ಚೀಟಿ ಹಾಕುವ ಮುನ್ನ ಒಮ್ಮೆ ಆಲೋಚನೆ ಮಾಡಿದರೆ ಒಳ್ಳೆಯದು.

■ ವರದಿಗಾರ

'ತಂದೆಯ ಕೊಲೆ ಹಿಂದೆ ಸನಾತನಿಗಳ ಕೈವಾಡ ಇದೆ'

ನರೇಂದ್ರ ಧಾಬೋಲ್ಕರ್ ಪುತ್ರಿ ಮುಕ್ತಾ ಅವರ ಸಂದರ್ಶನ





ಕರ್ನಾಟಕವೂ ಸೇರಿದಂತೆ ಇಂದು ಹಲವಾರು ರಾಜ್ಯಗಳು ಮಹಾರಾಷ್ಟ್ರದ ಮಾದರಿಯಲ್ಲಿ ಮೂಢನಂಬಿಕೆ ವಿರುದ್ಧ ಕಾನೂನನ್ನು ಜಾರಿಗೆ ತರಲು ಮುಂದಾಗಿದ್ದರೆ, ಅದಕ್ಕೆ ನೇರವಾದ ಪ್ರೇರಣೆ ಕಳೆದ ಆಗಸ್ಟ್ 20ರ ಮುಂಜಾನೆ ವಾಯುಸಂಚಾರ ಮಾಡುತ್ತಿದ್ದಾಗ ಪುಣೆಯಲ್ಲಿ ಹತರಾದ ಡಾ. ನರೇಂದ್ರ ಧಾಬೋಲ್ಕರ್. ಕಳೆದ ಹಲವು ದಶಕಗಳಿಂದಲೂ ಇಂಥದೊಂದು ಕಾನೂನನ್ನು ಜಾರಿಗೆ ತರಲು ಧಾಬೋಲ್ಕರ್ ಮತ್ತು ಅವರು ಸ್ಥಾಪಿಸಿದ 'ಮಹಾರಾಷ್ಟ್ರ ಅಂಧ ಶ್ರದ್ಧೆ ನಿರ್ಮೂಲನ ಸಮಿತಿ' ಅವಿರತವಾಗಿ ಹೋರಾಡಿದ್ದರು. ಆದರೆ ಅದಕ್ಕೆ ಅವರು ತಮ್ಮ ಜೀವವನ್ನೇ ಬಲಿಯಾಗಿ ತೆತ್ತಬೇಕಾಗಿ ಬಂದದ್ದು ನಮ್ಮ 'ಆಧುನಿಕ' ಕಾಲದ ಒಂದು ದೊಡ್ಡ ದುರಂತ. 19ನೇ ಶತಮಾನದಲ್ಲಿ ಹಾಗೂ ಸ್ವಾತಂತ್ರ್ಯದ ನಂತರದ ದಿನಗಳಲ್ಲಿ ಇದ್ದ ಸ್ವಲ್ಪ ಮಟ್ಟಿನ ಸುಧಾರಣಾ ಮನೋಭಾವ ಇಂದು ಕಾಣೆಯಾಗುತ್ತಿದ್ದು, ಬದಲಿಗೆ ವಿಚಾರವಾದ ಕುರಿತ ಅಸಹನೆ, ನವಮೂಢನಂಬಿಕೆ ವಿವಿಧ ರೂಪದಲ್ಲಿ ತಲೆ ಎತ್ತುತ್ತಿರುವುದರ ಸಂಕೇತ ಧಾಬೋಲ್ಕರ ಕೊಲೆ.

ಇಂದು ವೈಜ್ಞಾನಿಕತೆ, ವಿಚಾರವಾದವನ್ನು ಸನಾತನಿಗಳು ಮಾತ್ರ ವಿರೋಧಿಸುತ್ತಿಲ್ಲ, ಈ ದೇಶದ ಬಹುಜನರ ಸಂಸ್ಕೃತಿ, ನಂಬಿಕೆಗಳ ಮೇಲೆ ನಿಂತಿರುವ ಲೋಕದೃಷ್ಟಿ ಕೇವಲ ಪಶ್ಚಿಮಮುಖಿಗಳಾಗಿಬಿಟ್ಟಿರುವ ವಿಚಾರವಾದಿಗಳಿಗೆ ಅರ್ಥವಾಗುವುದಿಲ್ಲ ಎಂಬ ಹೊಸ ಬಗೆಯ ಟೀಕೆಯನ್ನು ನವಆಧುನಿಕರು ಎಂದು ಕರೆಯಬಹುದಾದ ಕೆಲವರು ಮುಂದಿಡುತ್ತಿದ್ದಾರೆ. ಯಾವ ಜನಪರ ಚಳವಳಿಯಲ್ಲೂ ಭಾಗವಹಿಸದೆ, ವಿಚಾರವಾದವನ್ನು ಕೇವಲ ಬೌದ್ಧಿಕ ತರ್ಕದ ನೆಲೆಯಲ್ಲಿ ಮಂಡಿಸುತ್ತಾ, ಜನರ ನಂಬಿಕೆಯನ್ನು ಹೀಗಳೆಯುವವರಿಗೆ ಈ ಟೀಕೆ ಸಲ್ಲಬಹುದೇನೊ. ಆದರೆ, ಅಂಧಶ್ರದ್ಧೆ ನಿರ್ಮೂಲನ ಸಮಿತಿಯನ್ನು ಸ್ಥಾಪಿಸಿ, ವಿಚಾರವಾದ–ಮಾನವೀಯತೆಗಳನ್ನು ಜತೆಜತೆಯಾಗಿ ಜನಗಳ ಬಳಿಗೆ ಕೊಂಡೊಯ್ದ ಧಾಬೋಲ್ಕರ್ ಇಂಥ ನವಾಧುನಿಕರ ಟೀಕೆಗೆ ತಕ್ಕ ಉತ್ತರದಂತಿದ್ದರು. ವೃತ್ತಿಯಲ್ಲಿ ವೈದ್ಯರಾಗಿದ್ದ ಧಾಬೋಲ್ಕರ್, ಅದನ್ನು ಬಿಟ್ಟುಕೊಟ್ಟು ಮೌಢ್ಯದಿಂದಾಗಿ ತಮ್ಮ ಬದುಕನ್ನೇ ಮೂರಾಬಟ್ಟೆಯನ್ನಾಗಿಸಿಕೊಂಡಿದ್ದ ಅನೇಕ ಹತಾಶ ವ್ಯಕ್ತಿಗಳಿಗೆ ಬೆಳಕನ್ನು ನೀಡುವ ಹೀಲರ್ ಆಗಿದ್ದರು. ಸದಾ ಹಳ್ಳಿಗಳಲ್ಲಿ ಸುತ್ತುತ್ತಾ ಜನರ ಮಧ್ಯೆ ಕೆಲಸ ಮಾಡುತ್ತಿದ್ದರು. ಅವರ ನಿಕಟವರ್ತಿ, ಕರ್ನಾಟಕದವರೇ ಆದ ನರೇಂದ್ರ ನಾಯಕ್ ಅವರು ತಮ್ಮ ಅಗಲಿದ ಗೆಳೆಯನ ಬಗ್ಗೆ ಮಾತನಾಡುತ್ತಾ ತಿಳಿಸಿದ ಹಾಗೆ, ಇತ್ತೀಚೆಗೆ ಸಮಿತಿಯ ಬಹುತೇಕ ಚಟುವಟಿಕೆಗಳನ್ನು ಮುಂದಿನ ತಲೆಮಾರಿಗೆ ಬಿಟ್ಟುಕೊಟ್ಟು ಸಮಿತಿ ತಮ್ಮ ನಂತರವೂ ಅನಿರ್ಬಾಧಿತವಾಗಿ ಮುಂದುವರೆದುಕೊಂಡು ಹೋಗುವಂತೆ ನೋಡಿಕೊಂಡಿದ್ದರು.

ನರೇಂದ್ರ ನಾಯಕ ನೇತೃತ್ವದಲ್ಲಿ ಕರ್ನಾಟಕ ವಿಜ್ಞಾನ ಪರಿಷತ್ ಸಹಯೊಗದಲ್ಲಿ ನಡೆಯುತ್ತಿರುವ ಮೂಢನಂಬಿಕೆ ವಿರುದ್ಧದ ಕಾರ್ಯಾಗಾರದಲ್ಲಿ ಮಾತನಾಡಲು ಧಾಬೋಲ್ಕರ್ ಅವರ ಮಗಳು ಮುಕ್ತಾ ಧಾಬೋಲ್ಕರ್ ಬಂದಿದ್ದರು. ಅವರೊಂದಿಗೆ ನಡೆಸಿದ ಸಂದರ್ಶನದ ಆಯ್ದ ಭಾಗಗಳು. ಈ ಮಾತುಕತೆಯಲ್ಲಿ ನಗರಗೆರೆ ರಮೇಶ್ ಅವರೂ ಇದ್ದರು.

ನಿಮ್ಮ ತಂದೆ ಮಹಾರಾಷ್ಟ್ರ ಅಂಧ ಶ್ರದ್ಧೆ ನಿರ್ಮೂಲನ ಸಮಿತಿಯನ್ನು ಸ್ಥಾಪಿಸಲು ಪ್ರೇರಣೆ?

ಮುಕ್ತ: ಈ ಚಳವಳಿಯನ್ನು ತಂದೆ ಶುರುಮಾಡಿದ್ದು 1989ರಲ್ಲಿ. ಮೊದಲಿನಿಂದಲೂ ವಿಚಾರವಾದಿಗಳಾಗಿದ್ದ ಅವರು ಜನಸಾಮಾನ್ಯರು ಅಂಧ ಶ್ರದ್ಧೆಯ ಕಾರಣದಿಂದ ದೇವಮಾನವರ ಕೈಯಲ್ಲಿ ಸಿಕ್ಕು ನರಳುತ್ತಿದ್ದುದನ್ನು ತಡೆಗಟ್ಟಲು ಪ್ರಯತ್ನಿಸುತ್ತಿದ್ದರು. ಇದರ ಬಗ್ಗೆ ಸಮಿತಿ ಹೋರಾಡುತ್ತಿತ್ತು. ಹಿಂದಿನಿಂದಲೂ ನಮ್ಮ ದೇಶದಲ್ಲಿ 'ಡ್ರಗ್ ಮತ್ತು ಮ್ಯಾಜಿಕ್ ರೆಮಿಡೀಸ್ ಆಕ್ಟ್' ಎನ್ನುವ ವಿಧೇಯಕ ಇತ್ತಾದರೂ, ಇಂಥ ಹಿಂಸೆ ಮತ್ತು ಶೋಷಣೆಗೆ ಕಾರಣರಾಗಿರುವವರ ಮೇಲೆ ಆ ಕಾನೂನಿನ ಅಡಿಯಲ್ಲಿ ಯಾವುದೇ ಕ್ರಮವನ್ನು ತರಲು ಆಗುತ್ತಿರಲಿಲ್ಲ, ಯಾರನ್ನೂ ಬಂಧಿಸುವುದಕ್ಕೆ ಅಥವಾ ಶಿಕ್ಷೆ ನೀಡುವುದಕ್ಕೆ ಅದರಲ್ಲಿ ಅವಕಾಶವಿರಲಿಲ್ಲ. ಅದು ಕೇವಲ ಮ್ಯಾಜಿಕ್ ಪರಿಹಾರಗಳನ್ನು ಜಾಹಿರಾತು ಮಾಡುವುದನ್ನು ಮಾತ್ರ ನಿಷೇಧಿಸುತ್ತಿತ್ತು. ಆದ್ದರಿಂದ 1995ರಿಂದಲೇ ಇಂಥ ಆಚರಣೆಗಳನ್ನು ತಡೆಗಟ್ಟಲು ಒಂದು ಸಮರ್ಥವಾದ ಕಾಯಿದೆಯ ಅಗತ್ಯವಿದೆ ಎಂದು ಮನಗಂಡು, ಆ ಹೋರಾಟವನ್ನು ಕೈಗೆತ್ತಿಕೊಂಡರು.

ಮೊದಲಿಗೆ ಇದಕ್ಕೆ ಅನೇಕ ಸಂತರು ಮತ್ತು ಪಂಡರಾಪುರದ ಯಾತ್ರಿಕರ ಸಂಘಟನೆಯಾದ 'ವಾರ್ಕರಿ'ಗಳ ಬೆಂಬಲವು ಇತ್ತು. ಆದರೆ, ಕ್ರಮೇಣ ಸನಾತನಿಗಳು ಮತ್ತು ಮೂಲಭೂತವಾದಿಗಳು ಈ ಸಂಘಟನೆಯಲ್ಲಿ ಸೇರಿಕೊಂಡರು. ಅಂಥವರಲ್ಲಿ ಕೆಲವರು ತಮ್ಮದೇ ಆದ ವಾರ್ಕರಿ ಗುಂಪುಗಳನ್ನು ಮಾಡಿಕೊಂಡರು. ಇವರು ನಮ್ಮ ತಂದೆಯನ್ನು, ಅಂಧ ಶ್ರದ್ಧೆ ನಿರ್ಮೂಲನ ಸಮಿತಿಯನ್ನು ವಿರೋಧಿಸುತ್ತಾ ಬಂದರು. ಆದರೂ ಸಮಿತಿ ಕಾಯ್ದೆಯ ರಚನೆಗೆ ಮುಂದಾಯಿತು. ಹೀಗಾಗಿ ಇದರ ಬಗ್ಗೆ ಅಸಹನೆ ಮೊದಲಿನಿಂದಲೂ ಇತ್ತು.

ಈ ಕಾಯ್ದೆ ರೂಪುಗೊಂಡಿದ್ದು ಹೇಗೆ?

ಇದರ ಕರಡನ್ನು ರಚಿಸಿದ್ದು ನಿವೃತ್ತ ನ್ಯಾಯಮೂರ್ತಿಗಳಾಗಿದ್ದ ಶ್ರೀಯುತ ಪಿ.ಬಿ.ಸಾಮಂತ್, ಕೋಲ್ಸೆ ಪಾಟೀಲ ಮತ್ತು ಪೊಲೀಸ್ ಕಮೀಷನರ್ ಆಗಿದ್ದ ಭಾಸ್ಕರ ರಾವ್ ಮಿಸಾರ ಅವರುಗಳಿದ್ದ ಒಂದು ಸಮಿತಿ. ಇದರಲ್ಲಿ ಸುಮಾರು 27 ಆಚರಣೆಗಳನ್ನು ಪಟ್ಟಿಮಾಡಲಾಗಿದ್ದು ಪ್ರಸ್ತುತ ಮಹಾರಾಷ್ಟ್ರ ಕಾಯಿದೆಗಿಂತ ಹೆಚ್ಚು ವಿಶಾಲವೂ, ಸಮಗ್ರವೂ ಆಗಿತ್ತು. ಇದನ್ನು ಸರ್ಕಾರದ ಅವಗಾಹನೆಗಾಗಿ ಸಲ್ಲಿಸಲಾಯಿತು ಮತ್ತು ಅದನ್ನು ಜಾರಿತರುವ ಒತ್ತಡವನ್ನು ಸಮಿತಿ ಹೋರಾಟದ ಮೂಲಕ ಮಾಡಲು ಪ್ರಯತ್ನಿಸುತ್ತಾ ಬಂತು.

ಆದರೆ ಈಗಿನ ಮಹಾರಾಷ್ಟ್ರ ಕಾಯಿದೆಯಲ್ಲಿ ಕೇವಲ 12 ಅಂಶಗಳು ಮಾತ್ರ ಇವೆ. ಇದರ ಬಗ್ಗೆ ನಿಮ್ಮ ಸಮಿತಿಯ ಅಭಿಪ್ರಾಯವೇನು?

ನಮ್ಮ ತಂದೆಯೂ ಸೇರಿದಂತೆ, ಸಮಿತಿಯವರಿಗೆ ಇದರ ಬಗ್ಗೆ ತೀವ್ರ ಅಸಮಾಧಾನ, ನಿರಾಶೆ ಇತ್ತು, ಈಗಲೂ ಇದೆ. ಆದರೆ, ದೀರ್ಘ ಹೋರಾಟದ ನಂತರ ಸರ್ಕಾರ ಇದನ್ನು ಜಾರಿಗೊಳಿಸುವ ಆಶಯವನ್ನು ವ್ಯಕ್ತ ಪಡಿಸಿದ್ದರಿಂದ, ಇದು ಒಂದು ಪ್ರಾರಂಭವಾಗಲಿ ಮುಂದೆ ನೋಡೋಣ ಎಂಬ ಧೋರಣೆಯನ್ನು ತಳೆಯಬೇಕಾಯಿತು. ಈಗಲೂ ಇದು ಒಂದು ವಿಧೇಯಕವಷ್ಟೇ. ವಿಧಾನ ಸಭೆಯಲ್ಲಿ ಅಂಗೀಕಾರವಾಗಿದೆಯಾದರೂ, ಮೇಲ್ಮನೆಯಲ್ಲಿ ಇದು ಒಪ್ಪಿಗೆ ಪಡೆಯಬೇಕಾಗಿದೆ. ಹೀಗಾಗಿ ಇದು ಇನ್ನು ಕಾಯಿದೆಯಾಗಿಲ್ಲ.

ಈ ಪ್ರಕ್ರಿಯೆಯಲ್ಲಿ ನಿಮ್ಮ ಸಮಿತಿ ಯಾವ ರೀತಿಯ ಅಡೆತಡೆಗಳನ್ನು ಎದುರಿಸಬೇಕಾಯಿತು?

ಕರಡಿನ ಶೆಡ್ಯೂಲಿನಲ್ಲಿದ್ದ ಅನೇಕ ವಿಷಯಗಳನ್ನು ತೆಗೆಯಬೇಕೆಂದು ಅನೇಕರು, ಕೆಲವು ರಾಜಕೀಯ ಪಕ್ಷಗಳು ಒತ್ತಡ ತಂದವು. ಈಗ ಸಿದ್ಧವಿರುವ ಕಾಯ್ದೆ ಬದಲಾಗಿರುವುದಕ್ಕೂ ಇದೇ ಕಾರಣ. ಉದಾಹರಣೆಗೆ, ಯಾರು ಮೂಢನಂಬಿಕೆಯ ಆಚರಣೆಯ ಬಲಿಪಶುಗಳಾಗುತಿರುತ್ತಾರೋ, ಅವರೇ ದೂರನ್ನು ಕೊಡಬೇಕು ಎಂಬುದು. ಅನೇಕ ಬಾರಿ ಬಲಿಪಶು ಗಳಾದವರು ದೂರುಕೊಡುವ ಮನಸ್ಥಿತಿಯಲ್ಲಾಗಲೀ, ದೂರುಕೊಡಬಹುದೆಂಬ ಅರಿವನ್ನಾಗಲೀ ಇರುವಂಥವರಾಗಿರುವುದಿಲ್ಲ.

ನಿಮ್ಮ ತಂದೆಯ ಕೊಲೆ ಕೇಸಿನಲ್ಲಿ ಇನ್ನೂ ಯಾರನ್ನೂ ಬಂಧಿಸಿಲ್ಲ. ನಿಮ್ಮ ಪ್ರಕಾರ ಇದಕ್ಕೆ ಯಾರು ಕಾರಣವಿರಬಹುದು?

ಖಂಡಿತ ಇದು ಸನಾತನಿಗಳು ಎಂದು ಹೇಳಿಕೊಳ್ಳುವ ಕೆಲವು ಮೂಲಭೂತವಾದಿಗಳ ಕೆಲಸ. ಕೊಲೆಯಾದ ನಂತರ 'ಇದು ತನ್ನ ಕರ್ಮದ ಫಲ'. ಎಂದು ಕೆಲವರು ಹೇಳಿಕೆ ಕೊಟ್ಟಿದ್ದರು. ನಮ್ಮ ತಂದೆಯ ಮೇಲೆ ಅನೇಕ ಬಾರಿ ಈ ಮುಂಚೆಯೇ ಹಲ್ಲೆ ನಡೆದಿತ್ತು, ಅವರ ಕೆಲಸದಿಂದ ಕೆಲವು ಸ್ವಘೋಷಿತ 'ದೇವಮಾನವರಿಗೆ' ತೊಂದರೆಯಾಗಿದ್ದು ನಿಜ. ಅಂಥವರ ಮೇಲೆ ಅನೇಕ ಕೇಸುಗಳಿದ್ದವು, ಆದರೆ, ಪೊಲೀಸರು ಮಾಫಿನಾಮಾ ಕೊಟ್ಟು ಬಿಟ್ಟುಬಿಡುತ್ತಿದ್ದರು. ನನಗನಿಸುತ್ತದೆ, ನಮ್ಮ ತಂದೆಯಲ್ಲದಿದ್ದರೆ, ಬೇರೆ ಯಾರಾದರೂ ಬಲಿಯಾಗುತ್ತಿದ್ದರು, ಅಷ್ಟೆ.


ಬಿ.ಜೆ.ಪಿ ರಾಜ್ಯದಲ್ಲಿ ಕಾನೂನು ವ್ಯವಸ್ಥೆ ಹದಗೆಟ್ಟಿದೆ ಎಂದು ಆರೋಪಿಸಿ, ಕಾಂಗ್ರೆಸ್ ಸರ್ಕಾರವನ್ನು ಖಂಡಿಸಿತೇ ವಿನಃ, ಕೊಲೆಯನ್ನಲ್ಲ.


ನಿಮ್ಮ ಮುಂದಿನ ಕಾರ್ಯಯೋಜನೆ?

ನಮ್ಮ ಅಂಧ ಶ್ರದ್ಧೆ ವಿರುದ್ಧದ ಕೆಲಸ ಮುಂದುವರೆಯುತ್ತದೆ. ಈ ಘಟನೆಯಿಂದ ಬೇರೆ ರಾಜ್ಯಗಳಲ್ಲೂ ಮೂಢನಂಬಿಕೆ ತಡೆ ಕಾಯ್ದೆ ತರುವ ಉಪಕ್ರಮ ಪ್ರಾರಂಭವಾಗಿದೆ. ನಿಮ್ಮ ರಾಜ್ಯ ಇದರ ಮುಂಚೂಣಿಯಲ್ಲಿದೆ. ನಮ್ಮ ರಾಜ್ಯದಲ್ಲಿರುವ ಕಾಯ್ದೆಗಿಂತಲೂ ಹೆಚ್ಚು ಸಮಗ್ರವಾದ ಕಾನೂನು ಇಲ್ಲಿ ಮತ್ತು ಕೇಂದ್ರದಲ್ಲೂ ಜಾರಿಯಾದರೆ, ಅದು ನಮ್ಮ ತಂದೆಯ ಶ್ರಮ ಸಫಲವಾಗುತ್ತದೆ.

■ ಡಾ.ವಿ.ಎಸ್.ಶ್ರೀಧರ

ರಾಜ್ ಕುಟುಂಬಕ್ಕೂ, ಕಪಾಲಿ ಮೋಹನನಿಗೂ ಎತ್ತಿಂದೆತ್ತಣ ಸಂಬಂಧ?





ಮೂರೇ ದಿನಕ್ಕೆ ಮುಗಿಯಬೇಕಿದ್ದ ರಾಘಣ್ಣನ ಆಸ್ಪತ್ರೆ ಯೋಗ ಒಂದು ವಾರಕ್ಕೆ ಬಂದು ನಿಂತರೂ ಮುಗಿಯುತ್ತಿಲ್ಲ, ಆತಂಕದ ಸುದ್ದಿಯೆಂದರೆ ಯಶವಂತಪುರದ ಕೊಲಂಬಿಯಾ ಏಷ್ಯಾ ಆಸ್ಪತ್ರೆಯಲ್ಲಿ ಒಂದು ವಾರದ



ಕಪಾಲಿ ಮೋಹನನ ಬಂಗಲೆ

ಕಾಲ ನಾನಾ ಥೆರಪಿ, ಚಿಕಿತ್ಸೆಗಳಾದರೂ ಪ್ರಯೋಜನ ಕಾಣದೆ ಅವರನ್ನು ಹೆಚ್ಚಿನ ಚಿಕಿತ್ಸೆಗೆಂದು ಮತ್ತೆ ಮಣಿಪಾಲ್ ಆಸ್ಪತ್ರೆಗೆ ಸ್ಥಳಾಂತರಿಸಿದ್ದು. ರಾಜ್ ಕುಟುಂಬದ ವೈದ್ಯ ಡಾ. ರಮಣಾರಾವ್ ಪ್ರಕಾರವೇ ಕಮ್ಮಿಯೆಂದರೂ ಇನ್ನು ಒಂದು ವಾರದ ಕಾಲ ರಾಘಣ್ಣ ಮಣಿಪಾಲ್ ಆಸ್ಪತ್ರೆಯಲ್ಲಿರಲೇ ಬೇಕು!

ಯಾವುದೇ ದೋಷವಿಲ್ಲ ಎಂದಮೇಲೆ ರಾಘಣ್ಣ ವಾರದ ಕಾಲ ಮಣಿಪಾಲ್ ಆಸ್ಪತ್ರೆಯಲ್ಲಿದ್ದು ಮೈಯೊಡ್ಡಬೇಕಾದ ಚಿಕಿತ್ಸೆ ತಾನೇ ಏನಿದ್ದೀತು?

ಅದೊಂಥರದ ವೀಕ್‌ನೆಸ್ಸು, ಮಣಿಪಾಲ್ ಆಸ್ಪತ್ರೆಯಲ್ಲಿ ಅದಕ್ಕೆಂದೇ ವೆರೈಟಿ ಆಫ್ ಫಿಸಿಯೋಥೆರಪಿಗಳಿವೆ. ಅದನ್ನೆಲ್ಲ ರಾಘು ಕಲಿಯಬೇಕೆಂದರೆ ಕನಿಷ್ಠ ಒಂದು ವಾರದಿಂದ ಹಿಡಿದು ಹತ್ತು ದಿನಗಳು ಬೇಕೇಬೇಕು, ಅದನ್ನು ಹೊರತುಪಡಿಸಿದರೆ ಅವರಿಗೆ ಬೇರೇನೂ ತೊಂದರೆಯಿಲ್ಲ, "ರಾಘು ಈಗ ಲವಲವಿಕೆಯಿಂದಿದ್ದಾರೆ. ಅನಗತ್ಯ ಟೆನ್ಷನ್ ಬೇಡ ಅಂತಲೇ ಫೋನ್ ಅಟೆಂಡ್ ಮಾಡ್ಬೇಡಿ ಅಂತ ನಾವೇ ಸಜೆಸ್ಟ್ ಮಾಡಿರೋದ್ರಿಂದ ನಿಮ್ಮ ಬಳಿ ಫೋನ್‌ನಲ್ಲಿ ಮಾತಾಡೋಕ್ಕೆ ಸಾಧ್ಯವಾಗ್ತಿಲ್ಲ; ಅಷ್ಟೇ. ಇಲ್ಲಾಂದ್ರೆ ಈ ಹೊತ್ತಿಗಾಗಲೇ ಅವರೇ ಫೋನಿಗೆ ಸಿಗ್ತಿದ್ರು...!" ಎನ್ನುತ್ತಾರೆ ಡಾ. ರಮಣಾರಾವ್.

ಈ ಮಧ್ಯೆ ಗಾಂಧಿನಗರದಲ್ಲಿ ರಾಘಣ್ಣನ ಬಿಜಿನೆಸ್ ಪಾರ್ಟನರ್ ಎಂದೇ ಹೇಳಿಕೊಳ್ಳುವ ಕಪಾಲಿ ಮೋಹನ್ ಎಂಬಾತನ ಬಗ್ಗೆ ಪುಕಾರುಗಳೆದ್ದಿವೆ. ಅದಕ್ಕೆ ಕಾರಣ ಕಪಾಲಿ ಮೋಹನ್ ಎಂಬ ಯಃಕಶ್ಚಿತ್ ಬಾರ್ ಸೆಕ್ಯೂರಿಟಿ ಗಾರ್ಡ್ ಕೇವಲ ಹತ್ತು ವರ್ಷಗಳಲ್ಲಿ ಬೆಳೆದ ರೀತಿ, ಮಾಡಿದ ಆಸ್ತಿ, ನಿಗೂಢ ದಂಧೆಗಳು, ಆತನ ನೆಟ್‌ವರ್ಕ್, ಬಿಜಿನೆಸ್ ಕಾಂಟಾಕ್ಟ್, ರಾಜಕೀಯ ಪ್ರಭಾವ ಇತ್ಯಾದಿಗಳು.

ಕಪಾಲಿ ಗಲ್ಲಿಯಿಂದ

ಕೆಲವರ ಪ್ರಕಾರ ಆತ ರಾಜ್ ಪಾಲಿಗೆ ಮಾನಸ ಪುತ್ರನಂತಿದ್ದ. ಆದರೆ ಇನ್ನೂ ಹಲವರ ಪ್ರಕಾರ ಆತ ರಾಘಣ್ಣನ ಬಿಜಿನೆಸ್ ಪಾರ್ಟನರ್. ಸದ್ಯ ಗಾಂಧಿನಗರವೇ ನಂಬಿರುವಂತೆ ರಾಜ್ ಕುಟುಂಬಕ್ಕೆ ಸಂಬಂಧಪಟ್ಟಂತೆ ಏನೇ ನಿರ್ಧಾರವಾಗಬೇಕೆಂದರೂ ತಾಯಿ ಪಾರ್ವತಮ್ಮ ಅವಲಂಬಿಸಿರುವುದು ಈತನನ್ನೇ; ಕೇವಲ ರಾಘು ಮಾತ್ರವಲ್ಲ ಪುನೀತ್ ಮತ್ತು ಶಿವಣ್ಣ ಕುಟುಂಬಗಳಿಗೂ ಈತನೇ ಆಪದ್ಬಾಂಧವ. ಪುನೀತ್‌ನ ಯಾವುದೇ ಹೊಸ ಚಿತ್ರದ ಮುಹೂರ್ತ, ಪಾರ್ವತಮ್ಮ ಹಾಜರಾಗುವ ಯಾವುದೇ ಕಾರ್ಯಕ್ರಮ, ರಾಘಣ್ಣನ ಪ್ರತಿ ಚಲನವಲನ, ಶಿವಣ್ಣನ ಯಾವುದೇ ಸಮಾರಂಭ; ಹೀಗೆ ರಾಜ್ ಕುಟುಂಬದ ಏನೇ ಕಾರ್ಯಕ್ರಮಗಳಾದರೂ ಅಲ್ಲಿ ಈ ಕಪಾಲಿ ಮೋಹನನ ಪಟಾಲಂ ಕಾಣಿಸಲೇಬೇಕು.

ಶುರುವಿನಲ್ಲಿ ಕುಳ್ಳ ಶಾಂತ, ತದನಂತರ ಚಿನ್ನ ಹೇಗೆ ರಾಜ್ ಬಲಗೈ ಬಂಟರಂತಿದ್ದರೋ ಆ ಸಾಲಿಗೆ ಲೇಟೆಸ್ಟ್ ಸೇರ್ಪಡೆಯಾದವನೇ ಕಪಾಲಿ ಮೋಹನ.

ಮೆಜೆಸ್ಟಿಕ್‌ನ ಕೆಂಪೇಗೌಡ ನಿಲ್ದಾಣದ ಸ್ವಾತಿ ಡಿಲಕ್ಸ್ ಹೋಟೆಲ್, ಶಾಂತಿನಗರದ ಬಿಎಂಟಿಸಿ ಬಸ್ ನಿಲ್ದಾಣದ ರೆಸ್ಟೋರೆಂಟ್, ಗುಟ್ಟಹಳ್ಳಿ ಸರ್ಕಲ್ಲಿನಲ್ಲಿ ಬಾಲಾಜಿ ಫೈನಾನ್ಸ್, ಸದಾಶಿವನಗರದ ಕಪಾಲಿ ಎಂಟರ್‌ಪ್ರೈಸಸ್, ಗುಟ್ಟಹಳ್ಳಿ ಸರ್ಕಲ್ಲಿನ ತನ್ನ ಫೈನಾನ್ಸ್ ಅಡ್ಡೆಯ ಪಕ್ಕದಲ್ಲೇ ತಮ್ಮ ಗೋಪಾಲನ ಹೆಸರಲ್ಲಿ ಇಸ್ಪೀಟ್ ಕ್ಲಬ್ಬು ಇವಿಷ್ಟು ಮೇಲುನೋಟಕ್ಕೆ ಕಾಣುವ ಮೋಹನನ ವ್ಯವಹಾರಗಳಾದರೆ ಕಣ್ಣಿಗೆ ಕಾಣದ ಈತನ ಅಗೋಚರ ದಂಧೆಗಳು ಒಂದೆರಡಲ್ಲ

ಶಬ್ಧವೇದಿಯಲ್ಲಿ...

ಪ್ರತಿ ಎರಡು ದಿನಕ್ಕೊಮ್ಮೆ ಈತನ ಒಂದಲ್ಲ ಒಂದು ಚೀಟಿ ನಡೆಯುತ್ತದೆ. ಲಕ್ಷದಿಂದ ಹಿಡಿದು ಐದು ಲಕ್ಷ, ಹತ್ತು ಲಕ್ಷ, ಇಪ್ಪತ್ತೈದು ಲಕ್ಷ, ಐವತ್ತು ಲಕ್ಷ ಮತ್ತು ಒಂದು ಕೋಟಿಯ ತನಕ; ಫುಟ್‌ಪಾತ್ ವ್ಯಾಪಾರಿಗಳಿಂದ ಶುರುವಾಗಿ ಕೋಟ್ಯಾಧಿಪತಿಗಳವರೆಗೂ ತರಹೇವಾರಿ ವೆರೈಟಿಯ ಚೀಟಿಗಳೇ ಈತನ ಅಸಲೀ ಆದಾಯದ ಮೂಲ. ಇದಲ್ಲದೆ ಈತನ ಮತ್ತೊಂದು ಲಾಭಬಡುಕ ದಂಧೆಯೆಂದರೆ ಅದು ರಿಯಲ್ ಎಸ್ಟೇಟ್!

ಇಂತಹ ವ್ಯಕ್ತಿ ರಾಜ್ ಕುಟುಂಬಕ್ಕೆ ಅದು ಹೇಗೆ ಹತ್ತಿರ ಆದನೆಂಬುದೇ ನಿಗೂಢವಾಗಿದೆ. ತಾನು ಜಾತಿಯಿಂದ ಈಡಿಗನಾಗಿರುವುದು, ಹಾಕಿದ ದುಡ್ಡಿಗೆ ನಿಯತ್ತಾಗಿ ಬಡ್ಡಿ ಕಟ್ಟುವುದು, ಜನ್ಮಾಪಿ ಪಕ್ಕಾ ರಾಜ್‌ಕುಮಾರ್ ಅಭಿಮಾನಿಯಾಗೇ ಉಳಿದದ್ದು ತನ್ನನ್ನು ರಾಜ್ ಕುಟುಂಬ ಹತ್ತಿರಕ್ಕೆ ಬಿಟ್ಟುಕೊಳ್ಳಲು ಮುಖ್ಯ ಕಾರಣವೆಂಬುದು ಮೋಹನನ ವರಸೆ.

ತಾಯಿ ಪಾರ್ವತಮ್ಮ ಯಾವುದೇ ಕಾರ್ಯಕ್ರಮಕ್ಕೆ ಬಂದರೂ ಅಲ್ಲಿ ಈತ ಪ್ರತ್ಯಕ್ಷನಾಗುತ್ತಾನೆ. ಪುನೀತ್‌ನ ಯಾವುದೇ ಪತ್ರಿಕಾಗೋಷ್ಠಿ, ಮುಹೂರ್ತಗಳಿದ್ದರೂ ಅಲ್ಲಿನ ಬಂದೋಬಸ್ತ್ ಡ್ಯೂಟಿ ಈತನದ್ದೆ. ಈತನ ಹುಟ್ಟುಹಬ್ಬಕ್ಕೆ ಖುದ್ದು ರಾಘಣ್ಣನೇ ಪತ್ನಿ ಸಮೇತ ಬಂದು ಕೇಕ್ ತಿನ್ನಿಸುತ್ತಾರೆ. ಸದಾಶಿವನಗರದ ಈತನ ಬಂಗಲೆಗೆ ಪದೇಪದೇ ಶಿವಣ್ಣ, ಪುನೀತ್ ಬಂದುಹೋಗುತ್ತಾರೆ. ಹಿಂದೆ ಸಾರಾ ಗೋವಿಂದು, ಚಿನ್ನೇಗೌಡ, ರಾಕ್‌ಲೈನ್, ಚಿನ್ನ, ಐಪಿಎಸ್ ಕೆಂಪಯ್ಯ, ಕವಿ ನಿಸಾರ್ ಅಹ್ಮದ್, ಗೋವಿಂದಳ್ಳಿ ದೇವೇಗೌಡ ಇತ್ಯಾದಿಗಳೆಲ್ಲ ಹೇಗೆ ರಾಜ್ ಕುಟುಂಬದ ಅಡುಗೆಮನೆ ಆಸ್ಥಾನ ಪಂಡಿತರಂತಿದ್ದರೋ ಅದೇ ರೀತಿ ಈಗ ಕಪಾಲಿ ಮೋಹನನಿಗೆ ಅವರೆಲ್ಲರಿಗಿಂತಲೂ ಹೆಚ್ಚಿನ ಪ್ರಾಶಸ್ತ್ಯ!

ಇದು ಶುರುವಾಗಿದ್ದು ರಾಜ್ ಕಾಲದಿಂದಲೆ. ರಾಜ್ ಕೊನೇ ಚಿತ್ರ 'ಶಬ್ಧವೇಧಿ'ಯಲ್ಲಿ ಈತನೂ ಪ್ರಮುಖ ಪಾತ್ರಧಾರಿಯಾಗಿದ್ದ. ಮಾದಕ ಜಾಲದ ವಿರುದ್ಧ ಯುವಕ ಪಡೆ ಕಟ್ಟುವ ರಾಜ್ ಅಕ್ಕಪಕ್ಕ ಯುವಕರ ಗುಂಪಿನ ನಾಯಕನಂತೆ ಮಿಂಚುತ್ತಿದ್ದ ಮೋಹನನ್ನು ತೆರೆ ಮೇಲೆ ಕಂಡ ಈತನ ಪೂರ್ವಾಶ್ರಮದ ಸಹಚರರೆಲ್ಲ ಥಂಡಾ ಹೊಡೆದು ಕೂತರು. ಕೇವಲ ಹತ್ತು ವರ್ಷದ ಹಿಂದಷ್ಟೆ ಮೆಜೆಸ್ಟಿಕ್‌ನ ಕಪಾಲಿಗಲ್ಲಿಯಲ್ಲಿ ಇಟ್ಟಾಡಿಕೊಂಡಿದ್ದ ಸೋಕಾಲ್ಡ್ ರೌಡಿಯೊಬ್ಬ ರಾಜ್ ಬಲಗೈ ಬಂಟನ ಪಾತ್ರ ವಹಿಸುವುದೆಂದರೆ ಸಣ್ಣ ಮಾತೆ?

ಮೋಹನನ ಹಿನ್ನೆಲೆ, ಜಾತಕ ಬಲ್ಲ ಯಾರಿಗಾದರೂ ಆತನ ದಿಢೀರ್ 'ಅಭಿವೃದ್ಧಿ' ಬೆರಗುಗೊಳಿಸುವಂತಿತ್ತು. 1991ರ ಹೊತ್ತಿಗೆ ಕಪಾಲಿ ಗಲ್ಲಿಯೇ ಮಾರಾಮಾರಿ, ರೌಡಿ ಹಾವಳಿಗಳಿಂದಲೇ ಕುಖ್ಯಾತಿ ಗಳಿಸಿತ್ತು, ಬೆಂಗಳೂರಿನ ಪುಡಿಪುಡಿ ರೌಡಿಗಳೆಲ್ಲ ಅಡ್ಡೆ ಹಾಕುತ್ತಿದ್ದ ಮೆಜೆಸ್ಟಿಕ್‌ನ ಬ್ಲಾಕ್ ಟಿಕೆಟ್ ಹುಡುಗರು, ಪಿಕ್ ಪಾಕೆಟ್ ಮಜೂರ್‌ಗಳು, ಆಟೋ ಗ್ಯಾಂಗ್, ಟ್ರಾವಲ್ಸ್ ದಂಧೆಕೋರರೆಲ್ಲ ಕಪಾಲಿ ಗಲ್ಲಿಯಲ್ಲೇ ಗಿಜಿಗುಡುತ್ತಿದ್ದರೆಂದರೆ ಅದಕ್ಕೆ ಕಪಾಲಿ ಬಾರೇ ಕಾರಣವಾಗಿತ್ತು, ಮೋಹನ ಆ ಹೊತ್ತಿಗೆ ಕಪಾಲಿ ಬಾರಿನ ವಾಚ್‌ಮನ್.

ಮೂಲತಃ ಕುಂದಾಪುರದ ಬಕ್ವಾಡಿಯಿಂದ ಕಂಗೆಟ್ಟು ಬೆಂಗಳೂರಿಗೆ ಬಂದಿದ್ದ ಮೋಹನ ಕಪಾಲಿಗಲ್ಲಿಯ ಸಕಲ ಗುಣಗಳನ್ನೂ ಮೈಗೂಡಿಸಿಕೊಂಡು ಕುಡಿದು ಹಾವಳಿಯಿಡುತ್ತಿದ್ದ ಪುಡಿ ರೌಡಿಗಳ ಜೊತೆಗೂ ಬಡಿದಾಡಿದ. ಹೋಟೇಲ್ ಹುಡುಗರು, ಮಂಗಳೂರು ಮೂಲದ ಪೋರ್ಕಿಗಳದ್ದೇ ಆದ ಗ್ಯಾಂಗನ್ನೂ ಕಟ್ಟಿಕೊಂಡ. ಅದ್ಯಾವುದೋ ಗಳಿಗೆಯಲ್ಲಿ ಕಪಾಲಿ ಬಾರಿನ ಮಾಲಿಕನನ್ನೇ ಅಟ್ಟಾಡಿಸಿ ಹೊಡೆದ. ಈ ಬಗ್ಗೆ ಉಪ್ಪಾರಪೇಟೆ ಪೊಲೀಸ್ ಠಾಣೆಯಲ್ಲಿ ಕೇಸೂ ದಾಖಲಾಯಿತು. ಹಾಗೆ ಕಪಾಲಿ ಬಾರಿನಿಂದ ಹೊರಬಿದ್ದ ಮೋಹನ ಕಾಲಕ್ರಮೇಣ 'ಕಪಾಲಿ ಮೋಹನ'ನೆಂದೇ ಕುಖ್ಯಾತಿಗೆ ಬಂದ. ಕೆಲಕಾಲ ಕಪಾಲಿ ಥೇಟರ್‌ನಲ್ಲಿ ಬ್ಲಾಕ್ ಟಿಕೆಟ್ ಮಾರಿಕೊಂಡಿದ್ದ.


ಮೀಟರ್ ಬಡ್ಡಿ

ಆ ಹೊತ್ತಿಗೆ ಕಪಾಲಿ ಗ್ಯಾಂಗ್ ಇಡೀ ಮೆಜೆಸ್ಟಿಕ್ ಏರಿಯಾ ಅನ್ನೇ ಡಾಮಿನೇಟ್ ಮಾಡುತ್ತಿತ್ತು, ಅದೂ ಎಂಥಾ ಖತರ್‌ನಾಕ್ ಗ್ಯಾಂಗೆಂದರೆ ಚಾಮರಾಜಪೇಟೆಯ ಹಳೇ ರೌಡಿ ಮತ್ತು ಮಾರ್ಕೆಟ್ ದೇವಿ ಬಂಟ ಪ್ರಾಣೇಯನ್ನು ಕೊಂದ ಕಪಾಲಿ ಆನಂದನೂ ಮೋಹನನ ಪಡೆಯಲ್ಲಿ ಇದ್ದ. ಕುಶಾಲಶೆಟ್ಟಿ, ಸುರೇಂದ್ರ, ತಿಪ್ಪೇಶ, ಜಯರಾಮ, ಪ್ರಕಾಶ, ಸತೀಶ ಇತ್ಯಾದಿ ರೌಡಿಗಳಲ್ಲದೆ ಮಂಗಳೂರು-ಕುಂದಾಪುರ ಮೂಲದ ದಾಂಡಿಗರ ಗ್ಯಾಂಗೇ ಮೋಹನನ ಜೊತೆಯಿತ್ತು, ಕಪಾಲಿ ಗಲ್ಲಿಯಲ್ಲೊಂದು ಇಡ್ಲಿಗಾಡಿ, ಪಕ್ಕದಲ್ಲೊಂದು ಆಮ್ಲೇಟ್ ಗಾಡಿ, ಕಪಾಲಿ ಥೇಟರ್ ಎದುರಿಗೆ ಸಾಗರ್ ಹೋಟೇಲ್ ಫುಟ್‌ಪಾತಿನಲ್ಲೊಂದು ಬೀಡಾ ಅಂಗಡಿ; ಹೀಗೆ ಶುರುವಾದ ಆತನ ಫುಟ್‌ಪಾತ್ ಕಾಯಕ ಕಾಲಕ್ರಮೇಣ ಇಡೀ ಮೆಜೆಸ್ಟಿಕ್‌ನ ಫುಟ್‌ಪಾತ್‌ಗಳನ್ನಾಕ್ರಮಿಸಿತು.

ಅದು ಮೀಟರ್ ಬಡ್ಡಿ ದಂಧೆ. ಬೆಳಗ್ಗೆ ನೂರು ರೂಪಾಯಿ ಬಡ್ಡಿ ಹಿಡಕೊಂಡು ಒಂಬೈನೂರು ರೂಪಾಯಿ ಕೊಟ್ಟರೆ ಸಂಜೆ ಹೊತ್ತಿಗೆ ಸಾವಿರ ರೂಪಾಯಿ ಕೊಡಬೇಕು. ಐದು ಸಾವಿರಕ್ಕೆ ಐನೂರು, ಹತ್ತು ಸಾವಿರಕ್ಕೆ ಸಾವಿರ, ಐವತ್ತು ಸಾವಿರಕ್ಕೆ ಐದು ಸಾವಿರ ಹೀಗೆ ಶುರುವಾದ ಈತನ ಮೀಟರ್ ಬಡ್ಡಿ ದಂಧೆ ಕೆಲವೇ ವರ್ಷಗಳಲ್ಲಿ

▶▶15

ಮಗ ವಿನಯ್‌ನ ಆರಂಗೇಟ್ರಂ ಮುನ್ನವೇ!



ಯಾರೇನೇ ಅಂದರೂ ರಾಜ್ ಅಭಿಮಾನಿಗಳ ಪಾಲಿಗೆ ಸದ್ಯ ಅಣ್ಣಾವ್ರ ಉತ್ತರಾಧಿಕಾರಿ ಅಂತಿದ್ದರೆ ಅದು ಪುನೀತ್. ಹಾಗೆಂದು ಶಿವಣ್ಣನೇನು ಕಮ್ಮಿಯೆಂದೇನಲ್ಲ, ಪ್ರಶ್ನೆಯೆಂದರೆ ಪುನೀತ್ ನಂತರ ರಾಜ್ ವಾರಸುದಾರಿಕೆ ಮೂರನೇ ಪೀಳಿಗೆಯವರ್ಯಾರು?


ಈ ಪ್ರಶ್ನೆಗೆ ರಾಜ್ ಕುಟುಂಬದಿಂದ ಬರುವ ಉತ್ತರವೇ ರಾಘಣ್ಣನ ಮಗ ವಿನಯ್ ರಾಜ್‌ಕುಮಾರ್!

ಏಕೆಂದರೆ ಶಿವಣ್ಣನಿಗೆ ಗಂಡು ಮಕ್ಕಳಿಲ್ಲ, ಇರುವ ಇಬ್ಬರು ಹೆಣ್ಣು ಮಕ್ಕಳ್ಯಾರೂ ಬಣ್ಣ ಹಚ್ಚಲಿಕ್ಕಿಲ್ಲ, ಹಾಗೇ ಪುನೀತ್ ಕೂಡ ಇಬ್ಬರು ಹೆಣ್ಣು ಮಕ್ಕಳ ತಂದೆಯೇ ಹೊರತು ಮತ್ತೊಂದು ಗಂಡು ಮಗು ಬೇಕೆನ್ನಲಿಲ್ಲ, ಇಂಥ ಪರಿಸ್ಥಿತಿಯಲ್ಲಿ ರಾಜ್ ಕುಟುಂಬದ ಕಲಾರಾಧನೆಯನ್ನು ಮುಂದುವರಿಸಲು ಅನಿವಾರ್ಯ ಆಯ್ಕೆಯಾಗಿ ಉದ್ಭವಿಸಿದ್ದು ರಾಘಣ್ಣನ ಮಗ ವಿನಯ್.

ರಾಘು-ಮಂಗಳಾ ದಂಪತಿಗಳ ಇಬ್ಬರು ಗಂಡು ಮಕ್ಕಳ ಪೈಕಿ ಹಿರಿಯನಾದ ವಿನಯ್‌ನನ್ನು ಪುನೀತ್‌ನ ಉತ್ತರಾಧಿಕಾರಿಯನ್ನಾಗಿ ರೂಪಿಸುವುದು ರಾಘಣ್ಣನಿಗೆ ಅತೀ ದೊಡ್ಡ ಆಶೆ. ಅದಕ್ಕೆಂದೇ ವಿನಯ್‌ನನ್ನು ಮುಂಬಯಿಯ ಫಿಲ್ಮ್ ಇನ್ಸ್‌ಟ್ಯೂಟಿಗೆ ಸೇರಿಸಲಾಯ್ತು, ಅಲ್ಲಿ ಡ್ಯಾನ್ಸ್, ಕರಾಟೆ, ಹಾರ್ಸ್ ರೈಡಿಂಗ್, ಆ್ಯಕ್ಟಿಂಗ್ ಎಲ್ಲವನ್ನೂ ಕಲಿತ ವಿನಯ್‌ಗೆ ಯಾಕೋ ಫೈಟಿಂಗ್ ಸರಿಹೊಂದುತ್ತಿಲ್ಲ ಎನ್ನಿಸಿ ಕಳೆದ ಒಂದೂವರೆ ವರ್ಷದಿಂದ ಮನೆಯಲ್ಲೇ ಫೈಟಿಂಗ್ ತರಬೇತಿ ಕೊಡಿಸಿದ್ದೂ ಆಗಿತ್ತು, ಇದೆಲ್ಲಕ್ಕೂ ಪೂರಕವೆಂಬಂತೆ ವಿನಯ್‌ನ ಆರಂಗೆಟ್ರಂ ಅನ್ನು ಅದ್ದೂರಿಯಾಗೇ ನೆರವೇರಿಸುವ ಹೊಣೆಯನ್ನು ರಾಘಣ್ಣ ವಹಿಸಿದ್ದು ತನ್ನ ಸಂಬಂಧಿ ಮತ್ತು ಚಿತ್ರ ನಿರ್ದೇಶಕ ಪ್ರಕಾಶ್‌ಗೆ.

ಪುನೀತ್‌ನ 'ಮಿಲನ' ಚಿತ್ರವನ್ನು ಈಗಾಗಲೇ ಹಿಟ್ಟಾಗಿಸಿದ ಡೈರೆಕ್ಟರ್ ಪ್ರಕಾಶ್ ಕೇವಲ ರಾಜ್ ಕುಟುಂಬಸ್ಥ ಎಂಬುದಕ್ಕಿಂತಲೂ ಪ್ರತಿಭಾವಂತ ಎಂದೇ ಗುರುತಿಸಿಕೊಂಡಾತ. ಈತನ ಮೂಲಕವೇ ಕತೆಯನ್ನೂ ರೂಪಿಸಿದ್ದಾಯ್ತು, ರಾಘು ಕೂತು ಕತೆ ಕೇಳಿ ಅದನ್ನು ಓಕೆ ಮಾಡಿದ್ದೂ ಆಗಿತ್ತು, ಮುಂದಿನ ನವೆಂಬರ್‌ನ ಕನ್ನಡ ರಾಜ್ಯೋತ್ಸವದ ದಿನದಂದೇ ರಾಘಣ್ಣನ ಮಗ ವಿನಯ್‌ನ ಆರಂಗೆಟ್ರಂ ಮುಹೂರ್ತವೂ ನಿಗದಿಯಾಗಿತ್ತು, ನೋಡಲು ಹೆಚ್ಚುಕಮ್ಮಿ ರಾಘಣ್ಣನದ್ದೇ ಹೋಲಿಕೆಯಿರುವ, ಇಮೇಜಿನ ವಿಷಯದಲ್ಲಿ ಪುನೀತ್ ಮತ್ತು ಶಿವಣ್ಣನಿಗಿಂತಲೂ ಇಷ್ಟವಾಗುವ ವಿನಯ್ ಏನಿಲ್ಲವೆಂದರೂ ರಾಜ್ ಅಭಿಮಾನಿಗಳ ಪಾಲಿಗೆ ಖಂಡಿತ ಇಷ್ಟವಾಗುತ್ತಿದ್ದ. ಇನ್ನೇನು ನವೆಂಬರ್ ಸಮೀಪಿಸುತ್ತಿದ್ದಂತೆ ವಿನಯ್ ಬಣ್ಣ ಹಚ್ಚುವ ಗಳಿಗೆಯೂ ಕೂಡಿಬರುತ್ತಿತ್ತು, ಆದರೆ ಮಗನಿಗೆ ಮುಹೂರ್ತ ಒದಗಿ ಬರುವ ಮೊದಲೇ ತಂದೆಯ ಆರೋಗ್ಯ ಕೈಕೊಟ್ಟಿದೆ.

ವಿಧಿ ವಿಪರೀತವೋ, ವಿಪರ್ಯಾಸವೋ ಬಲ್ಲವರ್ಯಾರು?!



ಜನಪ್ರಿಯ ಅಪಾರ್ಟ್‌ಮೆಂಟ್

ಅಕ್ರಮ ಪ್ರಶ್ನಿಸಿದರೆ ಹುಷಾರ್!

ಬೆಂಗಳೂರು ರಿಯಲ್ ಎಸ್ಟೇಟ್ ದಂಧೆಯ ಅಕ್ರಮಗಳನ್ನು ಪಟ್ಟಿ ಮಾಡುತ್ತಾ ಹೋದರೆ ಅದಕ್ಕೆ ಕೊನೆ ಮೊದಲೇ ಇರೋದಿಲ್ಲ. ಬಿಲ್ಡರ್‌ಗಳು, ಡೆವಲಪರ್‌ಗಳಿಂದ ನಡೆಯುತ್ತಿರುವ ವಂಚನೆಗಳು ದಿನೇದಿನೇ ಹೊಸಹೊಸ ರೂಪ ಪಡೆದುಕೊಳ್ಳುತ್ತಿವೆ. ಅದರಲ್ಲಿ ಅಪಾರ್ಟ್‌ಮೆಂಟ್ ನಿರ್ಮಾಣ ಹಾಗೂ ಮಾರಾಟದಲ್ಲಿ ನಡೆಯುವ ವಂಚನೆ ವಿಶಿಷ್ಟವಾದುದು. ಅಂಥಾ ಒಂದು ವಿಶಿಷ್ಟ ಕತೆ ಇಲ್ಲಿದೆ ನೋಡಿ.

ಬೆಂಗಳೂರಿನ ಯಾವ ಮೂಲೆಗೆ ಹೋದರೂ ಜನಪ್ರಿಯ ಅಪಾರ್ಟ್‌ಮೆಂಟ್/ ಟೌನ್‌ಶಿಪ್ ಮುಂತಾದ ಹೆಸರಿನಲ್ಲಿರುವ ವಸತಿ ಸಮುಚ್ಚಯಗಳನ್ನು ಕಾಣಬಹುದು. ಹೊಸೂರು ರಸ್ತೆ ಹಾಗೂ ಬನ್ನೇರುಘಟ್ಟ ರಸ್ತೆಗಳ ನಡುವೆ ಬರುವ ಕೋಡಿಚಿಕ್ಕನಹಳ್ಳಿ ಎಂಬಲ್ಲಿ ಇದೇ ಗ್ರೂಪ್‌ನ 'ಜನಪ್ರಿಯ ಲೇಕ್ ವ್ಯೂ' ಅಪಾರ್ಟ್‌ಮೆಂಟ್ ತಲೆಯೆತ್ತಿ ನಿಂತಿದೆ. ಈ ಜನಪ್ರಿಯ ಅಪಾರ್ಟ್‌ಮೆಂಟ್‌ನ ನಿರ್ಮಾಣದಲ್ಲಾಗಿರುವ ಅಕ್ರಮಗಳನ್ನು ಯಾರಾದರೂ ಪ್ರಶ್ನಿಸಿದರೆ ಅಂಥವರ ಬಾಯಿ ಮುಚ್ಚಿಸಲು ದೈಹಿಕ ದಾಳಿ ನಡೆಸುವ, ಜೀವ ಬೆದರಿಕೆ ಹಾಕುವ ಹೀನಚಾಳಿಯನ್ನು ಬಿಲ್ಡರ್‌ಗಳು ಚಾಲ್ತಿಯಲ್ಲಿಟ್ಟಿದ್ದಾರೆ.

ಈ ಅಪಾರ್ಟ್‌ಮೆಂಟ್ ನಿರ್ಮಾಣವಾಗಿದ್ದು 2000ನೇ ಇಸವಿಯಲ್ಲಿ. ರಾಮಚಂದ್ರಯ್ಯ ಎಂಬ ಭೂಮಾಲಿಕರೊಂದಿಗೆ ಜಾಯಿಂಟ್ ವೆಂಚರ್ ಒಪ್ಪಂದ ಮಾಡಿಕೊಂಡು ಇಂಜಿನಿಯರ್ಸ್ ಸಿಂಡಿಕೇಟ್ ಪ್ರೈ ಲಿ. ಎಂಬ ಕಂಪನಿ ಈ ಅಪಾರ್ಟ್‌ಮೆಂಟ್ ನಿರ್ಮಿಸಿದೆ. ಎಂಎಲ್‌ಎ ಸತೀಶ್ ರೆಡ್ಡಿಯ ಕುಲಬಾಂಧವ ರವೀಂದ್ರ ರೆಡ್ಡಿ ಇದರ ಅಧಿಪತಿ.

ಪ್ರಜಾವಾಣಿ ಪತ್ರಿಕೆಯಲ್ಲಿ ದಶಕಗಳ ಕಾಲ ಪತ್ರಕರ್ತರಾಗಿ ದುಡಿದಿರುವ, ಶೇಖರ್‌ಪೂರ್ಣ ಎಂಬ ಹೆಸರಿನಲ್ಲಿ ಪ್ರಚಲಿತರಾಗಿರುವ ವಿ.ಚಂದ್ರಶೇಖರ್ ಇದೇ ಅಪಾರ್ಟ್‌ಮೆಂಟ್‌ನಲ್ಲಿ 103ನೇ ನಂಬರಿನ ಫ್ಲಾಟನ್ನು 2001ರಲ್ಲಿ ಖರೀದಿಸಿ ಅಂದಿನಿಂದಲೂ ಇದೇ ಮನೆಯಲ್ಲಿ ವಾಸ ಮಾಡುತ್ತಿದ್ದಾರೆ. ಸುಮಾರು ಮೂರು ವರ್ಷಗಳ ಹಿಂದೆ ಶೇಖರ್‌ಪೂರ್ಣ ಹೃದಯಾಘಾತಕ್ಕೆ ಒಳಗಾದ ಕಾರಣ ಕೆಲಸಕ್ಕೆ ರಾಜೀನಾಮೆ ನೀಡಬೇಕಾಗಿ ಬಂತು. ಆದರೆ ಶೇಖರ್ ಸುಮ್ಮನೆ ಕೂರುವ ಜಾಯಮಾನದವರಲ್ಲ; ವಿಶ್ರಾಂತಜೀವನದಲ್ಲೂ ಸಂವಾದ ಡಾಟ್ ಕಾಮ್ ಎಂಬ ಸಾಂಸ್ಕೃತಿಕ ತಂಡದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ.

ತಮ್ಮ ಅನಾರೋಗ್ಯ ಮುಂತಾದ ಕಾರಣಗಳಿಂದ ಆರ್ಥಿಕವಾಗಿ ತೊಂದರೆಗೆ ಸಿಲುಕಿದ ಶೇಖರ್‌ಪೂರ್ಣ ತಮ್ಮ ಫ್ಲಾಟನ್ನು ಮಾರಾಟ ಮಾಡಲು ಮುಂದಾದರು.

ಆಸಕ್ತ ಖರೀದಿದಾರರು ಕೇಳುವ ದಾಖಲಾತಿಗಳನ್ನು ಒದಗಿಸಿಕೊಡುವುದು ಮಾಲೀಕರ ಹೊಣೆತಾನೇ? ಹಾಗೆ ಖಾತಾಪತ್ರ ಮುಂತಾದ ಅಗತ್ಯ ದಾಖಲೆಗಳನ್ನು ಕೋರಿ ಬಿಬಿಎಂಪಿಗೆ ಅರ್ಜಿ ಸಲ್ಲಿಸಿದರು. ಹಾಗೆ ಅರ್ಜಿ ಕೊಟ್ಟಿದ್ದೇ ತಡ, ಒಂದೊಂದೇ ಸಮಸ್ಯೆಗಳು ಅವರನ್ನು ಸುತ್ತುವರೆದುಕೊಂಡವು. ಖಾತಾಪತ್ರ ನೀಡಬೇಕೆಂದರೆ ಆಕ್ಯುಪೆನ್ಸಿ ಸರ್ಟಿಫಿಕೇಟ್ ಮತ್ತು ಕಮೆನ್ಸ್‌ಮೆಂಟ್ ಸರ್ಟಿಫಿಕೇಟ್‌ಗಳನ್ನು ಹಾಜರುಪಡಿಸುವಂತೆ ಬಿಬಿಎಂಪಿ ಅಧಿಕಾರಿಗಳು ಸೂಚಿಸಿದರು. ಇಂಥಾ ಸರ್ಟಿಫಿಕೇಟ್ ಒದಗಿಸುವಂತೆ ಕೋರಿ ಅಪಾರ್ಟ್‌ಮೆಂಟ್‌ನ ಬಿಲ್ಡರ್ ರವೀಂದ್ರರೆಡ್ಡಿಯನ್ನು ಕೇಳಲಾಗಿ ಆತ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ಅಸೋಸಿಯೇಷನ್‌ಗೆ ಹ್ಯಾಂಡ್‌ಓವರ್ ಮಾಡಿರುವುದಾಗಿ ತಿಳಿಸಿ ನುಣುಚಿಕೊಂಡ.

ಅದರಂತೆ ಶೇಖರ್‌ರವರು ಅಸೋಸಿಯೇಷನ್‌ನ ಅಧ್ಯಕ್ಷರನ್ನು ವಿಚಾರಿಸಿದಾಗ ಆಶ್ಚರ್ಯ ಕಾದಿತ್ತು. ಅಂಥಾ ಯಾವುದೇ ದಾಖಲೆ ಅಸೋಸಿಯನ್ ಬಳಿಯಿರಲಿಲ್ಲ; ಬದಲಿಗೆ ಒಂದು ಬಿಳಿ ಹಾಳೆಯ ಮೇಲೆ ಬರೆದುಕೊಟ್ಟ ಕೆಲಸಕ್ಕೆ ಬಾರದ ಪತ್ರ ಮಾತ್ರವೇ ಲಭ್ಯವಿತ್ತು. ಕಾನೂನುರೀತ್ಯ ದಾಖಲೆಗಳನ್ನು ಒದಗಿಸದ ಬಿಲ್ಡರ್ ಮೇಲೆ ಕ್ರಮ



ಜರುಗಿಸುವಂತೆ ಒತ್ತಾಯಿಸಿದರೆ ಅಸೋಸಿಯೇಷನ್‌ನ ಅಧ್ಯಕ್ಷ ಪ್ರಸನ್ನ ಕುಮಾರ್ ಮುಂತಾದವರು ಬಿಲ್ಡರ್‌ಗಳ ಪರ ವಕಾಲತ್ತು ವಹಿಸಲು ಪ್ರಾರಂಭಿಸಿದರು.

ಬೇರೆ ದಾರಿ ಕಾಣದೆ ಶೇಖರ್‌ಪೂರ್ಣ ಹೈಕೋರ್ಟ್ ಮೆಟ್ಟಿಲೇರಿ ಬಿಬಿಎಂಪಿ ವಿರುದ್ಧ ಕೇಸು ದಾಖಲಿಸಿದರು. ಮಾಹಿತಿ ಹಕ್ಕು ಕಾಯಿದೆಯಡಿ ಅರ್ಜಿ ಸಲ್ಲಿಸಿ ಸದರಿ ಅಪಾರ್ಟ್‌ಮೆಂಟ್‌ಗೆ ಸಂಬಂಧಿಸಿದ ಹಲವು ಮೂಲ ದಾಖಲೆಗಳನ್ನು ಸಂಗ್ರಹಿಸಿದರು. ಈ ಮೂಲ ದಾಖಲೆಗಳನ್ನು ಪರಿಶೀಲಿಸಿದಾಗ ಆಶ್ಚರ್ಯ ಮಾತ್ರವಲ್ಲದೆ ಆಘಾತವೂ ಕಾದಿತ್ತು. ಈ ಅಪಾರ್ಟ್‌ಮೆಂಟ್‌ನ ನಿರ್ಮಾಣ ಪ್ರಕ್ರಿಯೆಯಲ್ಲಿ ಎಸಗಿರುವ ನಾನಾ ಅಕ್ರಮಗಳು ಒಂದೊಂದಾಗಿ ಬೆಳಕಿಗೆ ಬಂದವು.

ಈ ಅಕ್ರಮವನ್ನು ಅರ್ಥಮಾಡಿಕೊಳ್ಳಲು ಬಿಬಿಎಂಪಿ ಕಮಿಷನರ್ ಹೈಕೋರ್ಟ್‌ಗೆ ಸಲ್ಲಿಸಿರುವ ಅಫಿಡೇವಿಟ್ ಒಂದೇ ಸಾಕು. ಈ ಅಫಿಡೇವಿಟ್‌ನಲ್ಲಿ ಸದರಿ ವಸತಿ ಸಮುಚ್ಚಯವನ್ನು ಕಾನೂನುಬಾಹಿರ ರೀತಿಯಲ್ಲಿ ನಿರ್ಮಿಸುತ್ತಿದ್ದು, ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಬಿಎಂಟಿಎಫ್‌ಗೆ ಪತ್ರ ಬರೆದಿರುವುದಾಗಿ ಸ್ವತಃ ಕಮಿಷನರ್ ರವರೇ ಹೇಳಿಕೆ ನೀಡಿದ್ದಾರೆ. ವಿಷಯ ಏನೆಂದರೆ ಅಂದಿನ ಬೊಮ್ಮನಹಳ್ಳಿ ನಗರಸಭೆ ಮಂಜೂರಾತಿ ಕೊಟ್ಟಿದ್ದು ಬೇಸ್‌ಮೆಂಟ್ (ಪಾರ್ಕಿಂಗ್ ಸೌಲಭ್ಯಕ್ಕಾಗಿ) + ನೆಲಮಹಡಿ + ಮೂರು ಅಂತಸ್ತುಗಳು = ಒಟ್ಟು ಐದು ಅಂತಸ್ತುಗಳಿಗೆಂದು. ಆದರೆ ಕಟ್ಟಡ ನಿರ್ಮಾಣದ ವೆಚ್ಚವನ್ನು ಕಡಿತಗೊಳಿಸಿ ತಮ್ಮ ದುರ್ಲಾಭ ಹೆಚ್ಚಿಸಿಕೊಳ್ಳುವ ಉದ್ದೇಶದಿಂದ ಬೇಸ್‌ಮೆಂಟನ್ನೇ ನಿರ್ಮಾಣ ಮಾಡಿಲ್ಲ. ಬದಲಿಗೆ ಗ್ರೌಂಡ್+4 ಮಹಡಿಗಳನ್ನು ನಿರ್ಮಿಸಲಾಗಿದೆ.



ಇಂಥಾ ಉಲ್ಲಂಘನೆ ಬಗ್ಗೆ ಕ್ರಮಕೈಗೊಳ್ಳುವಂತೆ ಬಿಎಂಟಿಎಫ್‌ಗೆ ಬರೆದ ಪತ್ರದಲ್ಲಿ ಬೊಮ್ಮನಹಳ್ಳಿ ನಗರಸಭೆ "ದಾಖಲಿಸಿರುವ ಅಂಶ ರಿಯಲ್ ಎಸ್ಟೇಟ್ ಕುಳ ರವೀಂದ್ರರೆಡ್ಡಿ ಪಟಾಲಂನ ದಾರ್ಷ್ಟ್ಯವನ್ನು ಜಗಜ್ಜಾಹೀರುಪಡಿಸುತ್ತದೆ. ಕಾನೂನು ಉಲ್ಲಂಘಿಸಿ ನಿರ್ಮಾಣ ಕಾರ್ಯ ಕೈಗೊಂಡಿರುವ "ನಿವೇಶನ ಮಾಲೀಕರಿಗೆ ನೋಟಿಸು ನೀಡಿದಾಗಿಯೂ ಅವರು ನೋಟಿಸನ್ನು ಗಣನೆಗೆ ತೆಗೆದುಕೊಳ್ಳದೆ ಕಟ್ಟಡ ಕಾಮಗಾರಿಯನ್ನು ಮುಂದುವರೆಸಿರುತ್ತಾರೆ. ಸದರಿ ಅನಧಿಕೃತ ಕಟ್ಟಡ ನಿರ್ಮಾಣವನ್ನು ನಿಲ್ಲಿಸುವಂತೆ ಸಾರ್ವಜನಿಕರಿಂದಲೂ ಸಹ ನಗರಸಭೆಗೆ ದೂರುಗಳು ಬಂದಿರುತ್ತವೆ. ಹಾಗಾಗಿ ಸದರಿ ಅನಧಿಕೃತ ಕಟ್ಟಡದ ಬಗ್ಗೆ ಸೂಕ್ತ ಕ್ರಮಕೈಗೊಳ್ಳಲು ಈ ಮೂಲಕ ತಮ್ಮಲ್ಲಿ ಕೋರಲಾಗಿದೆ."

ಬೆಂಗಳೂರು ಟಾಸ್ಕ್‌ಫೋರ್ಸ್‌ನ ಅಧಿಕಾರಿಗಳಿಗೆ ಈ ಪತ್ರ ಬರೆದದ್ದು 03-04-2000ದಲ್ಲಿ, ಅಂದರೆ ಬರೋಬ್ಬರಿ 13 ವರ್ಷಗಳ ಹಿಂದೆ. ಅಂದಿನಿಂದ ಇಂದಿನವರೆಗೆ ಬಿಬಿಎಂಪಿಯಾಗಲಿ ಬಿಎಂಟಿಎಫ್ ಆಗಲಿ ಮೂರು ಕಾಸಿನ ಕೆಲಸವನ್ನೂ ಮಾಡಿಲ್ಲ, ಬದಲಿಗೆ ಸಂಬಂಧಿಸಿದವರಿಂದ ತೀರ್ಥ ಪ್ರಸಾದ ಸೇವಿಸಿ ಕೈಕಟ್ಟಿ ಕುಳಿತುಬಿಟ್ಟಿದ್ದಾರೆ.

13 ವರ್ಷಗಳ ಕಾಲ ಬಾಯಲ್ಲಿ ಕಡುಬು ತುಂಬಿಕೊಂಡಿದ್ದ ಅಧಿಕಾರಿಗಳು ಶೇಖರ್‌ಪೂರ್ಣ ಪ್ರಕರಣದ ಹಿನ್ನೆಲೆಯಲ್ಲಿ ಮತ್ತೊಂದು ನಾಟಕಕ್ಕೆ ಮುಂದಾಗಿದ್ದಾರೆ. 16-09-2013ರಂದು ಅಸೋಸಿಯೇಷನ್ ಅಧ್ಯಕ್ಷ ಪ್ರಸನ್ನಕುಮಾರ್, ಬಿಲ್ಡರ್ ರವೀಂದ್ರರೆಡ್ಡಿ ಮುಂತಾದವರಿಗೆ ನೋಟಿಸು ಜಾರಿಮಾಡಿ "ಅಕ್ರಮವಾಗಿ ನಿರ್ಮಾಣ ಮಾಡಿರುವ ಕಟ್ಟಡವನ್ನು ಸಂಪೂರ್ಣವಾಗಿ ತೆರವುಗೊಳಿಸು"ವಂತೆ ಸೂಚಿಸಿದ್ದಾರೆ.

13 ವರ್ಷ ಬಿಲ್ಡರ್ ರೆಡ್ಡಿಯ ಕೃಪೆಯಲ್ಲಿದ್ದ ಅಧಿಕಾರಿಗಳು ಇದ್ದಕ್ಕಿದ್ದಂತೆ ನೋಟಿಸು ಜಾರಿ ಮಾಡಿದ್ದರ ಹಿಂದೆ ಭಾರೀ ಮಸಲತ್ತೇ ನಡೆದಿತ್ತು. ಈ ನೋಟಿಸ್‌ನಿಂದ ಉಂಟಾದ ಆತಂಕವನ್ನೇ ನೆಪವಾಗಿಸಿಕೊಂಡು ಬಿಲ್ಡರ್ ಹಾಗೂ ಆತನ ಕೃಪಾಕಟಾಕ್ಷದಲ್ಲಿರುವ ಅಸೋಸಿಯೇಷನ್ ಪದಾಧಿಕಾರಿಗಳು ಅಪಾರ್ಟ್‌ಮೆಂಟ್ ನಿವಾಸಿಗಳನ್ನು ಶೇಖರ್ ಅವರ ಮೇಲೆ ಎತ್ತಿಕಟ್ಟುವ ಕುಕಾರ್ಯಕ್ಕೆ ಮುಂದಾದರು. ಆಗಲೂ ಶೇಖರ್ ಬಗ್ಗದೇ ಹೋದಾಗ ಟಿವಿ ಮಾಧ್ಯಮದವರ ಎದುರೇ ಶೇಖರ್ ಹಾಗೂ ಕುಟುಂಬದವರ ಮೇಲೆ ಹಲ್ಲೆ ನಡೆಸಿದ್ದಾರೆ. ಅಧ್ಯಕ್ಷ ಪ್ರಸನ್ನ ಮುಂತಾದವರು ಜೀವ ಬೆದರಿಕೆ ಹಾಕುವ ಹಂತಕ್ಕೂ ಹೋಗಿದ್ದಾರೆ.

ಈ ಘಟನೆಯಿಂದ ಆಘಾತಗೊಂಡ ಶೇಖರ್‌ಪೂರ್ಣ ಕುಟುಂಬ ತಮ್ಮ ಬಂಧುಗಳ ಮನೆಯಲ್ಲಿ ತಲೆಮರೆಸಿಕೊಂಡಿದ್ದು, ಕೆಲದಿನಗಳ ನಂತರ ಮಡಿವಾಳ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಆದರೆ ಬಿಲ್ಡರ್‌ಗಳ ರಾಜ್ಯಭಾರಕ್ಕೆ ಇಲ್ಲಿನ ಪೊಲೀಸರು ಅಡ್ಡಿಪಡಿಸಿದ ಒಂದೇ ಒಂದು ಉದಾಹರಣೆಯೂ ಇಲ್ಲದಿರುವಾಗ ಈ ವಿಷಯದಲ್ಲಿ ಹೇಗೆ ಸಕ್ರಿಯರಾದಾರು? ನಿರೀಕ್ಷೆಯಂತೆಯೆ ಒಂದು ಎನ್‌ಸಿಆರ್ ದಾಖಲಿಸಿಕೊಂಡು ಸಾಗಹಾಕಿದ್ದಾರೆ. ಪ್ರಸನ್ನ ಮತ್ತಿತರ 10 ಮಂದಿ ತಮ್ಮ ಮೇಲೆ ಹಲ್ಲೆ ನಡೆಸಿದ್ದರ ಬಗ್ಗೆ ಏನೆಲ್ಲಾ ದಾಖಲೆಗಳನ್ನು ಒದಗಿಸಿದರೂ, ಟಿವಿ ಚಾನೆಲ್‌ಗಳಲ್ಲಿ ಪ್ರಸಾರವಾದ ಸುದ್ದಿ ತುಣುಕುಗಳು ಲಭ್ಯವಿದ್ದರೂ ಒಂದು ಎಫ್‌ಐಆರ್ ಕೂಡ ಹಾಕದೆ ಅಕ್ರಮ ಬಿಲ್ಡರ್ ಕೂಟಕ್ಕೆ ತಮ್ಮ ನಿಷ್ಠೆ ಮುಂದುವರೆಸಿರುವ ಪೊಲೀಸರಿಗೆ ಯಾವ ಪ್ರಶಸ್ತಿ ಕೊಟ್ಟರೂ ಕಡಿಮೆಯೇ!

ಇತ್ತ ಜನಪ್ರಿಯ ಅಪಾರ್ಟ್‌ಮೆಂಟ್‌ನ ಅಸೋಸಿಯೇಷನ್‌ನವರಿಗೆ ನಿಜವಾಗಿಯೂ ಹೋರಾಡುವ ಉದ್ದೇಶವಿದ್ದರೆ ಅಕ್ರಮವನ್ನು ಪ್ರಶ್ನೆ ಮಾಡಿದವರ ಮೇಲೆ ಹಲ್ಲೆ ಮಾಡುವ ಹೇಡಿ ಕೃತ್ಯದ ಬದಲಿಗೆ ಸುಮಾರು 400 ಫ್ಲಾಟ್‌ಗಳ ಮಾಲೀಕರಿಗೆ ನಂಬಿಸಿ ವಂಚಿಸಿರುವ ಬಿಲ್ಡರ್‌ನ ವಿರುದ್ಧ ಹೋರಾಡುವ ಧೈರ್ಯ ತೋರಬೇಕಿತ್ತು. ಈ ಎಲ್ಲ ಅವಘಡಗಳಿಗೆ ಕಾರಣವಾಗಿರುವ ಬಿಲ್ಡರ್‌ಗಳಿಂದ ನಷ್ಟಪರಿಹಾರ ಪಡೆಯುವುದು ಮಾತ್ರವಲ್ಲದೆ, ಅಕ್ರಮ ಸಕ್ರಮದಡಿಯಲ್ಲಿ ಈ ಕಟ್ಟಡವನ್ನು ಸಕ್ರಮಗೊಳಿಸಲು ಪಾವತಿಸಬೇಕಿರುವ ಒಟ್ಟು ಮೊತ್ತವನ್ನು ರವೀಂದ್ರರೆಡ್ಡಿ ಅಂಡ್ ಗ್ಯಾಂಗ್‌ನಿಂದ ವಸೂಲಿ ಮಾಡಲು ಹೋರಾಡಬೇಕಿತ್ತು.

ಆದರೆ ಬಿಲ್ಡರ್‌ಗಳ ಆಣತಿಯನ್ನು ಚಾಚೂತಪ್ಪದೆ ಪಾಲಿಸುತ್ತಿರುವ ಪ್ರಸನ್ನ ಅಂಡ್ ಗ್ಯಾಂಗ್ ಇಲ್ಲಿನ ನಿವಾಸಿಗಳಿಂದಲೇ ಅಕ್ರಮವಾಗಿ ಹಣ ವಸೂಲಿಗೆ ಇಳಿದಿದ್ದಾರೆ. ತಮ್ಮನ್ನು ಪ್ರಶ್ನಿಸಿದ ಕಾರಣಕ್ಕೆ ಶೇಖರ್‌ಪೂರ್ಣ ಮನೆಗೆ ಕುಂಟುನೆಪವೊಡ್ಡಿ ನೀರು ಸರಬರಾಜು ಕಡಿತಗೊಳಿಸಿ ಕಿರುಕುಳ ನೀಡಿದ್ದಾರೆ.


ಇಂಥಾ ಹಾದುಹಗಲು ಅಕ್ರಮ, ದೌರ್ಜನ್ಯ ನಡೆಸುತ್ತಿರುವ ಬಿಲ್ಡರ್‌ಗಳ ಹಿಂದೆ ಕಾರ್ಪೋರೇಟರ್ ರೂಪ ರಮೇಶ್ ಹಾಗೂ ಶಾಸಕ ಸತೀಶ್ ರೆಡ್ಡಿಯ ಕೈವಾಡವಿದೆಯೆಂಬ ಶೇಖರ್‌ಪೂರ್ಣರ ಆರೋಪವನ್ನು ತಳ್ಳಿಹಾಕುವಂತಿಲ್ಲ. ಬೇಲಿಯೇ ಎದ್ದು ಹೊಲಮೇಯ್ಯುತ್ತಿರುವ ಇಂದಿನ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಸರಿದಿಕ್ಕಿಗೆ ತರುವ ಬಗೆ ಹೇಗೆ ಎಂಬುದೇ ಪ್ರಶ್ನೆ.

• ದೊಡ್ಡಿಪಾಳ್ಯ ನರಸಿಂಹಮೂರ್ತಿ


ಅದಿರುಗಳ್ಳ ಸೈಲ್-ಮಂತ್ರಿ ದೇಶಪಾಂಡೆ ದೋಸ್ತಿ ರಹಸ್ಯ!

ಅದಿರು ಕಳ್ಳ ಸಾಗಾಣಿಕೆ ಮಾಡಿ ಪರಪ್ಪನ ಅಗ್ರಹಾರದ ಜೈಲು ಪಾಲಾಗಿದ್ದ ಕಾರವಾರ-ಅಂಕೋಲಾದ ಪಕ್ಷೇತರ ಶಾಸಕ ಸತೀಶ್ ಸೈಲ್ ಮಧ್ಯಂತರ ಜಾಮೀನಲ್ಲಿ ಮನೆಗೆ ಬಂದಿದ್ದಾನೆ. ಕ್ಯಾನ್ಸರ್‌ನಿಂದ ಕೊನೆ ಕಾಲದಲ್ಲಿರುವ ತನ್ನ ತಂದೆಯ ಆರೈಕೆಗಾಗಿ ಜಾಮೀನು ಕೇಳಿದ್ದ ಸೈಲ್‌ಗೆ 'ರಜೆ' ಸಿಕ್ಕಿದೆ. ಸೈಲ್ ಅಪ್ಪನ ಸೇವೆ ಮಾಡ್ತಾನೋ? ಇಲ್ಲ ರಾಜಕೀಯ ಮಾಡ್ತಾನೋ ರಜೆಯಲ್ಲಿ ಎಂಬುದು ಕಾರವಾರದ ಜನರಿಗಂತೂ ಅಂಥ ಮಹತ್ವದ ಸಂಗತಿ ಅನ್ನಿಸುತ್ತಿಲ್ಲ.

ಸೈಲ್‌ಗೆ 'ರಜೆ' ಸಿಕ್ಕಿರುವುದು ಆತನಿಗಿಂತ ಮಂತ್ರಿ ದೇಶಪಾಂಡೆಗೇ ಹೆಚ್ಚು ಖುಷಿ ಕೊಟ್ಟಂತಿದೆ. ಸೈಲ್ ಜೈಲಲ್ಲೇ ಬಹುಕಾಲ ಉಳಿದರೆ ತನ್ನ ವೈರಿ ಆನಂದ್ ಅಸ್ನೋಟಿಕರ್ ಚಿಗುರಬಹುದೆಂಬ ಆತಂಕ ದೇಶಪಾಂಡೆಗೆ. ಕೋಟ್ಯಂತರ ರೂಪಾಯಿ ಅದಿರು ಕಳ್ಳ ಸಾಗಾಣಿಕೆ ಮಾಡಿ ಸಿಬಿಐ ಬೋನಿಗೆ ಬಿದ್ದಿರುವ ಸೈಲ್ ಅದೆಂದು ಹೊರಬರುತ್ತಾನೋ ಎಂಬ ಆತುರ-ಕಾತುರದಲ್ಲಿ ದೇಶಪಾಂಡೆಗೆ ಬಿಪಿ ಏರಿಹೋಗಿದೆ! ಏಕೆಂದರೆ, ಮಗನನ್ನು ಲೋಕಸಭೆ ಕ್ಯಾಂಡಿಡೇಟ್ ಮಾಡುವ ಲೆಕ್ಕಾಚಾರದಲ್ಲಿರುವ ದೇಶಪಾಂಡೆಗೆ ಕಾರವಾರದಲ್ಲಿ ಒಂದೋ ಸೈಲ್ ಬೆಂಬಲ ಬೇಕು. ಇಲ್ಲವೇ ಅಸ್ನೋಟಿಕರ್ ಕೃಪೆ ಬೇಕು.







ಸೈಲ್ ಒಳಗುಳಿದರೆ ಅನಿವಾರ್ಯವಾಗಿ ದೇಶಪಾಂಡೆ ಅಸ್ನೋಟಿಕರ್‌ನ ಓಲೈಸಿಕೊಳ್ಳುವ ದರ್ದು ಬರುತ್ತದೆ. ಅದಾತನಿಗೆ ಇಷ್ಟವಿಲ್ಲ. ಸೈಲ್‌ನೇ ಕಾರವಾರದ ಬಲಗೊಳ್ಳಬೇಕೆಂಬುದು ದೇಶಪಾಂಡೆ ಇರಾದೆ. ಯಾವಾಗ ಸೈಲ್ ಜೈಲು ಸೇರಿದನೋ, ಆಗ ಅಸ್ನೋಟಿಕರ್ ಬಲದಿಂದ ವಿಧಾನಸಭೆ ಹೊರಬಂದು ರಾಜಕಾರಣ ಶುರು ಹಚ್ಚಿಕೊಂಡಿದ್ದ ಕೆಪಿಸಿಸಿ ಅಧ್ಯಕ್ಷ ಪರಮೇಶ್ವರ್‌ಗೆ ಅಬ್ಬಾ, ಅಬ್ಬಾ ಮಾಡಿ ಕಾಂಗ್ರೆಸ್ ಸೇರಲು ಸರದಿಯಲ್ಲಿ ನಿಂತಿರುವ ಅಸ್ನೋಟಿಕರ್‌ಗೆ ದೇಶಪಾಂಡೆ ಅಡ್ಡಗಾಲು ಹಾಕುತ್ತಿದ್ದಾರೆ. ಮ್ಯಾಗಿ ದಿಲ್ಲಿಯಲ್ಲಿ ಆದೆಷ್ಟೇ ಶಿಫಾರಸು ಹಾಕಿದರೂ ದೇಶಪಾಂಡೆ ಬೆಂಗಳೂರಲ್ಲಿ ಅಸ್ನೋಟಿಕರ್‌ಗೆ ತಡೆಯೊಡ್ಡುತ್ತಿದ್ದಾರೆ. ಜೊತೆಗೆ ಕಾಂಗ್ರೆಸ್ ಬಂಡಾಯ ಅಭ್ಯರ್ಥಿಯಾಗಿ ನಿಂತು ಗೆದ್ದಿರುವ ಸೈಲ್‌ನನ್ನು ಕಾಂಗ್ರೆಸ್ ತೆಕ್ಕೆಗೆ ತರಲು ಪ್ರಯತ್ನ ನಡೆಸಿದ್ದಾರೆ.

ಮಂತ್ರಿ ದೇಶಪಾಂಡೆ ಮೊನ್ನೆ ಸೈಲ್ ಮನೆಗೆ ಹೋಗಿ ಬಂದಿರುವುದು ದೊಡ್ಡ ಸುದ್ದಿಯಾಗಿದೆ. ಮಂತ್ರಿ ದೇಶಪಾಂಡೆ ಕೋಟ್ಯಂತರ ರೂಪಾಯಿ ಅದಿರು ಕದ್ದು ಮಾರಿದ ಆರೋಪಿ ಮನೆಗೆ ಹೋಗಿದ್ದು ನೈತಿಕವಾಗಿ ಆಕ್ಷೇಪಾರ್ಹವೇ. ದೇಶಪಾಂಡೆ ಸೈಲ್ ತಂದೆಯ ಆರೋಗ್ಯ ವಿಚಾರಿಸಲೆಂದು ಹೋಗಿದ್ದರೋ? ಸೈಲ್‌ಗೆ ಜೈಲು ಸೇರಿದ್ದಕ್ಕೆ, ಸಾಂತ್ವನ-ಧೈರ್ಯ ಹೇಳಲು ಹೋಗಿದ್ದರೋ? ದೇಶಪಾಂಡೆಗೆ ಸೈಲ್‌ನನ್ನು ಪೂಸಿ ಹೊಡೆವ ದರ್ದು ಬಂದಿದ್ದೇಕೆ? ಪಕ್ಷದ ಶಾಸಕನೂ ಅಲ್ಲದ, ಪಕ್ಷೇತರ ಶಾಸಕನ ಮನೆಗೆ ಹೋಗಿ ಆತನ "ರಾಜಕೀಯ ಆರೋಗ್ಯ"ದ ಚರ್ಚೆ ನಡೆಸಿರುವ ದೇಶಪಾಂಡೆಗೆ ಇದೆಲ್ಲ ಬೇಕಿತ್ತಾ? ಸೈಲ್ ಅಪ್ಪನ ಆರೋಗ್ಯ ವಿಚಾರಿಸುವ ನೆಪದ ದೇಶಪಾಂಡೆ ರಾಜಕೀಯ ನಿಜಕ್ಕೂ ನಾಚಿಕೆಗೇಡು.

ತಲೆ ಮಾಸಿರುವ ದೇಶಪಾಂಡೆಯ ಪುತ್ರ ಪ್ರಶಾಂತ್, ಅಧಿಕಾರಲಾಲಸೆ ರಾಜಕಾರಣ ಉತ್ತರ ಕನ್ನಡಿಗರಿಗೆ ವಾಕರಿಕೆ ಮೂಡಿಸಿಬಿಟ್ಟಿದೆ. ಅತ್ತ ಸಿಎಂ ಸಿದ್ದು ಅದಿರು ಕಳ್ಳರನ್ನು ಹೆಡೆಮುರಿ ಕಟ್ಟಲು ಸಿಬಿಐ ತನಿಖೆಗೆ ಆದೇಶಿಸುತ್ತಿದ್ದರೆ, ಇತ್ತ ಆತನ ಸೀನಿಯರ್ ಮಂತ್ರಿ ಅದಿರುಗಳ್ಳನ ಮನೆಗೇ ಹೋಗಿ "ಬೆಂಬಲ" ನೀಡುತ್ತಿರುವುದು ವಿಚಿತ್ರವಾದರೂ ಸತ್ಯ.

ಸಿಎಂ ಸಿದ್ದು ದೇಶಪಾಂಡೆಗೆ ಅಂಕುಶ ಇಡದಿದ್ದರೆ ಆತ ಸರ್ಕಾರಕ್ಕೆ ಹೊರೆಯಾಗೋದು ಗ್ಯಾರಂಟಿ! ■

ಸೌಜನ್ಯ ಕೊಲೆ–ಧರ್ಮ ಸಂಸ್ಥಾನ ಹೈರಾಣ!!



ಧರ್ಮಸ್ಥಳ ರಿಪಬ್ಲಿಕ್ ಸತ್ಯ ಮತ್ತು ನ್ಯಾಯದ ದಾಳಿಗೆ ತತ್ತರಿಸುತ್ತಿದೆ!

ಅಮಾಯಕ ಹುಡುಗಿ ಸೌಜನ್ಯಳ ಅತ್ಯಾಚಾರ ಮತ್ತು ಅಮಾನುಷ ಹತ್ಯೆ ಈ ಪ್ರದೇಶದ ಅಧರ್ಮ-ಅನ್ಯಾಯ-ಅತ್ಯಾಚಾರ-ಅವ್ಯವಹಾರ-ಅನಾಚಾರ... ಒಂದೊಂದಾಗಿ ಅನಾವರಣ ಮಾಡುತ್ತಿದೆ. ಕಳೆದೊಂದು ವರ್ಷದಿಂದ ಈ ಮರ್ಡರ್ ಮಿಸ್ಟರಿ ಧರ್ಮಸ್ಥಳದ ಅನಭಿಷಕ್ತ ದೊರೆ ವೀರೇಂದ್ರ ಹೆಗ್ಗಡೆಯ ಆಸ್ಥಾನದ ಅಂಗಳದಲ್ಲೇ ಗಿರಕಿ ಹೊಡೆಯುತ್ತಲೇ ಇತ್ತು, ಆದರೆ ಇವತ್ತು ಸೌಜನ್ಯಾಳ ಪ್ರೇತ ಧರ್ಮಪೀಠದ ಪಡಸಾಲೆಗೇ ಬಂದು ನಿಂತಿದೆ!

ಇಡೀ ಬೆಳ್ತಂಗಡಿ ತಾಲ್ಲೂಕಿಗೆ ತಾಲ್ಲೂಕೇ ಈಗ ಸೌಜನ್ಯಳ ಪರ ಎದ್ದು ನಿಂತಿದೆ. ಸೌಜನ್ಯ ಕೊಲೆ-ಅತ್ಯಾಚಾರ ಪ್ರಕರಣವನ್ನು ಸಿಬಿಐಗೆ ಕೊಡಬೇಕೆಂದು ಒಕ್ಕೊರಲಿಂದ ಕೂಗುತ್ತಿದೆ. ಹಲವು ವಿಷಯಗಳಲ್ಲಿ ಸಿಬಿಐ ಸಂಸ್ಥೆ ಹಲ್ಲಿಲ್ಲದ ಹಾವು ಎಂಬುದು ಹೋರಾಟಗಾರರಿಗೂ ಗೊತ್ತಿದೆ. ಆದರೆ ಸಿಬಿಐ ತನಿಖೆಗೆ ಧರ್ಮಸ್ಥಳ ರಿಪಬ್ಲಿಕ್‌ನ 'ಪುಣ್ಯ' ಕಾರ್ಯಗಳೆಲ್ಲ ಒಳಪಟ್ಟರೆ, ಧರ್ಮದ ಪಾಳೇಗಾರರ ಅಟ್ಟಹಾಸಕ್ಕೆ ಒಂಚೂರು ಕಡಿವಾಣ ಬಿದ್ದೀತೆಂಬ ನಿರೀಕ್ಷೆ ಬೆಳ್ತಂಗಡಿ ಭಾಗದ ಜನರದು. ಸಿಡಿದೆದ್ದಿರುವ ಬೆಳ್ತಂಗಡಿಯ ಗ್ರಾಮೀಣ ಭಾಗದ ಜನರ ಪ್ರತಿಭಟನೆ-ಉಪವಾಸ ಸತ್ಯಾಗ್ರಹ-ರ್‍ಯಾಲಿಗಳೆಲ್ಲವೂ ಸಾಕ್ಷಾತ್ ಹೆಗ್ಗಡೆಜೀಯನ್ನೇ ಆರೋಪಿ ಸ್ಥಾನದಲ್ಲಿ ನಿಲ್ಲಿಸಿಬಿಟ್ಟಿದೆ.

ಕಳೆದ 30 ವರ್ಷದಿಂದ ಧರ್ಮಸ್ಥಳ ಸಂಸ್ಥಾನವನ್ನು ಆಳಿರುವ ಧರ್ಮಾಡಳಿತಗಾರರು ಈಗ ಕಂಗಾಲಾಗಿದ್ದಾರೆ. ಸೌಜನ್ಯ ಪ್ರಕರಣ ದೇವದೂತರಿಗೆ ಮಗ್ಗಲು ಮುಳ್ಳಾಗಿ ಕ್ಷೇತ್ರದ 'ಮಹಿಮೆ' ಮಣ್ಣಾಗಿಸುತ್ತಿದೆ! ಮಾತಾಡದ ಮಂಜುನಾಥನನ್ನು ಮುಂದಿಟ್ಟುಕೊಂಡು ಪ್ರಪಂಚಕ್ಕೇ ನ್ಯಾಯ ನೀಡುವ ವೀರೇಂದ್ರ ಹೆಗ್ಗಡೆ ಅದೆಷ್ಟು ದಿಕ್ಕೆಟ್ಟಿದ್ದಾರೆಂದರೆ, ತಾನು ಅನ್ಯಾಯಗಾರನಲ್ಲ, ತಮ್ಮ ಸಹೋದರ ಕೊಲೆಗಡುಕನಲ್ಲ, ತಮ್ಮನ ಮಗ ಅತ್ಯಾಚಾರಿಯಲ್ಲ, ತಮ್ಮ ಧರ್ಮಾಡಳಿತದ ಯಾವ ಸಿಬ್ಬಂದಿಯೂ ಪಾಪಿಯಲ್ಲ ಎಂದು ಸ್ಪಷ್ಟೀಕರಣ ಕೊಡುವ 'ಧರ್ಮ ಸಂಕಟ'ಕ್ಕೆ ಈಡಾಗಿದ್ದಾರೆ. ಪಕ್ಕಾ ರಾಜಕಾರಣಿಯ ಶೈಲಿಯಲ್ಲಿ ಅಭಿಮಾನಿಗಳ ಸಮಾವೇಶ ನಡೆಸಿ, ಪತ್ರಿಕಾಗೋಷ್ಠಿ ಮಾಡಿ ತಮ್ಮ 'ಪಾವಿತ್ರ್ಯ' ತೋರಿಸಿಕೊಳ್ಳಬೇಕಾಗಿ ಬಂದಿದೆ ಹೆಗ್ಗಡೆಜೀಗೆ.

ಸೌಜನ್ಯ ರೇಪ್ ಅಂಡ್ ಮರ್ಡರ್ ಕೇಸನ್ನು ಸಿಐಡಿ ತನಿಖೆಗೆ ಹಿಂದಿನ ಚಡ್ಡಿ-ಖಾವಿ ಸರ್ಕಾರ ಒಪ್ಪಿಸಿದಾಗಲೇ ಪೂಜ್ಯ ವೀರೇಂದ್ರ ಹೆಗ್ಗಡೆಯವರ ಆಪ್ತರ ಮಾನ-ಮರ್ಯಾದೆ ಕಾಪಾಡಿ ಕ್ಲೀನ್ ಚಿಟ್ ನೀಡುವ ನಾಟಕ ಇದೆಂದು ಇಡೀ ಪ್ರಪಂಚಕ್ಕೆ ಖಾತ್ರಿಯಾಗಿಹೋಗಿತ್ತು, ಧರ್ಮಕ್ಷೇತ್ರದಲ್ಲಿ ನೆಮ್ಮದಿ ಅರಸುತ್ತ ಅಂಡಲೆಯುತ್ತಿದ್ದ ಮನೋರೋಗಿ ಸಂತೋಷ್‌ರಾವ್ ಎಂಬಾತನೇ ರೇಪಿಸ್ಟ್-ಕೊಲೆಗಡುಕನೆಂದು ಬಿಂಬಿಸಲು ಅಂದಿನ ಬೆಳ್ತಂಗಡಿ ಪಿಎಸ್‌ಐ ಯೋಗೀಶ್ ಕಂಕಣಬದ್ಧನಾಗಿ ನಿಂತಿದ್ದ, ಸಿಐಡಿ ತಂಡವೂ ಈ ಯೋಗೀಶ್‌ನ ಮಾರ್ಗದರ್ಶನದಲ್ಲೇ ತನಿಖೆ ಮಾಡಿತೇ ವಿನಃ ಸ್ವತಂತ್ರವಾದ-ನ್ಯಾಯಬದ್ಧವಾದ ವಿಚಾರಣೆ ನಡೆಸಲೇ ಇಲ್ಲ.

ಬೆಳ್ತಂಗಡಿ-ಉಜಿರೆ-ಧರ್ಮಸ್ಥಳದ ಸುತ್ತಲಿನ 'ಜನತಾ ನ್ಯಾಯಾಲಯ'ದಲ್ಲಿ ಸೌಜನ್ಯಳ ತಿಂದು ಮುಗಿಸಿದ ಆರೋಪ ಹೊತ್ತಿರುವವರು ಮೂವರು ದುಷ್ಟರು: ಧರ್ಮಸ್ಥಳದ ಊಟದ ಛತ್ರದ ಉಸ್ತುವಾರಿ ರವಿರಾಜ್ ಕೆಲ್ಲಾನ ಮಗ ಧೀರಜ್, ದೇವಾಲಯದ ಆಯಕಟ್ಟಿನ ಜಾಗದಲ್ಲಿರುವ ಮೇಘರಾಜ್ ಜೈನ್ ಪುತ್ರ ಮಲ್ಲಿಕ್ ಮತ್ತು ಧರ್ಮಸ್ಥಳ ಸಂಸ್ಥಾನದ ರಿಜಿಸ್ಟ್ರೇಷನ್ 'ಡಿ' ನಂಬರ್ ಹೊಂದಿರುವ ಆಟೋ ಚಾಲಕ ಉದಯ್ ಜೈನ್ ಈ ಅತ್ಯಾಚಾರ-ಕೊಲೆ ಮಾಡಿದ್ದಾರೆಂಬುದು ಧರ್ಮಸ್ಥಳ ಸೀಮೆಯಲ್ಲಿರುವ ಸಾಮಾನ್ಯ ಜನರ ಅಭಿಪ್ರಾಯ. ಇವರೆಲ್ಲ ಅತ್ಯಾಪ್ತ ಮಿತ್ರರು; ಒಂದು 'ಹಣ್ಣು' ಸಿಕ್ಕರೆ ಹಂಚಿ ತಿನ್ನುವವರು.

ಖಾವಂದರೆ, ಆಣೆ ಮಾಡ್ತೀರಾ?



ಗಂಡ-ಹೆಂಡತಿ ಜಗಳದಿಂದ ತೋಟ-ಗದ್ದೆಯ ವ್ಯಾಜ್ಯದ ತನಕದ, ಮೋಸ-ವಂಚನೆಯಿಂದ ಕೊಲೆ-ಸುಲಿಗೆ ತನಕದ, ಯಡ್ಡಿ-ಶೋಭಾ-ಕುಮ್ಮಿಗಳ ದಗಲುಬಾಜಿ ರಾಜಕಾರಣದಿಂದ ದೋಖಾ ದಂಧೆಗಳ ತನಕದ ಸತ್ಯಾಸತ್ಯತೆ, ನ್ಯಾಯಾನ್ಯಾಯದ ಇತ್ಯರ್ಥಕ್ಕೆ ಧರ್ಮಸ್ಥಳದ ಸತ್ಯ-ನ್ಯಾಯ ವ್ಯವಸ್ಥೆ ಹಲವು ಬಾರಿ ನೆರವಾಗಿದೆ. ಇಂಥದೊಂದು ನ್ಯಾಯದಾನ ಸಂಪ್ರದಾಯದ ನಾಯಕತ್ವ ವೀರೇಂದ್ರ ಹೆಗ್ಗಡೆ ವಹಿಸಿಕೊಂಡು ಬಂದಿದ್ದಾರೆ.

ಈಗ ಸೌಜನ್ಯ ರೇಪ್ ಅಂಡ್ ಮರ್ಡರ್ ಅಪವಾದ 'ಧರ್ಮದರ್ಶಿ'ಯವರ ಆಪ್ತರಿಗೇ ಅಂಟಿಕೊಂಡಿದೆ. ಧರ್ಮಸ್ಥಳ ದೇವಸ್ಥಾನದ ಆಯಕಟ್ಟಿನ ಸ್ಥಳದ ಉಸ್ತುವಾರಿಗಳಾಗಿ ಹೆಗ್ಗಡೆ ಕುಟುಂಬಕ್ಕೆ ಅತ್ಯಾಪ್ತರಾಗಿರುವವರ ಮಕ್ಕಳೇ ಸೌಜನ್ಯಳ ತಿಂದು ಮುಗಿಸಿದ್ದಾರೆಂಬ ಆರೋಪ ಬಿರುಸಾಗಿ ಕೇಳಿಬರುತ್ತಿದೆ. ಈ ಅಪವಾದ ಹೆಗ್ಗಡೆಯವರ ವಿಶ್ವಾಸಾರ್ಹತೆ ಮತ್ತು ಆತ ನೀಡುವ ನ್ಯಾಯದಾನ ವ್ಯವಸ್ಥೆಗೆ ಸವಾಲಾಗಿದೆ. ಸ್ವತಃ ಹೆಗ್ಗಡೆಯೇ ಇಡೀ ಪ್ರಕರಣದಲ್ಲಿ ತನ್ನನ್ನು ಟಾರ್ಗೆಟ್ ಮಾಡಲಾಗಿದೆಯೆಂದು ಅಲವತ್ತುಕೊಂಡಿದ್ದಾರೆ. ಹಾಗಂತ ಆತ ಭಾವಿಸುವುದೇ ಸರಿಯಲ್ಲ.

ಆದರೆ ಹೆಗ್ಗಡೆಜೀಗೆ ತಾವು ಮತ್ತು ತಮ್ಮ ಆಪ್ತರ ಪರಿವಾರ ನಿಷ್ಕಳಂಕಿತ ಎಂದು ಸಾಬೀತುಪಡಿಸಲು ಧರ್ಮಸ್ಥಳದ ಸುಪ್ರಸಿದ್ಧ ಆಣೆ-ಪ್ರಮಾಣ ಪದ್ಧತಿ ಏಕೆ ನೆರವಿಗೆ ಬರುತ್ತಿಲ್ಲ? ಸೌಜನ್ಯ ಪ್ರಕರಣದಲ್ಲಿ ಧರ್ಮಸ್ಥಳ ಕ್ಷೇತ್ರ ಮತ್ತು ತನ್ನ ವ್ಯಕ್ತಿತ್ವಕ್ಕೆ ಡ್ಯಾಮೇಜು ಆಗಿರುವುದರಿಂದ ಸಂಶಯಿತ ಸ್ವ-ಜಾತಿ ಆರೋಪಿಗಳಿಂದ ಧರ್ಮಾಧಿಕಾರಿಗಳೇಕೆ ಪ್ರಮಾಣ ಮಾಡಿಸಬಾರದು? ಹೆಗ್ಗಡೆಯೇ ಮುಂದಾಗಿ ಆರೋಪಿತ ಆಪ್ತರನ್ನು ಅಣ್ಣಾ ಸ್ವಾಮಿ-ಮಂಜುನಾಥ ಸ್ವಾಮಿ ಮುಂದೆ ನಿಲ್ಲಿಸಿ ಸೌಜನ್ಯ ಕೊಲೆ-ಅತ್ಯಾಚಾರದಲ್ಲಾಗಲೀ ಅದಕ್ಕಿಂತ ಹಿಂದಿನ ಕೊಲೆ-ಅತ್ಯಾಚಾರ-ಆತ್ಮಹತ್ಯೆ-ಕಣ್ಮರೆ ಪ್ರಕರಣದಲ್ಲಾಗಲೀ ತಮ್ಮದೇನೂ ಕೈವಾಡವಿಲ್ಲವೆಂದು ಪ್ರಮಾಣ-ಆಣೆ ಏಕೆ ಮಾಡಿಸಬಾರದು? ಆಗದವರ ವಿರುದ್ಧ ಕೋರ್ಟು-ಕಚೇರಿಗೆ ಹೋಗೋದು ಬಿಟ್ಟು ಎಲ್ಲವೂ ಮಂಜುನಾಥ ಸ್ವಾಮಿಗೇ ಏಕೆ ಹೆಗ್ಗಡೆ ಬಿಡಬಾರದು?

ಆಗ ಎಲ್ಲ ಸಂಶಯ ಪರಿಹಾರ ಆಗುತ್ತಿತ್ತು, ಹೆಗ್ಗಡೆಗೆ ತಾವೇ ನೇತೃತ್ವ ವಹಿಸಿರುವ ನ್ಯಾಯ ಪದ್ಧತಿ ಮೇಲೆ ನಂಬಿಕೆ ಇಲ್ಲವಾ?





ಸಿಐಡಿ ಕಳ್ಳಾಟ

ಸೌಜನ್ಯ ಸಾವಿಗೆ ಸಿಐಡಿಯಿಂದ ನ್ಯಾಯ ಸಿಗುವ ಯಾವ ಲಕ್ಷಣವೂ ಇಲ್ಲ, ಸಿಐಡಿ ಪೊಲೀಸರು, ಸೌಜನ್ಯಳ ಶವದ ಪೋಸ್ಟ್ ಮಾರ್ಟಮ್ ಮಾಡಿರುವ ವೈದ್ಯರು, ಆಡಳಿತ ನಡೆಸಿದ ಬಿಜೆಪಿಗಳು, ಈಗ ಅಧಿಕಾರದಲ್ಲಿರುವ ಕಾಂಗ್ರೆಸಿಗರೆಲ್ಲ ತನಿಖೆಯನ್ನು ಹಳ್ಳ ಹಿಡಿಸಿದ್ದಾರೆ. ಸೌಜನ್ಯ ಕಾಣೆಯಾದ ರಾತ್ರಿ ನೇತ್ರಾವತಿ ನದಿ ದಂಡೆಯ ಕಾಡಲ್ಲಿ ನೂರಾರು ಜನರು ಹುಡುಕಾಡಿದ್ದರು. ಅದೇ ಜಾಗದಲ್ಲಿ ಮರುದಿನ ಆಕೆಯ ಶವ ಸಿಕ್ಕಿದೆ. ಅಂದರೆ ರೇಪ್ ಅಂಡ್ ಮರ್ಡರ್ ಯಾವುದೋ ಬಂಗಲೆಯಲ್ಲಿ ಅಥವಾ ಹತ್ತಿರದ ರೆಸಾರ್ಟ್‌ನಲ್ಲಿ ನಡೆದಿರುವುದು ಖಾತ್ರಿ ಪಡಿಸುವಂತಿದೆ. ಅಂದು ಇಡೀ ರಾತ್ರಿ ಮಳೆ ಸುರಿದಿತ್ತು, ಆದರೆ ಸೌಜನ್ಯಳ ಹೆಣಕ್ಕೆ ನೀರೇ ತಾಗಿರಲಿಲ್ಲ ಹೇಗೆ?

ಸೌಜನ್ಯಳ ಗುಪ್ತಾಂಗದ ಮೇಲೆ ಇದ್ದ ಮಣ್ಣು ಮತ್ತು ಆಕೆಯ ಹೆಣ ಸಿಕ್ಕಿದ ಪ್ರದೇಶದ ಮಣ್ಣಿನ ಪರೀಕ್ಷೆ ಪೊಲೀಸರು ಮಾಡಿದಂತಿಲ್ಲ, ಆಕೆಯ ಮೈಮೇಲೆ ಯಾರದೋ ಬಟ್ಟೆ ಹೇಗೆ ಬಂದಿತ್ತು?

ಮತ್ತೊಂದು ಮಹತ್ವದ ಅಂಶ ಇಲ್ಲಿದೆ. ಸೌಜನ್ಯ ರೇಪ್ ಅಂಡ್ ಮರ್ಡರ್ ಕೇಸ್‌ನಲ್ಲಿ ರವಿ ಪೂಜಾರಿ ಎಂಬ ಸಾಕ್ಷಿದಾರನಿದ್ದ. ಆತ ಈಗ ಕಣ್ಮರೆಯಾಗಿದ್ದಾನೆ.

ವೇದವಲ್ಲಿಯ ವೇದನೆಯ ಕತೆ!!

ಧರ್ಮಸ್ಥಳದ ಮಂಜುನಾಥ ಅದೆಷ್ಟು ಅಮಾಯಕ ಹೆಣ್ಣುಗಳ ನಿಗೂಢ ಸಾವಿನ ರಹಸ್ಯ ಹೊಟ್ಟೆಯಲ್ಲಿಟ್ಟುಕೊಂಡಿದ್ದಾನೋ ಅವನಿಗಷ್ಟೇ ಗೊತ್ತು, ಈ ದೇವರ ನಾಡಿನಲ್ಲಿ ಮೊಟ್ಟ ಮೊದಲು ಸುದ್ದಿಯಾದ ಸಾವಿನ ಕತೆ ವೇದವಲ್ಲಿ ಹರಳೆ ಎಂಬ ಶಿಕ್ಷಕಿಯದು. 1979ರಲ್ಲಿ ಆಕೆ ಮನೆಯಲ್ಲೇ ಬೆಂಕಿಗಾಹುತಿ ಆದಾಗ ಸಂಶಯ ನಾಟಿದ್ದು ಧರ್ಮ ಸಂಸ್ಥಾನದ 'ಎಕ್ಸಿಕ್ಯೂಟಿವ್ ಡೈರೆಕ್ಟರ್' ಮೇಲೆ! ಅಧ್ಯಕ್ಷರ ಮೇಲಲ್ಲ.

ಈ 'ಇಡಿ'ಗೆ ವೇದವಲ್ಲಿ ಸೆಡ್ಡು ಹೊಡೆದು ನ್ಯಾಯ ಕೇಳಿದ್ದೇ ದೊಡ್ಡ ಅಪರಾಧವಾಗಿತ್ತು, ವೇದವಲ್ಲಿಯ ಗಂಡ ಗವರ್ನಮೆಂಟ್ ವೈದ್ಯರಾಗಿ ಉಜಿರೆಗೆ ಬಂದಿದ್ದರು. ಆತನ ಮಡದಿ ದೇವಧೂತರ ಶಾಲೆಯಲ್ಲಿ ಶಿಕ್ಷಕಿಯಾಗಿದ್ದಳು. ಸೀನಿಯಾರಿಟಿ ಪ್ರಕಾರ ಆಕೆಗೆ ಪದೋನ್ನತಿ ಸಿಗಬೇಕಿತ್ತು, ಅಂದರೆ ಆಕೆ ಶಾಲೆಯ ಮುಖ್ಯೋಪಾಧ್ಯಾಪಕಿ ಆಗಬೇಕಿತ್ತು, ಆದರೆ ವೇದವಲ್ಲಿಗೆ ಪ್ರಮೋಷನ್ ಕೊಡಲು 'ಇಡಿ' ಒಪ್ಪಲಿಲ್ಲ, ವೇದವಲ್ಲಿ ಪಟ್ಟು ಬಿಡಲಿಲ್ಲ, ನ್ಯಾಯ ಕೇಳಿದರು. ಆಗ ಬೆದರಿಕೆ ಬಂತು. ಆಕೆ ಕೇರ್ ಮಾಡಲಿಲ್ಲ, ಕೋರ್ಟಿಗೆ ಹೋದರು..

ಇದು ದೇವರ ಹೆಸರಲ್ಲಿ ಧರ್ಮಾಡಳಿತ ಮಾಡುತ್ತಿದ್ದವರನ್ನು ಕೆರಳಿಸಿತು. ಅಕಟಕಟಾ... ಪ್ರಶ್ನಾತೀತರಾದ ತಮಗೆ ಎದುರು ನಿಲ್ಲುವ ಉದ್ಧಟ ಮಹಿಳೆಗೆ ಪಾಠ ಕಲಿಸಲು ಧರ್ಮಸ್ಥಳ ರಿಪಬ್ಲಿಕ್ ಸರ್ಕಾರ ಸ್ಕೆಚ್ ಹಾಕೇ ಬಿಟ್ಟಿತು. ಆಕೆ ಸತ್ತರಷ್ಟೇ ಸ್ವ-ಜಾತಿ (ಜೈನ) ಹೆಂಗಸಿಗೆ ಪ್ರಮೋಷನ್ ಕೊಡಲು ಸಾಧ್ಯ ಎಂಬ 'ಸತ್ಯ' ಇಡಿಗೆ ಸಾಕ್ಷಾತ್ಕಾರವಾಗಿತ್ತು, ಯಾವ ಬೆದರಿಕೆಗೂ ಆಕೆ ಜಗ್ಗಲಿಲ್ಲ, ಬಗ್ಗಲಿಲ್ಲ, ನ್ಯಾಯಾಲಯದಲ್ಲಿ ಹೋರಾಟ ಮುಂದುವರಿಸಿದ್ದರು.

ಅದೇನಾಯ್ತೋ?! ಒಂದು ನಡು ಮಧ್ಯಾಹ್ನ ವೇದವಲ್ಲಿ ಆಕೆಯ ಮನೆಯಲ್ಲೇ ಸುಟ್ಟುಕೊಂಡು ಹೆಣವಾಗಿದ್ದರು. ಡಾ. ಹರಳೆ ತನ್ನ ಹೆಂಡತಿ ಆತ್ಮಹತ್ಯೆ ಮಾಡಿಕೊಳ್ಳುವ ಮನಸ್ಥಿತಿಯವಳಾಗಿರಲಿಲ್ಲ ಎಂದು ಇವತ್ತಿಗೂ ಹೇಳುತ್ತಾರೆ. ಆಕೆಯನ್ನು ಹಂತಕರು ಕೊಂದು ಬೆಂಕಿ ಹಾಕಿದ್ದಾರೆಂದು ಅಂದು ಗುಲ್ಲಾಗಿತ್ತು! ಆದರೆ "ಸತ್ಯ" ಮಾತ್ರ ಮಂಜುನಾಥನ ಹೊಟ್ಟೆಯಲ್ಲೇ ಹುಗಿದುಹೋಯಿತು.

ತನಿಖೆ-ವಿಚಾರಣೆ ಒಂದಿಂಚೂ ಮುಂದೆ ಹೋಗಲಿಲ್ಲ, ಈಗ ವಯೋವೃದ್ಧರಾಗಿರುವ ಡಾ. ಹರಳೆ ಆ ದುರಂತ ಕತೆ ಈಗಲೂ ಕರುಣಾಜನಕವಾಗಿ ವಿವರಿಸುತ್ತಾರೆ. ಇಡೀ ಪ್ರಪಂಚಕ್ಕೇ ನ್ಯಾಯ ಕೊಡುವ ಧರ್ಮಸ್ಥಳದಲ್ಲಿ ವೇದವಲ್ಲಿಗೆ ಬದುಕಿದ್ದಾಗ ನ್ಯಾಯ ಸಿಗಲಿಲ್ಲ; ಆಕೆಯ ಸಾವಿಗೂ ದೇವಧೂತರ ಅಡಿಯಾಳಿನಂಥ ಸರ್ಕಾರಗಳು ಕೂಡ ಅನ್ಯಾಯವೇ ಮಾಡಿತು.

ಇದು ದುರ್ಧರ್ಮಸ್ಥಳದ ಒಂದು ಉಪಕತೆಯಷ್ಟೇ! ವೇದವಲ್ಲಿಯ ನಿಗೂಢ ಸಾವಿನಲ್ಲಿ ತಮ್ಮದೇನೂ ಪಾತ್ರವಿಲ್ಲವೆಂದು "ಇಡಿ" ಸಾಹೇಬರು ಮಂಜುನಾಥನ ಮುಂದೆ ನಿಂತು ಪ್ರಮಾಣ ಮಾಡುವರಾ?

ಈ ಬೋಗಸ್ ನ್ಯಾಯ ವ್ಯವಸ್ಥೆಯ ನಂಬಿಕೆ ಅವರಿಗಿದ್ದರಲ್ಲವಾ ಆಣೆ-ಪ್ರಮಾಣ. ಇದು ಏನಿದ್ದರೂ ಗೊಡ್ಡು ಭಕ್ತಾದಿಗಳ ಶೋಷಣೆಗಷ್ಟೇ!

ಪದ್ಮಲತಾ ಆಹುತಿ!!



ಪದ್ಮಲತಾ ಎಂಬ ಕಾಲೇಜು ಯುವತಿಯ ಹೆಣ ಧರ್ಮಸ್ಥಳದ ನದಿಯಲ್ಲಿ ಫೆಬ್ರವರಿ 17, 1987ರಲ್ಲಿ ಸಿಕ್ಕಾಗ ದೊಡ್ಡ ಅಲ್ಲೋಲಕಲ್ಲೋಲವೇ ಆಗಿತ್ತು, ಆ ಪಾಪದ ಹುಡುಗಿ ಬರೋಬ್ಬರಿ ನಾಲ್ವತ್ತು ದಿನ ಕಾಣೆಯಾಗಿ ಬಳಿಕ ಕೈ-ಕಾಲು ಕಟ್ಟಿದ ಸ್ಥಿತಿಯಲ್ಲಿ ಹೆಣವಾಗಿ ಸಿಕ್ಕಿದ್ದಳು. ಅಂದರೆ ಆಕೆಯನ್ನು ಅಪಹರಿಸಿ 39 ದಿನ ಒತ್ತೆಯಾಳಾಗಿಟ್ಟುಕೊಂಡು ಲೈಂಗಿಕವಾಗಿ ಇಂಚಿಂಚು ಕಿರುಕುಳ ಕೊಡಲಾಗಿತ್ತು, ಆಕೆಯ ಮೇಲೆ ನಿರಂತರ ಅತ್ಯಾಚಾರವೂ ನಡೆದಿತ್ತು, ಬಳಸಿಕೊಂಡು ಬೇಜಾರು ಬಂದಾಗ ಕೊಲೆ ಮಾಡಿ ನದಿಗೆಸೆಯಲಾಗಿತ್ತು, ಹಾಗೆಂಬುದು 'ಪದ್ಮಲತಾ ಪ್ರಕರಣ' ಹೈಲೈಟ್ಸ್.

ದೇವಾನಂದ ಎಂಬ ಕಮ್ಯುನಿಸ್ಟ್ ಮುಂದಾಳಿನ ಮಗಳಾಗಿದ್ದಳು ಪದ್ಮಲತಾ. ಈತನ ಜಾಗದ ಮೇಲೆ ದೇವರ ರಿಪಬ್ಲಿಕ್‌ನ ದೇವಧೂತರ ಕಣ್ಣುಬಿದ್ದಿತ್ತು, ಇಡೀ ಧರ್ಮಸ್ಥಳ- ಉಜಿರೆ ತಮ್ಮ ವಶಾಹತಾಗಿರಬೇಕೆಂಬ ಧ್ಯೇಯ-ಧೋರಣೆ ಸಂಸ್ಥಾನದ "ಇಡಿ" ಸಾಹೇಬರದು. ದೇವಾನಂದ ಯಾವ ಬೆದರಿಕೆಗೂ ಬಗ್ಗದೆ ದೇವಧೂತರ ರೌಡಿಗಳಿಗೆ ಸೆಡ್ಡು ಹೊಡೆದು ನಿಂತುಬಿಟ್ಟಿದ್ದರು. ಆತನಿಗೆ ಪಾಠ ಕಲಿಸಲು ದೇವರ ಕಬ್ಜಾ ಮಾಡಿಕೊಂಡಿದ್ದ ಸ್ವಯಂಘೋಷಿತ ಸಂಭಾವಿತರು ಸಮಯ ಸಾಧಿಸುತ್ತಲೇ ಇದ್ದರು.

ಈ ಭೂ ಭಾನ್ಗಡಿ ನಡೆಯುತ್ತಿದ್ದಾಗಲೇ ಗ್ರಾಮ ಪಂಚಾಯತ್ ಚುನಾವಣೆ ಬಂದಿತ್ತು, ದೇವಾನಂದ ನಾಮಿನೇಷನ್ ಕೊಟ್ಟಿದ್ದರು. ದೇವರಿಗೂ ಕಮ್ಯುನಿಸ್ಟರಿಗೂ ಹೊಂದಾಣಿಕೆ ಸಾಧ್ಯವಾ? ದೇವರನ್ನೇ ಬಂಡವಾಳ ಮಾಡಿಕೊಂಡವರಿಗೆ ದೇವಾನಂದನ ನಾಮಪತ್ರ ನೋಡಿ ಪಿತ್ಥ ನೆತ್ತಿಗೇರಿ ಹೋಯ್ತು, ನಾಮಪತ್ರ ವಾಪಸ್ ಪಡೆಯುವಂತೆ "ದೇವರ" ಕಡೆಯಿಂದ ದೇವಾನಂದರಿಗೆ "ಎಚ್ಚರಿಕೆ" ಸಂದೇಶ ಬಂತು. ಈ ಕಮ್ಯುನಿಸ್ಟ್ ಧರ್ಮಸ್ಥಳ ಗ್ರಾಮ ಪಂಚಾಯತ್ ಸದಸ್ಯನಾದರೆ ತಮಗೆ ತೊಂದರೆ ಆಗುವ ಭೀತಿ ಧರ್ಮರಾಜ್ಯದ ಮಾಂಡಲೀಕರಿಗೆ ಕಾಡುತ್ತಿತ್ತು, ಆದರೆ ಆತ ನಾಮಪತ್ರ ವಾಪಸ್ ಪಡೆಯಲೇ ಇಲ್ಲ.

ದೇವಾನಂದನ ಮೇಲಿನ "ಸೇಡು" ಆತನ ಮಗಳು ಪದ್ಮಲತಾಳ ಬಾಳನ್ನೇ ಕೊನೆಗೊಳಿಸಿಬಿಟ್ಟಿತು. ದೇವಾನಂದನ ಬೆದರಿಸಲು ಆತನ ಮಗಳು ಪದ್ಮಲತಾಳನ್ನು ದೇವರ ಕಡೆಯವರು ಅಪಹರಿಸಿ 39 ದಿನ ಅತ್ಯಾಚಾರ-ಹಿಂಸೆ ನಡೆಸಿದರು. ಪದ್ಮಲತಾ ಎಲ್ಲಿ ಹುಡುಕಿದರೂ ಸಿಗಲಿಲ್ಲ. "ದೇವ ಬಂಧನ"ದಲ್ಲಿದ್ದ ಹುಡುಗಿಯನ್ನು ಹುಲುಮಾನವರು, ದೇವರ ಭಯದ ಪೊಲೀಸರು, ಆಡಳಿತಗಾರರು ಹುಡುಕಲು ಸಾಧ್ಯವಾ.

ಪದ್ಮಲತಾ ಹೆಣವಾಗಿ ಕಂಡುಬಂದಳು. ಇದು ಧರ್ಮಸಂಸ್ಥಾನದ ಕೊಲೆ-ಅತ್ಯಾಚಾರ-ಅವತಾರ- ಅವ್ಯವಹಾರಕ್ಕೆ ಸಾರ್ವಕಾಲಿಕ ಸಂಕೇತದಂತಿದೆ!!

...ೋಗಲಾಡಿ ಸೊರಕೆ



ಧರ್ಮಸ್ಥಳದ ಧರ್ಮಾಧಿಕಾರಿ ...ರೇಂದ್ರ ಹೆಗ್ಗಡೆ ಅಕ್ಷರಶಃ ...ಕಾಲಾಗಿದ್ದಾರೆ. ಸೌಜನ್ಯ ಪರ ಈಗ ...ಗಿಲೆದ್ದಿರುವ ಪ್ರತಿಭಟನೆ ಅವರ ...ತ್ತರಿಸಿಬಿಟ್ಟಿದೆ. ಸೌಜನ್ಯ ರೇಪ್ ...ಡ್ ಮರ್ಡರ್ ಪ್ರಕರಣ ನಿಷ್ಪೂರ ...ಖೆಗೆ ಒಳಪಡಿಸುವಂತೆ ಇಡೀ ...ಳ್ತಂಗಡಿ ತಾಲ್ಲೂಕಲ್ಲಿ ಕೂಗೆದ್ದಿದೆ. ...ಗ ದಕ್ಷಿಣ ಕನ್ನಡದ ಗಡಿದಾಟಿ ಬೆಂಗಳೂರು ತಲುಪಿದೆ. ...ಂ ಮನೆ ಎದುರೂ ಪ್ರತಿಭಟನೆಗಳಾಗಿವೆ. ಮೊದಲ ...ಗೆ ಹೆಗ್ಗಡೆ ರಿಪಬ್ಲಿಕ್ ವಿರುದ್ಧ ಜನ ದಂಗೆ ಎದ್ದಿದ್ದಾರೆ. ...ದರಿಂದ ಕೌಂಟರ್ ಪ್ರತಿಭಟನೆಗೆ ಹೆಗ್ಗಡೆ ...ಂದಾಗುವ ಸಂಕಷ್ಟಕ್ಕೆ ಸಿಲುಕಿದ್ದಾರೆ. ರಾಜಕಾರಣಿಯಂತೆ ...ಮಾನಿ ಸಭೆ ಆತ ನಡೆಸಿ ತನ್ನನ್ನು ಸುಬಗನೆಂದು ...ರ್ಷಿಸಿಕೊಂಡಿದ್ದಾರೆ.

ಈ ಸಭೆಗೆ ನಗರಾಭಿವೃದ್ಧಿ ಮಂತ್ರಿ ವಿನಯ್‌ಕುಮಾರ್ ...ರಕೆ, ಯುವಜನ-ಕ್ರೀಡಾ ಮಂತ್ರಿ ಅಭಯ್‌ಚಂದ್ರ ಜೈನ್ ...ಯಿಸಿದ್ದು ಅಕ್ಷಮ್ಯವೇ ಸರಿ.

"ಖಾವಂದರೆ ಸರ್ಕಾರ ನಿಮ್ಮ ಜೊತೆಯಿದೆ.... ನಿಮ್ಮ ...ತ್ವ ಹರಣಕ್ಕೆ ನಾವು ಬಿಡಲಾರೆವು.... ನಮ್ಮ ಸಿಎಂ ...ವೇ ಖಾವಂದರ ಆಶೀರ್ವಾದ ಪಡೆದು ಸರ್ಕಾರ ...ಸುತ್ತಿದ್ದಾರೆ... ಕ್ಷುಲ್ಲಕ ಕಾರಣಕ್ಕೆ ಹೆಗ್ಗಡೆಜೀಯನ್ನು ಬಲಿ ...ಡಲಾಗುತ್ತಿದೆ......" ಎಂದೆಲ್ಲ ಸೊರಕೆ ಬಡಬಡಿಸಿದ್ದಾರೆ. ...ಂತವೆಂದರೆ ಸೌಜನ್ಯಳಂಥ ನಿಷ್ಪಾಪಿ ಹೆಣ್ಣುಮಗಳ ...ರ ರೇಪ್ ಮತ್ತು ಘೋರ ಹತ್ಯೆ ಸೋಗಲಾಡಿ ...ರಕೆಗೆ ಕ್ಷುಲ್ಲಕ ವಿಷಯದಂತೆ ಗೋಚರಿಸಿದೆ. ಸಿಎಂ ...ವೂ ಹೆಗ್ಗಡೆ ಪರವೆಂದೇ ಆತ ಘೋಷಿಸಿದ್ದಾರೆ. ...ಗಿರುವಾಗ ಸಿಐಡಿ ತನಿಖೆಗೇನು ಅರ್ಥ?

ಸೊರಕೆಯನ್ನು ಸಿದ್ದು ಸಂಪುಟದಿಂದಲೇ ವಜಾ ...ಡಬೇಕು; ಅಷ್ಟೇ ಅಲ್ಲ, ಸಿಎಂ ಕೂಡ ಹೆಗ್ಗಡೆ ...ಯಾಳೆಂಬಂತೆ ಬಿಂಬಿಸಿದ ಮಂತ್ರಿ ಸೊರಕೆಯನ್ನು ಸಿದ್ದು ...ಗೆ ಸಹಿಸಿಕೊಂಡಿದ್ದಾರೋ? ಸೊರಕೆಗೆ ಛಾಟಿ ಬೀಸಿದ ...ದ್ದು ಮೌನ ಆತನ ಬಗ್ಗೆಯೂ ಬೆಳ್ತಂಗಡಿ ಜನರಲ್ಲಿ, ...ಜನ್ಯಳ ಹೆತ್ತವರಲ್ಲಿ, ಹೋರಾಟಗಾರರಲ್ಲಿ ಅನೇಕಾನೇಕ ...ಶಯ ಮೂಡಿಸಿದೆ. ಇದಕ್ಕೆಲ್ಲಾ ಪರಿಹಾರ ಸೊರಕೆಗೆ ...ಕ್ ಕೊಡುವುದಷ್ಟೇ!

ಅಷ್ಟಕ್ಕೂ ಈ ಸೊರಕೆ ಯಾಕೆ ತಾನೊಬ್ಬ ಜವಾಬ್ದಾರಿ ...ತ ಮಂತ್ರಿಯೆಂಬುದೂ ಮರೆತು, ಸೌಜನ್ಯಳ ಹೆತ್ತವರಿ...ಗಿರುವ ನೋವಿಗಿಂತ ಖಾವಂದರ ಪರಿವಾರಕ್ಕಾಗಿರುವ ...ಪಮಾನವೇ ಮುಖ್ಯವೆಂದು ಬಗೆದು ಆ ಸಭೆಯಲ್ಲಿ ...ಗವಹಿಸಿದ್ದಾದರೂ ಏಕೆ? ಏಕೆಂದರೆ, ಸೊರಕೆಗೆ ಹೆಣ್ಣು ...ಟ್ಟ ಮಾವ ರಾಜು ಪೂಜಾರಿ ಧರ್ಮಸ್ಥಳದ 'ಜನಜಾಗೃತಿ' ...ಬ ವಿಂಗ್‌ನ ಪ್ರಮುಖ. ಮಾವನಿಗೆ ಹೆಗ್ಗಡೆ ಮಾಡು...ವ ಉಪಕಾರದ ಋಣ ಆತ ಮಂತ್ರಿಯಾಗಿ ತೀರಿಸಲು ...ರ್ಲಜ್ಜವಾಗಿ ಹಾರಾಡಿದ್ದಾರೆ, ಪಾಪ!

ಇನ್ನು ಕಾಂಗ್ರೆಸ್‌ನ ಜನಾರ್ದನ ಪೂಜಾರಿ, ...ಲ್ ಶಂಕರ್, ಸುದರ್ಶನ್ - ಬಿಜೆಪಿಯ ಸಂಸದ ನಳಿನ್ ...ಲು, ಆರ್. ಅಶೋಕ್, ಸಿ.ಟಿ. ರವಿ... ಮುಂತಾದವರಿಗೆ ...ಜನ್ಯಳ ಶೀಲ-ಪ್ರಾಣಕ್ಕಿಂತ ಹೆಗ್ಗಡೆ ಆಪ್ತರ ಪ್ರತಿಷ್ಠೆಯೇ ...ಖ್ಯವಾಗಿರೋದು ವಿಪರ್ಯಾಸ. ಇದೇನಾ ಧರ್ಮಸ್ಥಳದ ...ಮೆ?!

...ಗೆಯೇ ರವಿರಾಜ್ ಕೆಲ್ಲ (ಆರೋಪಿ ಧೀರಜ್ ಕೆಲ್ಲಾನ ...ದೆ)ರ ಅಳದಂಗಡಿ ಫಾರ್ಮ್ ಹೌಸ್‌ನಲ್ಲಿ ...ದಿಕಾಲದಿಂದ ಕೆಲಸಕ್ಕಿದ್ದ ಹೆಂಗಸು ತೀರಾ ಈಚೆಗೆ ...ಢವಾಗಿ ಬಾವಿಗೆ 'ಬಿದ್ದು' ಸಾವಿಗೀಡಾಗಿದ್ದಾಳೆ. ಈ ...ರಿ ಹೆಂಗಸು ಮತ್ತು ರವಿ ಪೂಜಾರಿಗೆ ಕೆಲ್ಲಾ ಮತ್ತು ...ಸ್ ದ್ವಯರ ಮಿತ್ರ ಮಂಡಳಿಯ ಅಂತರಂಗ-ಬಹಿರಂಗ ...ತ್ತು, ಈಗ ಇವರಿಬ್ಬರ 'ಕಣ್ಮರೆ' ಸೌಜನ್ಯಳ ಅತ್ಯಾಚಾರ-...ಕ್ಕೆ ಪ್ರಕರಣದ ಜತೆ ಥಳಕು ಹಾಕಿಕೊಳ್ಳುತ್ತಿದೆ. ಆ ...ರಿ ಹೆಂಗಸು ಕೊಲೆಯಾದಳಾ? ರವಿ ಪೂಜಾರಿಯನ್ನು ...ಸಗಿಸಿಡಲಾಗಿದೆಯಾ? ಅಥವಾ ಕೊಂದೇ ...ಕಲಾಗಿದೆಯಾ?

ಈ ರಹಸ್ಯ ಕೆದಕಿದಷ್ಟೂ ಸಿಕ್ಕು ಸಿಕ್ಕಾಗುತ್ತಿದೆ. ಒಟ್ಟಿನಲ್ಲಿ ...ರ್ಮದ ಬೀಡಲ್ಲಿ ನ್ಯಾಯದ ನಾಡಲ್ಲಿ ನಡೆದ ವೇದವಲ್ಲಿ ...ಕೆ, ಪದ್ಮಲತಾರ ಕೊಲೆಯ ಸಾಲಿನಲ್ಲಿ ಸೌಜನ್ಯಳ ...ಯೂ ಸೇರಿಹೋಗಿದೆ. ಈ ಮೂರು ರೇಪ್ ಅಂಡ್ ...ರ್ಡರ್ ಒಂಚೂರು ಸುದ್ದಿಯಾದರೂ ಆಗಿದೆ. ಆದರೆ ...ದ ಹೂವತ್ತು ವರ್ಷದಲ್ಲಿ ಮುನ್ನೂರರಷ್ಟಾದರೂ ...ಸಹಜ ರೇಪ್-ಅಸಹಜ ಹತ್ಯೆ ಧರ್ಮಸ್ಥಳ ಕ್ಷೇತ್ರದಲ್ಲಿ ...ಡೆದಿರಬಹುದೆಂಬ ಅಂದಾಜು ಮಾಡಲಾಗಿದೆ. ಇದೆಲ್ಲ ಕಲ್ಲು ...ಚಾರ-ಅಕ್ರಮ ನ್ಯಾಯ ಹಾಗೆ ಅರಿವ ಮಾಡುತ್ತದೋ ...ಜಾಗದಂತಿರುವುದೇ ಧರ್ಮಸ್ಥಳದ ದೊಡ್ಡ ಮಹಿಮೆ!! ...ಧರ್ಮದ ಬೀಡಲ್ಲಿ ದೇವರ ಮಹಿಮೆ ಇಷ್ಟೇನಾ?

■ ಶುದ್ಧೋಧನ



[illegible]

ಲೂಟಿಯಾಗುತ್ತಿದೆ ರಕ್ತಚಂದನ

ಇದು 2012ರ ಆಗಸ್ಟ್ ತಿಂಗಳಿನ ಘಟನೆ. ನಾಲ್ವರು ಚೀನಿ ಪ್ರಯಾಣಿಕರು ಚೀನಾದ ಚೆಂಗ್ಡು ಎಂಬಲ್ಲಿಗೆ ಹೋಗುವ ಸಿ.ಎ. 426 ವಿಮಾನವನ್ನೇರಲು ಬೆಂಗಳೂರು ಏರ್‌ಪೋರ್ಟ್‌ಗೆ ತಮ್ಮ ಲಗೇಜು ಸಮೇತ ಬಂದಿದ್ದರು. ನಿಲ್ದಾಣದ ಸಿಬ್ಬಂದಿ ಯಥಾಪ್ರಕಾರ ಅವರ ಲಗೇಜು ಚೆಕ್ ಮಾಡಿದಾಗ ಒಂದು ಬ್ಯಾಗ್‌ನಲ್ಲಿ ಕಡುಕೆಂಪು ಬಣ್ಣದ ಸಣ್ಣ ಮರದ ತುಂಡು ಸಿಕ್ಕಿತ್ತು. ಏನಿದೆಂದು ವಿಚಾರಿಸಿದಾಗ ಅವರಿಂದ ಸರಿಯಾದ ಉತ್ತರವೇ ಬಂದಿರಲಿಲ್ಲ. ಕೂಡಲೇ ಅನುಮಾನಗೊಂಡು ಅವರ ಎಲ್ಲಾ ಬ್ಯಾಗುಗಳನ್ನು ಖಾಲಿ ಮಾಡಿ ನೋಡಿದಾಗ ಬರೋಬ್ಬರಿ 200 ಕೆಜಿ ತೂಕದ ಕೆಂಪು ತುಂಡುಗಳ ರಾಶಿಯೇ ಹೊರಬಿದ್ದಿತ್ತು. ಸೆಕ್ಯುರಿಟಿ ಸಿಬ್ಬಂದಿಗೆ ಅನುಮಾನ ಬಂದಿದ್ದೇ ತಡ, ಕಸ್ಟಮ್ಸ್ ಅಧಿಕಾರಿಗಳಿಗೆ ಸುದ್ದಿ ಮುಟ್ಟಿಸಿ ಕರೆಸಿಕೊಂಡಿದ್ದರು. ಬಂದು ನೋಡಿ ಹೌಹಾರಿದ ಕಸ್ಟಮ್ಸ್ ಅಧಿಕಾರಿಗಳು ಅವು ರೆಡ್‌ಸ್ಯಾಂಡಲ್‌ವುಡ್‌ನ ತುಂಡುಗಳೆಂದು ಗುರುತಿಸಿದ್ದರು. ಅಳಿವಿನಂಚಿನಲ್ಲಿದ್ದ ಆ ಮರವನ್ನು ಕಡಿದು ಸಾಗಾಣಿಕೆ ಮಾಡಿದ್ದು ಸಂಪೂರ್ಣವಾಗಿ ನಿಷೇಧಿಸಲ್ಪಟ್ಟಿದ್ದರಿಂದ ಆ ನಾಲ್ಕೂ ಚೀನಿ ಸ್ಮಗ್ಲರ್‌ಗಳನ್ನು ನೇರವಾಗಿ ಜೈಲಿಗಟ್ಟಲಾಗಿತ್ತು.

ರಕ್ತಚಂದನ!

ಇದು ಸ್ಮಗ್ಲಿಂಗ್ ದಂಧೆಯ ಲೇಟೆಸ್ಟ್ ಅವತಾರ. ಶ್ರೀಗಂಧ, ಆನೆದಂತ, ವಜ್ರ, ವಿಗ್ರಹ, ಮಾದಕದ್ರವ್ಯದಂತಹ ಹೆಸರುಗಳು ಮಾತ್ರವೇ ಇರುತ್ತಿದ್ದ ಕಳ್ಳಸಾಗಾಣಿಕೆಯ ಪಟ್ಟಿಗೆ ಈ ರಕ್ತಚಂದನ ಹೊಸ ಸೇರ್ಪಡೆ. ಹಾಗೆ ನೋಡಿದರೆ ಕಳ್ಳಸಾಗಾಣಿಕೆಗೆ ಇದು ಅಪರಿಚಿತ ಕೂಸೇನೂ ಅಲ್ಲ. ಮೊದಲಿನಿಂದಲೂ ರಕ್ತಚಂದನದ ಸ್ಮಗ್ಲಿಂಗ್ ನಡೆಯುತ್ತಲೇ ಇದೆ. ಆದರೆ ಇತ್ತೀಚೆಗೆ ವಿಪರೀತವಾಗಿಬಿಟ್ಟಿದೆ. ಏರ್‌ಪೋರ್ಟ್, ಬಂದರು ಮತ್ತು ಚೆಕ್‌ಪೋಸ್ಟ್‌ಗಳಲ್ಲಿ ಟನ್‌ಗಟ್ಟಲೇ ರಕ್ತಚಂದನದ ತುಂಡುಗಳು ಪೊಲೀಸರ ವಶವಾಗುತ್ತಿವೆ.

ಮೇಲಿಂದ ಮೇಲೆ ದಾಖಲಾಗುತ್ತಿರುವ ರಕ್ತಚಂದನದ ಪ್ರಕರಣಗಳನ್ನು ಕೇಳುತ್ತಿದ್ದಂತೆಯೇ ಏನಿದು ರಕ್ತಚಂದನ? ಇದಕ್ಕೆ ಅಷ್ಟೆಲ್ಲಾ ಡಿಮ್ಯಾಂಡ್ ಇದೆಯಾ? ಇದರ ಉಪಯೋಗವೇನು? ಇದು ಎಲ್ಲಿಗೆ ರವಾನೆಯಾಗುತ್ತೆ? ಇದು ಬೆಳೆಯುವುದೆಲ್ಲಿ? ಇದರ ರೇಟೆಷ್ಟು? ಶ್ರೀಗಂಧಕ್ಕೂ ಇದಕ್ಕೂ ಏನು ವ್ಯತ್ಯಾಸ? ಎಂಬಿತ್ಯಾದಿ ಕುತೂಹಲ ಸಹಜವಾಗಿಯೇ ಮೂಡುತ್ತವೆ.

ರಕ್ತಚಂದನದ ಕಳ್ಳಸಾಗಾಣಿಕೆಯ ಭೀಕರತೆಯೇ ಇದು ಭಾರೀ ಡಿಮ್ಯಾಂಡಿಂಗ್ ಮರ ಎನ್ನುವುದನ್ನು ಸಾಬೀತುಮಾಡುತ್ತದೆ. ನೋಡಲು ರಕ್ತದಲ್ಲಿ ಅದ್ದಿಟ್ಟ ಮರದ ತುಂಡುಗಳಂತೆಯೇ ಕಾಣುವ ಇವು ರೊಕ್ಕದ ವಿಚಾರದಲ್ಲಿ ನಾವು 'ರಾಯಲ್' ಅಂತ ಪರಿಗಣಿಸುವ ಶ್ರೀಗಂಧವನ್ನೂ ಮೀರಿಸುತ್ತವೆ. ಹಾಲಿ ಮಾರ್ಕೆಟ್ ದರದಂತೆ ಶ್ರೀಗಂಧಕ್ಕೆ ಪ್ರತಿ ಕೆ.ಜಿ.ಗೆ 2000-3000 ರೂ. ನಿಗದಿಯಾಗಿದ್ದರೆ, ರಕ್ತಚಂದನದ ಪ್ರತಿ ಕೆ.ಜಿ ತುಂಡುಗಳು 5000-6000 ರೂ.ಗೆ ಬಿಕರಿಯಾಗುತ್ತವೆ. ಪ್ರಧಾನವಾಗಿ ದಕ್ಷಿಣ ಭಾರತದಲ್ಲಿ ಅದರಲ್ಲೂ ಆಂಧ್ರದ ಕಡಪ, ಚಿತ್ತೂರು ಜಿಲ್ಲೆಗಳು ಮತ್ತು ತಮಿಳುನಾಡಿನ ಕೆಲ ಕಡೆ ಬೆಳೆಯುವ ರಕ್ತಚಂದನ ಮರಗಳು ಚೀನಾ, ಜಪಾನ್ ಮತ್ತು ಮಯನ್ಮಾರ್ ದೇಶಗಳಲ್ಲಿ ಭಾರೀ ಬೇಡಿಕೆ ಪಡೆದುಕೊಂಡಿವೆ. ಜೊತೆಗೆ ಇವುಗಳಿಗೆ ದುಬೈನಲ್ಲೂ ತಕ್ಕ ಮಟ್ಟಿನ ವ್ಯಾಮೋಹ ಗಿಟ್ಟಿಸಿಕೊಂಡಿವೆ.

ವೈಜ್ಞಾನಿಕವಾಗಿ ಈ ಮರಗಳನ್ನು ಟೆರೋಕಾರ್ಪಸ್ ಸೆಂಟಾಲಿನಸ್ ಎಂಬ ಹೆಸರಿನಲ್ಲಿ ಗುರುತಿಸಲಾಗುತ್ತದೆ. ಪದರುಗಲ್ಲಿನಂತಹ ಮಣ್ಣಿನಲ್ಲಿ ಇದು ಚೆನ್ನಾಗಿ ಬೆಳೆಯಬಹುದು. ಇದರ ಬೆಳವಣಿಗೆ ತುಂಬಾ ನಿಧಾನ. ವಾಸ್ತವವಾಗಿ ಇವು ತುಂಬಾ ಎತ್ತರ ಬೆಳೆಯಬಲ್ಲವು. ಅದಕ್ಕೆ ಏನಿಲ್ಲವೆಂದರೂ ನೂರು ವರ್ಷ ಬೇಕಾಗುತ್ತದೆ. ಅವುಗಳ ದುಬಾರಿ ಬೇಡಿಕೆ, ಅಷ್ಟೂ ವರ್ಷ ಉಳಿಯಲು ಅವಕಾಶ ನೀಡದೆ ಇರುವುದರಿಂದ ಸಾಮಾನ್ಯವಾಗಿ ನಾವು 7 ರಿಂದ 8 ಮೀಟರ್‌ಗಳಷ್ಟು ಎತ್ತರದ ರಕ್ತಚಂದನ ಮರಗಳನ್ನಷ್ಟೇ ಕಾಣಬಹುದು. ಇವುಗಳ ಕಾಂಡ ಹೆಚ್ಚೆಂದರೆ 50-150 ಸೆಂಟಿಮೀಟರ್ ದಪ್ಪವಿರುತ್ತದೆ. ಹೊರಗಿನಿಂದ ನೋಡಲು ನೀಲಿಗೆಂಪು ಬಣ್ಣದ ಹೊದಿಕೆಯನ್ನು ಈ ಮರ ಹೊಂದಿದ್ದರೂ ಒಳಭಾಗ ಕಡುಗೆಂಪು ಬಣ್ಣದ್ದಾಗಿರುತ್ತದೆ. ಈ ಮರ ಅದೆಷ್ಟು ಸಾಂದ್ರತೆಯನ್ನು ಹೊಂದಿರುತ್ತದೆಂದರೆ ಇದರ ಒಂದು ಸಣ್ಣ ಚೂರನ್ನು ನೀರಿನಲ್ಲಿ ಹಾಕಿದರೂ ತಕ್ಷಣವೇ ಮುಳುಗಿಹೋಗುತ್ತದೆ. ಈ ದಟ್ಟ ಸಾಂದ್ರತೆಯ ಕಾರಣಕ್ಕೇ ಅದು ಸುಲಭವಾಗಿ ಹುಳು ಹಿಡಿಯುವುದಿಲ್ಲ. ಆದರೆ ಸೂರ್ಯನ ಬಿಸಿಲಿಗೆ ಇವುಗಳ ಬಣ್ಣ ಹಾಳಾಗಬಹುದು. ಆದ್ದರಿಂದ ಇವನ್ನು ನೆರಳಿನ ಮತ್ತು ತಣ್ಣನೆಯ ಪ್ರದೇಶದಲ್ಲಿ ಶೇಖರಿಸಿಡಲಾಗುತ್ತೆ.

ಈ ರಕ್ತಚಂದನವನ್ನು ಚೀನಾದಲ್ಲಿ ಪ್ರಮುಖವಾಗಿ ಔಷಧಿ, ಸುಗಂಧ ದ್ರವ್ಯ ಪ್ರತಿಮೆ ಮತ್ತು ಪೀಠೋಪಕರಣಗಳ ತಯಾರಿಕೆಗೆ ಬಳಸಿಕೊಳ್ಳಲಾಗುತ್ತದೆ. ಪಚನನಾಳ ಸಮಸ್ಯೆ, ದ್ರವಧಾರಣ, ಕೆಮ್ಮು ಮತ್ತು ರಕ್ತಶುದ್ಧೀಕರಣ ಚಿಕಿತ್ಸೆಗೆ ಇದನ್ನು ಔಷಧವಾಗಿ ಬಳಲಾಗುತ್ತದೆ. ಕಫವನ್ನು ಕರಗಿಸುವ ಶಕ್ತಿಯೂ ಇದಕ್ಕಿದೆ. ಅಲ್ಲದೆ ಮದ್ಯಪಾನೀಯಗಳಲ್ಲೂ ಸುಗಂಧದ್ರವ್ಯವಾಗಿ ಇದನ್ನು ಬಳಸುವುದುಂಟು. ಇವೆಲ್ಲಕ್ಕೂ ಮಿಗಿಲಾಗಿ ಚೀನಾದಲ್ಲಿ ಇದಕ್ಕೆ ಭಾರೀ ಬೇಡಿಕೆ ಬರಲು ಮತ್ತೊಂದು ಕಾರಣವೆಂದರೆ ಚೀನೀಯರ ಪಾರಂಪರಿಕ ನಂಬಿಕೆ. ಮಿಂಗ್ ಮತ್ತು ಕ್ವಿಂಗ್ ರಾಜಮನೆತನಗಳು ಆಳ್ವಿಕೆಯಲ್ಲಿದ್ದ ಸಂದರ್ಭದಲ್ಲಿ 'ಜೈಟ್ಯಾನ್' ಎಂಬ ಸ್ಥಳೀಯ ಹೆಸರಿನಿಂದ ಕರೆಯಲ್ಪಡುತ್ತಿದ್ದ ಈ ರಕ್ತಚಂದನಕ್ಕೆ ಭಾರೀ ಮಹತ್ವ ನೀಡಲಾಗಿತ್ತು. ಈ ಮರದಿಂದ ಮಾಡಿದ ಪೀಠೋಪಕರಣಗಳು ಐಷಾರಾಮಿ, ಸಿರಿವಂತಿಕೆಯ ಸಂಕೇತಗಳಾಗಿದ್ದವಂತೆ. ಅಷ್ಟೇ ಏಕೆ ಅವರು ಪೂಜಿಸುವ ಬುದ್ಧನ ಪ್ರತಿಮೆ ನಿರ್ಮಿಸಲೂ ಈ ರಕ್ತಚಂದನವನ್ನೇ ಬಳಸುತ್ತಿದ್ದರು. ಹಾಗಾಗಿ ರಕ್ತಚಂದನ ಚೀನಾದಲ್ಲಿ ಬೇಡಿಕೆಯ ಸಾಟಾವಾಗಿ ಸ್ಥಾನ ಗಿಟ್ಟಿಸಿಕೊಂಡಿದೆ.

ಈಗಲೂ ಸಹ ತಮ್ಮ ಮನೆಗಳಲ್ಲಿ ರಕ್ತಚಂದನದ



ಪೀಠೋಪಕರಣಗಳು, ಸ್ಮರಣಿಕೆಗಳು, ಪ್ರತಿಮೆಗಳು ಇರುವುದು ಘನತೆಯ ವಿಷಯವಾಗಿದೆ. ಅಲ್ಲದೆ ಅದೊಂದು 'ಆ್ಯಂಟಿಕ್' ಪರಂಪರೆಯ ಮಹತ್ವವೂ ಹೌದೆಂದು ಚೀನಿಯರು ಭಾವಿಸಿಕೊಂಡಿರುವುದರಿಂದಲೇ ಭಾರತದಲ್ಲಿ ರಕ್ತಚಂದನ ಭರ್ಜರಿಯಾಗಿ ಕಳ್ಳಸಾಗಾಣಿಕೆ ಆಗುತ್ತಿರುವುದು. ಏರ್‌ಪೋರ್ಟ್‌ನಲ್ಲಿ ಸಿಕ್ಕಿಬಿದ್ದ ಚೀನೀ ಸ್ಮಗ್ಲರ್‌ಗಳೂ ಇದೇ ಕಾರಣಕ್ಕೆ ಆ ದಂಧೆಗೆ ಇಳಿದವರಾಗಿದ್ದರು.

ಭರ್ಜರಿಯಾಗಿದೆ ಸ್ಮಗ್ಲಿಂಗ್ ದಂಧೆ

ಪಾಕಿಸ್ತಾನ, ನೇಪಾಳ, ಶ್ರೀಲಂಕಾಗಳಲ್ಲಿ ತುಸುವೇ ತುಸು ಬಿಟ್ಟರೆ ಈ ರಕ್ತಚಂದನ ಅಲಿಯಾಸ್ ರೆಡ್ ಸ್ಯಾಂಡಲ್‌ವುಡ್ ಹೆಚ್ಚಾಗಿ ಬೆಳೆಯುವುದು ದಕ್ಷಿಣ ಭಾರತದಲ್ಲೇ. ಇಲ್ಲಂತೂ ಇದರ ಬಳಕೆ ಮತ್ತು ಮಹತ್ವ ಅಷ್ಟಾಗಿ ಪ್ರಚಲಿತದಲ್ಲಿಲ್ಲದೇ ಇರುವುದರಿಂದ ಇವುಗಳನ್ನು ಸ್ಮಗಲ್ ಮಾಡುವ ಸುಲಭ ದಂಧೆ ವಿಪರೀತವಾಗಿ ಬೇರುಬಿಟ್ಟಿದೆ. ಆಂಧ್ರ ಮತ್ತು ತಮಿಳುನಾಡಿನಿಂದ ಮುಂಬೈ ಇಲ್ಲವೇ ಮಂಗಳೂರು ಬಂದರನ್ನು ತಲುಪಲು ಕರ್ನಾಟಕವನ್ನು ಹಾದುಹೋಗಬೇಕಿರುವುದರಿಂದ ರಾಜ್ಯದಲ್ಲಿಯೂ ರಕ್ತಚಂದನ ಕಳ್ಳಸಾಗಾಣಿಕೆಯ ಜಾಲ ವ್ಯವಸ್ಥಿತವಾಗಿ ಪಸರಿಸಿಕೊಂಡಿದೆ. ಚಿಕ್ಕಬಳ್ಳಾಪುರ ಮತ್ತು ತುಮಕೂರುಗಳು ಇಂಥವರ ಪಾಲಿಗೆ ಗೋದಾಮುಗಳಿದ್ದಂತೆ. ಇದೇ ವರ್ಷದ ಜೂನ್ ತಿಂಗಳಿನಲ್ಲಿ ತುಮಕೂರಿನ ಕ್ಯಾತ್ಸಂದ್ರ ಕೈಗಾರಿಕಾ ಪ್ರದೇಶದಲ್ಲಿ ಮುಚ್ಚಿಹೋಗಿದ್ದ ಜೈವಿಕ ಉತ್ಪನ್ನಗಳ ಕಾರ್ಖಾನೆಯೊಂದರ ಗೋದಾಮಿನಲ್ಲಿ 7,938 ಕೆ.ಜಿ. ತೂಕದ 367 ರಕ್ತಚಂದನ ಮರದ ತುಂಡುಗಳು ಪತ್ತೆಯಾಗಿದ್ದೇ ಇದಕ್ಕೆ ಸಾಕ್ಷಿ. ಮಂಗಳೂರು ಬಂದರಿನಲ್ಲೂ ಇದರ ಕಣ್ಣಾಮುಚ್ಚಾಲೆ ಜೋರಾಗೆ ನಡೆಯುತ್ತಿರುತ್ತದೆ. ಕಳೆದ ವರ್ಷದ ಅಕ್ಟೋಬರ್‌ನಲ್ಲಿ ಪ್ಲೈವುಡ್ ಕಂಟೇನರ್‌ಗಳ ಸಂಧಿಯಲ್ಲಿ ಸಾಗಿಸಲು ಹುದುಗಿಸಿಟ್ಟಿದ್ದ ಅರ್ಧ ಕೋಟಿಗೂ ಹೆಚ್ಚು ಮೌಲ್ಯದ 11 ಟನ್ ರಕ್ತಚಂದನವನ್ನು ಬಂದರು ಸಿಬ್ಬಂದಿ ವಶಪಡಿಸಿಕೊಂಡು ಕೇರಳ ಮೂಲದ ನಾಲ್ವರನ್ನು ಬಂಧಿಸಿದ್ದರು. ಪೊಲೀಸ್ ಆತಿಥ್ಯದ ನಂತರ ಅವರು ಹೇಳಿದಂತೆ ಬೋಳೂರಿನ ಗೋದಾಮೊಂದನ್ನು ಸರ್ಚ್ ಮಾಡಿದಾಗ 4,730 ಕೆ.ಜಿ ತೂಕದ 162 ರಕ್ತಚಂದನ ತುಂಡುಗಳು ಪತ್ತೆಯಾಗಿದ್ದವು. ಹಡಗಿನ ಮೂಲಕ ಅವನ್ನೆಲ್ಲ ದುಬೈಗೆ ರವಾನಿಸಲು ಸಂಚು ರೂಪಿಸಿದ್ದರು.


ರಕ್ತಚಂದನದ ಸ್ಮಗ್ಲಿಂಗ್ ದಂಧೆ ಕರ್ನಾಟಕ, ಆಂಧ್ರಕ್ಕಷ್ಟೇ ಸೀಮಿತವಾದುದಲ್ಲ, ಇಡೀ ದೇಶಾದ್ಯಂತ ವ್ಯಾಪಿಸಿದೆ. ಕೆಲವೊಂದು ಕಡೆ ದೊಡ್ಡದೊಡ್ಡ ಕೈಗಳೇ ಇದರಲ್ಲಿ ಶಾಮೀಲಾಗಿರುವುದು ಉಂಟು. ಮಣಿಪುರದ ರಾಜ್ಯದ ಮಾಜಿ ಎಂ.ಎಲ್.ಎ ಒಬ್ಬನ ಮನೆಯ ನೆಲಮಾಳಿಗೆಯಲ್ಲಿ ಬರೋಬ್ಬರಿ 3 ಟ್ರಕ್‌ನಷ್ಟು ರಕ್ತಚಂದನದ ತುಂಡುಗಳು ಇತ್ತೀಚೆಗಷ್ಟೆ ಪತ್ತೆಯಾಗಿದ್ದವು. ಭಾರತದ ಗಡಿಯ ಮೂಲಕ ಮ್ಯಾನ್ಮಾರ್‌ಗೆ ಸಾಗಹಾಕಲು ಅಲ್ಲಿ ಶೇಖರಿಸಿಡಲಾಗಿತ್ತು. ಫೆಬ್ರವರಿ ತಿಂಗಳಲ್ಲಿ ರಾಜಸ್ಥಾನದ ಖದೀಮರ ತಂಡವೊಂದನ್ನು ಬಂಧಿಸಿದ್ದ ಅಲ್ಲಿನ ಪೊಲೀಸರು 8930 ಕೆಜಿಯಷ್ಟು ರಕ್ತಚಂದನವನ್ನು ವಶಕ್ಕೆ ತೆಗೆದುಕೊಂಡಿದ್ದರು. ರಾಜಸ್ಥಾನದ ಮಟ್ಟಿಗೆ ರಕ್ತಚಂದನದ ಹೆಸರು ಮತ್ತು ಬಳಕೆ ಅಪರಿಚಿತವಾಗಿರುವುದರಿಂದ ಜೈಪುರವನ್ನು ರಕ್ತಚಂದನ ಸ್ಮಗ್ಲಿಂಗ್‌ನ ಕೇಂದ್ರಸ್ಥಾನ ಮಾಡಿಕೊಳ್ಳಲು ಆಂಧ್ರಪ್ರದೇಶದ ಕುಖ್ಯಾತ 'ರೆಡ್ಡಿ ಬ್ರದರ್ಸ್' ಸ್ಮಗ್ಲರ್ಸ್ ತಂಡ ಯೋಜನೆ ರೂಪಿಸಿಕೊಂಡದ್ದೂ ಅದೇ ಸಮಯದಲ್ಲಿ ಬಯಲಾಗಿತ್ತು.

ಅಂದಹಾಗೆ, ಸ್ಮಗ್ಲಿಂಗ್ ಜಾಲಗಳನ್ನು ಬೇಧಿಸಿದ ಬೇರೆ ಬೇರೆ ರಾಜ್ಯದ ಪೊಲೀಸರು, ಕಸ್ಟಮ್ಸ್ ಅಧಿಕಾರಿಗಳು, ಸೆಕ್ಯುರಿಟಿ ಟೀಮಿನವರು ಇಡೀ ದೇಶದಲ್ಲಿ ಕಲೆಹಾಕಿರುವ ಒಟ್ಟು ರಕ್ತಚಂದನವೆಷ್ಟು ಗೊತ್ತೆ? ಬರೋಬ್ಬರಿ 15,000 ಟನ್; ಅದರ ಬೆಲೆ 5,000 ಕೋಟಿಯನ್ನೂ ಮೀರುತ್ತದಂತೆ. ವಿಪರ್ಯಾಸ ಅಂತಂದರೆ ಜಪ್ತಿಯಾದ ಅಷ್ಟೂ ದಾಸ್ತಾನನ್ನು ಶೇಖರಿಸಿಡಲು ಗೋದಾಮಿನದ್ದೇ ಸರ್ಕಾರಕ್ಕೆ ದೊಡ್ಡ ಸಮಸ್ಯೆಯಾಗಿದೆ. ಹೀಗೆ ಸೀಜ್ ಮಾಡಿದ ರಕ್ತಚಂದನವನ್ನು ಸುರಕ್ಷಿತವಾಗಿ ಕಾಪಾಡುವುದಕ್ಕೇ ಸರ್ಕಾರ ಕೋಟಿಗಟ್ಟಲೆ ಹಣ ಖರ್ಚು ಮಾಡುತ್ತಿದೆ. ರಕ್ತಚಂದನದ ಬಳಕೆಯ ಪರ್ಮಿಟ್ ಇರುವುದು ಕೇಂದ್ರ ಕರಕುಶಲ ಇಲಾಖೆಗೆ ಮಾತ್ರ. ಆದರೆ ಅಷ್ಟು ದುಬಾರಿ ಮೊತ್ತವನ್ನು ತೆತ್ತು ಸರ್ಕಾರಿ ದಾಸ್ತಾನಿನಲ್ಲಿ ಬಿದ್ದಿರುವ ರಕ್ತಚಂದನವನ್ನು ಬಳಸಿಕೊಳ್ಳುವ ಶಕ್ತಿ ಕರಕುಶಲ ಇಲಾಖೆಗೆ ಇಲ್ಲ. ವರ್ಷಕ್ಕೆ ಹೆಚ್ಚೆಂದರೆ 100 ರಿಂದ 200 ಕೆಜಿಯಷ್ಟು ರಕ್ತಚಂದನ ಖರೀದಿಸುವುದೇ ದೊಡ್ಡ ಮಾತು. ಅಂತದ್ದರಲ್ಲಿ 15,000 ಟನ್ ಹೇಗೆ ಖರ್ಚಾಗಬೇಕು? ಇದನ್ನು ಮನಗಂಡೇ ಆಂಧ್ರದ ಸಿ.ಎಂ ಇತ್ತೀಚೆಗೆ ಸರ್ಕಾರಿ ದಾಸ್ತಾನಿನಲ್ಲಿರುವ ರಕ್ತಚಂದನವನ್ನು ಅಂತಾರಾಷ್ಟ್ರೀಯ ವೇದಿಕೆಯಲ್ಲಿ ಹರಾಜು ಕರೆಯಬೇಕೆಂದು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿಕೊಂಡಿದ್ದರು.

ಅಂತೂ ರಕ್ತಚಂದನವೆಂಬ ನಿಸರ್ಗದ ಅಪರೂಪ ಭಯಂಕರವಾಗಿ ಲೂಟಿಯಾಗುತ್ತಿದೆ. ಚೆಕ್‌ಪೋಸ್ಟ್‌ಗಳು ಮತ್ತಷ್ಟೂ ಬಿಗಿಯಾದರೆ ಮತ್ತಷ್ಟೂ ಮರಗಳ್ಳರು ಮಾಲು ಸಮೇತ ಸಿಕ್ಕಿಬೀಳುವುದರಲ್ಲಿ ಅನುಮಾನವೇ ಇಲ್ಲ. ಅದಕ್ಕೂ ಮುನ್ನ ಅರಣ್ಯ ಇಲಾಖೆ ಕೂಡಲೇ ಎಚ್ಚೆತ್ತುಕೊಳ್ಳಬೇಕಿದೆ.

■ ಗಿರೀಶ್ ತಾಳಿಕಟ್ಟೆ

ಉರ್ದುವಿನ ಸಂಕಷ್ಟಗಳು



ಜಾಗತೀಕರಣದ ಸಾಂಸ್ಕೃತಿಕ ಆಕ್ರಮಣದಿಂದ ತಮ್ಮ ಭಾಷೆಯನ್ನು ಉಳಿಸುವ ನಿಟ್ಟಿನಲ್ಲಿ ಅತೀವ ಹೋರಾಟವನ್ನು ನಡೆಸುತ್ತಿರುವವರು ಕನ್ನಡಿಗರು ಮಾತ್ರ ಎಂಬ ತಳಮಳ ನಮ್ಮಲ್ಲಿದೆ. ಆದರೆ ಭಾರತೀಯ ಭಾಷೆಗಳೆಲ್ಲಾ ಒಂದೇ ದೋಣಿಯಲ್ಲಿ ಸಹ ಪ್ರಯಾಣಿಕರಾಗಿರುವ ಈ ಕಾಲಘಟ್ಟದಲ್ಲಿ ಉರ್ದು ಭಾಷೆ ಒಂದೆಡೆ ಜಾಗತೀಕರಣದ ಪ್ರಹಾರದಿಂದ ತತ್ತರಿಸುತ್ತಿದ್ದರೆ, ಇನ್ನೊಂದೆಡೆ ಪ್ರಭುತ್ವದ ನಿರ್ಲಕ್ಷ್ಯದಿಂದ ನಲುಗುತ್ತಿದೆ, ಮತ್ತೊಂದೆಡೆ ಕೋಮುವಾದೀ ತಾರತಮ್ಯದಿಂದ ತನ್ನ ನೆಲೆಯನ್ನು ಕಳೆದುಕೊಳ್ಳುವ ಅಪಾಯದಲ್ಲಿದೆ.

ಈ ಒಳ ಬೇಗುದಿಯು ಪ್ರಕಟವಾಗಿದ್ದು ಅಖಿಲ ಭಾರತ ಉರ್ದು ಮಂಚ್‌ನ ವತಿಯಿಂದ ಅಕ್ಟೋಬರ್ 18ರಂದು ಬೆಂಗಳೂರಿನ ರಾಜಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ. ದತ್ತಿ ಉಪನ್ಯಾಸ, ಪುಸ್ತಕ ಬಿಡುಗಡೆ ಹಾಗೂ ವಿಚಾರ ಸಂಕಿರಣ ಮೊದಲಾದ ಕಾರ್ಯಕ್ರಮಗಳಿಂದ ಕೂಡಿದ್ದ ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಸ್ಥೆಯ ಮಹಾ ಪೋಷಕರಾದ ಮತ್ತು ಸ್ವತಃ ಖ್ಯಾತ ಉರ್ದು ಕವಿಯಾದ ನಿವೃತ್ತ ಪೊಲೀಸ್ ಮಹಾನಿರೀಕ್ಷಕರಾದ ಖಲೀಲ್ ಮಾಮೂನ್‌ರವರು ವಹಿಸಿದ್ದರು. ಈ ಕಾರ್ಯಕ್ರಮದಲ್ಲಿ ದತ್ತಿ ಉಪನ್ಯಾಸವನ್ನು ನೀಡಬೇಕಿದ್ದ ಉರ್ದು ಸಾಹಿತ್ಯದ ಖ್ಯಾತ ವಿಮರ್ಶಕರು ಮತ್ತು ಅದ್ಭುತ ಪ್ರತಿಭೆಯಾಗಿರುವ ಡಾ.ಗೋಪಿಚಂದ್ ನಾರಂಗ್‌ರವರ ಗೈರುಹಾಜರಿಯು ಇಡೀ ಸಭೆಯಲ್ಲಿ ಎದ್ದು ಕಾಣುತ್ತಿತ್ತು. ಅಂದು ಬಿಡುಗಡೆಯಾಗಬೇಕಿದ್ದ ಅವರಿಂದ ರಚಿತವಾದ "ಘಾಲಿಬ್: ಮಅನಿ ಆಫ್ರೀನಿ ಜದ್ಲಿಯಾತಿ ವಜ ಶೂನ್ಯತ ಔರ್ ಶೇರ್‌ಯಾತಿ" ಎಂಬ ವಿಮರ್ಶಾತ್ಮಕ ಗ್ರಂಥವು ಕೂಡ ಅಂದು ಅವರ ಗೈರು ಹಾಜರಿಯಲ್ಲಿ ಬಿಡುಗಡೆಯಾಯಿತು. ಘಾಲಿಬ್‌ರವರ ಕಾವ್ಯವನ್ನು ಭಾರತೀಯ ವೇದಾಂತದ ಶೂನ್ಯ ಸಿದ್ಧಾಂತದೊಡನೆ ಸಮೀಕರಿಸಲಾಗಿರುವ ಈ ಗ್ರಂಥದ ಸಾಹಿತ್ಯಿಕ ಪ್ರಸ್ತುತತೆಯು ಉರ್ದು ಸಾಹಿತ್ಯಕ್ಕೆ ನೀಡಲಾದ ಅದ್ಭುತ ಕೊಡುಗೆ ಎಂದು ಭಾವಿಸಲಾಗಿದೆ.

ಕಾರ್ಯಕ್ರಮದ ಉದ್ಘಾಟನೆಯನ್ನು ದೀಪ ಬೆಳಗುವ ಮೂಲಕ ಮಾಡಿದ ರಾಜ್ಯಪಾಲ ಹಂಸರಾಜ್ ಭಾರದ್ವಾಜ್ ಅವರ ಭಾಷಣವು ತಮ್ಮ ಮತ್ತು ಉರ್ದುವಿನ ನಂಟಿನ ಸುಗಂಧದ ಅಲೆಯನ್ನು ಹರಡುವಂತಿತ್ತು. ಅತ್ಯಂತ ಸರಳ ಮತ್ತು ಸುಂದರವಾದ ಉರ್ದುವಿನಲ್ಲಿ ಮಾತನಾಡಿದ ರಾಜ್ಯಪಾಲರು "ನಮ್ಮದೊಂದು ವಿಚಿತ್ರವಾದ ದೇಶ. ಏಕೆಂದರೆ ಅದರ ಇತಿಹಾಸವು ಕೂಡ ವಿಚಿತ್ರವಾಗಿದೆ. ಹಿಂದೂ ಮತ್ತು ಮುಸ್ಲಿಮರು ಕೂಡಿ ಈ ದೇಶವನ್ನು ಕಟ್ಟಿದ್ದಾರೆ. ಮೊಗಲರು ಉರ್ದು ಭಾಷೆಯೊಂದಿಗೆ ಒಂದು ಅದ್ಭುತವಾದ ಸಂಸ್ಕೃತಿಯನ್ನು ಕೂಡ ಈ ದೇಶದ ಮಣ್ಣಿನಲ್ಲಿ ಮೂಡಿಸಿದರು. ಅಕ್ಬರ್ ತನ್ನ ಮಂತ್ರಿ ಮಂಡಲದಲ್ಲಿ ಸರ್ವಧರ್ಮದ ವ್ಯಕ್ತಿಗಳಿಗೆ ಪ್ರಾಧಿನಿಧ್ಯತೆಯನ್ನು ನೀಡಿದ್ದ. ಬೀರ್‌ಬಲ್, ತೋದರ್‌ಮಲ್, ಮಾನ್‌ಸಿಂಗ್ ಹಾಗೂ ಇನ್ನಿತರೆ ಅನೇಕ ಹಿಂದೂ ಪ್ರಮುಖರು ಅವನ ಆಸ್ಥಾನದ ರತ್ನಗಳಾಗಿದ್ದರು.

ಶೇರ್ವಾನಿ ಎಂಬುದು ಕೇವಲ ಮುಸ್ಲಿಮರ ಉಡುಪಾಗಿ ಉಳಿದಿಲ್ಲ, ಬದಲಿಗೆ ಭಾರತದ ರಾಷ್ಟ್ರೀಯ ಉಡುಪಾಗಿದೆ. ನನ್ನ ಪೂರ್ವಿಕರು ಪರ್ಶಿಯನ್ ಭಾಷೆಯ ಉದ್ದಾಮ ಪಂಡಿತರಾಗಿದ್ದರು. ಅಮೀರ್ ಖುಸ್ರುನಂತಹ ಸೂಫಿ ಸಂತ ಪರ್ಶಿಯನ್ ಭಾಷೆಗೆ ಖಡಿ ಬೋಲಿಯನ್ನು ಮಿಶ್ರ ಮಾಡಿ ಹೊಸ ಭಾಷೆಯನ್ನೇ ಆರಂಭಿಸಿದರು. ಇಂದಿಗೂ ಅವರ ಗೋರಿಯ ಬಳಿ ಹಾಡುವ ಸಂಗೀತವು ಬ್ರಿಜ್ ಭಾಷೆಯಲ್ಲಿದೆ. ಇಷ್ಟೆಲ್ಲಾ ಅಗಾಧ ಕೊಡುಕೊಳ್ಳುವಿಕೆಯ ಸಂಸ್ಕೃತಿಯನ್ನು ಹೊಂದಿರುವ ನಾವು ಇವತ್ತು ಒಬ್ಬರು ಇನ್ನೊಬ್ಬರ ಸಂಸ್ಕೃತಿಯ ಮೇಲೆ ಆಕ್ರಮಣ ಮಾಡುವಂತಹ ದುಷ್ಕೃತ್ಯದಲ್ಲಿ ತೊಡಗಿದ್ದೇವೆ. ಸಹಿಷ್ಣುತೆಯ ಭಾವವನ್ನು ಬದಿಗೊತ್ತಿ ತಾರತಮ್ಯದ ಸಂಸ್ಕೃತಿಯನ್ನು ತರುವ ಪ್ರಯತ್ನ ಮಾಡುತ್ತಿದ್ದೇವೆ. ತಾಜ್‌ಮಹಲ್ ಬಗ್ಗೆ ನಮಗೆ ಹೆಮ್ಮೆ ಆದರೆ ಉರ್ದುವಿನ ಬಗ್ಗೆ ತಾತ್ಸಾರವೇಕೆ?" ಎಂದು ಪ್ರಶ್ನಿಸಿದರು.

ಡಾ. ಗೋಪಿಚಂದ್ ನಾರಂಗ್‌ರವರು ಎಮಿರೇಟ್ಸ್ ದೆಹಲಿ ಮತ್ತು ಜಾಮಿಯ ಮಿಲಿಯ ವಿಶ್ವವಿದ್ಯಾಲಯದಲ್ಲಿ ಪ್ರೊಫೆಸರ್‌ರಾಗಿದ್ದು ಪದ್ಮಭೂಷಣ ಪ್ರಶಸ್ತಿಗೆ ಭಾಜನರಾಗಿದ್ದಾರೆ. "ಉರ್ದುವಿನ ಅಭಿವೃದ್ಧಿ ಮತ್ತು ಭಾಷಾ ಅಲ್ಪಸಂಖ್ಯಾತರು" ಎಂಬ ವಿಷಯದ ಬಗ್ಗೆ ಅವರು ಸಿದ್ಧಪಡಿಸಿದ ಉಪನ್ಯಾಸವನ್ನು ಅವರ ಗೈರು ಹಾಜರಿಯಲ್ಲಿ ಚಂದ್ರಬಾನ್ 'ಖಯಾಲ್' ರವರು ಓದಿದರು. ಉಪನ್ಯಾಸದ ಸಾರಾಂಶ ಹೀಗಿದೆ: "ಉರ್ದು ಹಿಂದೂಸ್ಥಾನದ ಸೆಕ್ಯೂಲರ್ ಸಂಸ್ಕೃತಿಯ ಪ್ರತೀಕವಾಗಿದೆ. ಇದು ದಕ್ಷಿಣ ಏಷ್ಯಾದ ಜನಪ್ರಿಯ ಭಾಷೆಯಾಗಿದೆ. ಚರಿತ್ರೆಯ ಸವಾಲುಗಳ ಎದುರಿನಲ್ಲಿ ಚಾರಿತ್ರಿಕ ಸತ್ಯವಾಗಿ ಜನ್ಮತಳೆದ ಭಾಷೆ ಇಂದಿನವರೆಗೂ ಬದುಕುಳಿದಿದೆ. ಸತ್ಯ ಹುಟ್ಟಿದಾಗ ಅದಕ್ಕೆ ಹೆಸರು ಇರುವುದಿಲ್ಲ. ಅರಬ್ಬಿ, ಪಾರ್ಸಿ, ತುರ್ಕಿ ಮತ್ತು ಸಂಸ್ಕೃತ ಭಾಷೆಗಳ ಮಿಶ್ರ ಭಾಷೆಯಾಗಿ ರೂಪುಗೊಂಡಾಗ ಇದಕ್ಕೆ ಹೆಸರು ಇರಲಿಲ್ಲ. ಹೆಸರಿನಿಂದ ಏನಾಗುತ್ತದೆ? ಆದರೆ ಹೆಸರೇ ಇಂದು ವಾಸ್ತವತೆಯಾಗಿದೆ. ಇಂದಿನ ಚಾರಿತ್ರಿಕ ಬಿಕ್ಕಟ್ಟಿನಲ್ಲಿ ಭಾಷೆಯು ಜನರನ್ನು ಒಟ್ಟುಗೂಡಿಸುವ ಪ್ರಯತ್ನ ಮಾಡುತ್ತದೆ. ಉರ್ದುವನ್ನು ಕೇವಲ ಭಾಷೆ ಎನ್ನುವುದು ಹಾಗೂ ಅದನ್ನು ಜಾತಿಯ ಬಂಧನದಲ್ಲಿ ಸಿಲುಕಿಸುವುದು ಆ ಭಾಷೆಗೆ ಮಾಡುವ ಅನ್ಯಾಯವಾಗಿದೆ. ಉರ್ದು ಒಂದು ಬದುಕುವ ಕ್ರಮ ಮತ್ತು ಆಲೋಚನಾ ಕ್ರಮವಾಗಿದೆ.

ಅತ್ಯಂತ ಸಂಕಿರಣ ಪರಿಸ್ಥಿತಿಯಲ್ಲಿಯೂ ಮತ್ತು ಬಿಕ್ಕಟ್ಟಿನ ಸಂದರ್ಭದಲ್ಲಿಯೂ ಉರ್ದು ಬಲಿಷ್ಠ ಭಾಷೆಯಾಗಿ ಬೆಳೆದಿದೆ ಎಂಬುದು ನನ್ನ ಅನಿಸಿಕೆ. ಕಳೆದ 600-700 ವರ್ಷಗಳಿಂದ ಉರ್ದು ಜನತೆಯ ಸಂಪರ್ಕ ಭಾಷೆಯಾಗಿದೆ. ಉರ್ದು ಆಸ್ಥಾನದ ಬಾಗಿಲನ್ನು ತಟ್ಟಲಿಲ್ಲ ಬದಲಿಗೆ ರಾಜನ ಆಸ್ಥಾನವೇ ಉರ್ದುವಿನ ಬಳಿಗೆ ಕಾಲ್ನಡಿಗೆಯಲ್ಲಿ ಬಂದಿದೆ. ಉರ್ದು ಯಾವುದೇ ಪ್ರಾದೇಶಿಕ ಮಿತಿಗೆ ಕಟ್ಟು ಬಿದ್ದಿಲ್ಲ. ಇಡೀ ಭಾರತವೇ ಅದರ ಆವಾಸಸ್ಥಾನವಾಗಿದೆ. ಉರ್ದು ನಮ್ಮ ಶತಮಾನಗಳ ಸಂಸ್ಕೃತಿಯ ದುಡಿಮೆಯ ಫಲವಾಗಿದೆ ಹಾಗೂ ಅದು ಗಂಗಾ-ಜಮುನಿ ಸಂಸ್ಕೃತಿಯ ಅಭಿವ್ಯಕ್ತಿಯಾಗಿದೆ. ಉರ್ದುವಿನ ಉಳಿವು ಭಾರತದ ಬಹುರೂಪಿ ಸಂಸ್ಕೃತಿಯ ಐಕ್ಯತೆಯ ಬಣ್ಣವಾಗಿದೆ. ಉರ್ದುವಿನ ಉಳಿವು ಈ ದೇಶದ ಪ್ರಜಾಪ್ರಭುತ್ವದ ಉಳಿವಿನ ಸಂಕೇತ ಮತ್ತು ಸೆಕ್ಯೂಲರ್ ಭಾವದ ಜೀವಂತಿಕೆಯಾಗಿದೆ."


ಅವರಿಬ್ಬರ ಮಾತುಗಳು ಉರ್ದು ಭಾಷೆಯ ಬಗ್ಗೆ ತೀವ್ರ ಅಭಿಮಾನದಿಂದ ಕೂಡಿದಾಗಿತ್ತು.

ಕಾರ್ಯಕ್ರಮದಲ್ಲಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯನವರು "2011 ನೇ ಜನಗಣತಿಯ ಪ್ರಕಾರ ನಮ್ಮ ದೇಶದಲ್ಲಿ ಉರ್ದು ಮಾತನಾಡುವ 450 ಮಿಲಿಯನ್ ಜನರಿದ್ದಾರೆ. ನಮ್ಮ ರಾಜ್ಯದಲ್ಲಿ ಎರಡನೆ ಅತಿದೊಡ್ಡ ಭಾಷೆಯಾಗಿ ಉರ್ದು ಬಳಕೆಯಲ್ಲಿದೆ. ಸ್ವಾತಂತ್ರ್ಯದ ಹೋರಾಟದಲ್ಲಿ 'ಇಂಕ್ವಿಲಾಬ್ ಜಿಂದಾಬಾದ್'ನಂತಹ ಇನ್ನೂ ಅನೇಕ ಘೋಷಣೆಗಳನ್ನು ನೀಡಿದ ಭಾಷೆ ಉರ್ದು. ಅದು ಜನತೆಯ ಭಾಷೆ, ನಮ್ಮ ದೇಶದ ಸಂಸ್ಕೃತಿಯ ಅವಿಭಾಜ್ಯ ಅಂಗ. ನಮ್ಮ ಶಾಂತರಸ ಹಾಗೂ ಪಂಚಾಕ್ಷರಿ ಹಿರೇಮಠ ಮೊದಲಾದವರು ಉರ್ದುವಿನೊಂದಿಗೆ ಅವಿನಾಭಾವ ಸಂಬಂಧವನ್ನು ಹೊಂದಿದ್ದವರು. ಉರ್ದುವಿಗೆ ಕಾಣಿಕೆ ನೀಡಿರುವವರಲ್ಲಿ ಮುಸ್ಲಿಮರಲ್ಲದವರು ಕೂಡ ಪ್ರಮುಖರಾಗಿದ್ದಾರೆ" ಎಂದು ನುಡಿದರು.

ಉರ್ದುವಿನ ಬಗ್ಗೆ ಅತ್ಯಂತ ನೇರವಾಗಿ ಮತ್ತು ನಿಷ್ಠುರವಾಗಿ ನುಡಿದವರು ಅಧ್ಯಕ್ಷತೆಯನ್ನು ವಹಿಸಿದ್ದ ಖಲೀಲ್ ಮಾಮೂನ್‌ರವರು. "ಯಾವ ಸರ್ಕಾರವು ಕೂಡ ಭಾಷೆಯ ಬಗ್ಗೆ ಸಂಪೂರ್ಣ ಹೊರೆಯನ್ನು ಹೊತ್ತುಕೊಳ್ಳಲು ಸಾಧ್ಯವಿಲ್ಲ. ನಮ್ಮ ನಮ್ಮ ಭಾಷೆಯ ರಕ್ಷಣೆಯನ್ನು ನಾವೇ ಮಾಡಿಕೊಳ್ಳಬೇಕಾಗಿದೆ. ಆದರೆ ಉರ್ದುವಿನ ಬಗ್ಗೆ ತುಂಬಾ ಪೂರ್ವಾಗ್ರಹಗಳಿವೆ. ಉರ್ದುವಿನ ಸಮಸ್ಯೆಗಳನ್ನು ಬಗೆಹರಿಸಲು ಸರ್ಕಾರವು ಒಂದು ನಿರ್ದಿಷ್ಟ ಕಾರ್ಯಸೂಚಿಯನ್ನು ಹಮ್ಮಿಕೊಳ್ಳಬೇಕು. ಉರ್ದು ಭಾಷೆಯ ಅಭಿವೃದ್ಧಿಯ ಬಗ್ಗೆ ತಜ್ಞರ ಸಮಿತಿಯೊಂದನ್ನು ರಚಿಸಿ ಆ ಸಮಿತಿಯ ಸಲಹೆಗಳನ್ನು ಸರ್ಕಾರವು ಕಾರ್ಯರೂಪಕ್ಕೆ ತರಬೇಕು. ಹಾಲಿ ಇರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಇತರೆ ಭಾಷೆಗಳ ಬಗ್ಗೆ ಯಾವುದೇ ಪರಿವೆ ಇಲ್ಲ. ಉರ್ದು ಅಕಾಡೆಮಿಗೆ ಅಧ್ಯಕ್ಷರನ್ನು ಇದುವರೆಗೂ ನೇಮಕ ಮಾಡದೇ ಇರುವುದರ ಹಿನ್ನೆಲೆಯಲ್ಲಿ ಯಾವ ರಾಜಕೀಯ ಉದ್ದೇಶ ಸಾಧನೆ ಇದೆ. ಸರ್ಕಾರವು ನೇಮಿಸಿರುವ ಸಾಂಸ್ಕೃತಿಕ ನೀತಿ ನಿರೂಪಣಾ ಸಮಿತಿಯ ಅಧ್ಯಕ್ಷರು ಕನ್ನಡದೊಂದಿಗೆ ತುಳು, ಕೊಂಕಣಿ ಮೊದಲಾದ ಭಾಷೆಗಳ ಪ್ರಸ್ತಾಪವನ್ನು ಮಾಡಿದ್ದಾರೆ; ಆದರೆ ಉರ್ದು ಭಾಷೆಯ ಬಗ್ಗೆ ಯಾವುದೇ ಪ್ರಸ್ತಾಪವನ್ನು ಮಾಡಿಲ್ಲ. ಉರ್ದು ದಿನಪತ್ರಿಕೆಗಳಿಗೆ ಜಾಹಿರಾತನ್ನು ನೀಡುವಲ್ಲಿ ಕೂಡ ತಾರತಮ್ಯವನ್ನು ಎಸಗಲಾಗುತ್ತಿದೆ. ಕನ್ನಡಿಗ ಉರ್ದು ಸಾಹಿತಿಗಳಿಗೂ ಕೂಡ ರಾಜ್ಯೋತ್ಸವ ಪುರಸ್ಕಾರಗಳಿಗೆ ಪರಿಗಣಿಸಬೇಕು" ಎಂದು ಅಭಿಪ್ರಾಯಪಟ್ಟರು.

ಜಾಗತೀಕರಣದ ಈ ಸಂಕ್ರಮಣ ಕಾಲದಲ್ಲಿ ಭಾರತೀಯ ಭಾಷೆಗಳ ಮೇಲಿನ ಒತ್ತಡಗಳು ಅತೀವವಾಗಿ ಅವು ಕಳೆದುಹೋಗುತ್ತವೆನೋ ಎಂಬ ಆತಂಕ ಅನೇಕರಲ್ಲಿ ಮೂಡಿದೆ. ಈ ಸಂದರ್ಭದಲ್ಲಿ ನಮ್ಮ ಮನೆ ಮಾತು ಕೂಡ ಇಂಗ್ಲಿಷ್ ಎಂಬ ಹೆಮ್ಮೆಯಲ್ಲಿ ಅನೇಕ ಕುಟುಂಬಗಳು ಹುಸಿ ಶ್ರೇಷ್ಠತೆಯನ್ನು ಕಂಡುಕೊಳ್ಳುತ್ತಿವೆ. ಇಂದಿನ ಯುವ ತಲೆಮಾರು ಕನ್ನಡ, ಉರ್ದು ಮೊದಲಾದ ಭಾಷೆಗಳ ವ್ಯಾಮೋಹವನ್ನು ಮರೆತು ಅನ್ನದ ಭಾಷೆಯಾದ ಇಂಗ್ಲಿಷಿನತ್ತ ದೌಡಾಯಿಸುತ್ತಿರುವ ಈ ಸಂದರ್ಭದಲ್ಲಿ ಈ ಭಾಷೆಗಳ ಭವಿಷ್ಯತ್ತಿನ ಸ್ವರೂಪವೇನು ಎಂಬ ಬೃಹದಾಕಾರದ ಪ್ರಶ್ನೆಗೆ ಉತ್ತರವನ್ನು ಹೇಗೆ ಕಂಡುಕೊಳ್ಳಬೇಕು? ಈ ಸಂಕಷ್ಟದ ಕಾಲದಲ್ಲಿ ಉರ್ದು ಮತ್ತು ಕನ್ನಡದ ಗತಿ ಭಿನ್ನವಾಗೇನೂ ಇಲ್ಲ. ಕನ್ನಡ ಶಾಲೆಗಳು ಮುಚ್ಚಿ ಹೋಗುತ್ತಿರುವಂತೆಯೇ ಉರ್ದು ಶಾಲೆಗಳ ಬಾಗಿಲುಗಳು ಕೂಡ ಬಂದ್ ಆಗುತ್ತಿವೆ. ನನ್ನನ್ನು ಈಗ್ಗೆ ಸುಮಾರು ಹತ್ತು ವರ್ಷಗಳ ಹಿಂದೆ ಉರ್ದು ಉಪಾಧ್ಯಾಯರ ಸಂಘದ ಕಾರ್ಯಕ್ರಮಕ್ಕೆ ಆಹ್ವಾನಿಸಿದ್ದರು. ಆಗ ನಾನು ಒಂದು ಮೂಲಭೂತ ಪ್ರಶ್ನೆಯನ್ನು ಎತ್ತಿದೆ. "ನಿಮ್ಮ ಮಕ್ಕಳ ಪೈಕಿ ಎಷ್ಟು ಜನರನ್ನು ನೀವು ಉರ್ದು ಶಾಲೆಗಳಿಗೆ ದಾಖಲಿಸಿದ್ದೀರಿ, ಕೈ ಎತ್ತಿ" ಅವರ ಪೈಕಿ ಒಬ್ಬರೂ ಕೂಡ ಕೈ ಎತ್ತಲಿಲ್ಲ, ನನಗೆ ಆಶ್ಚರ್ಯವೂ ಆಗಲಿಲ್ಲ ಏಕೆಂದರೆ, ಅವರೆಲ್ಲರ ಮಕ್ಕಳು ಇಂಗ್ಲಿಷ್ ಮಿಡಿಯಮ್‌ನಲ್ಲಿ ಓದಿ ಇಂಜಿನಿಯರ್, ಡಾಕ್ಟರ್, ಪ್ರೊಫೆಸರ್ ಆಗಬೇಕಿತ್ತು. ಅದೇ ಹಂಬಲ ಒಬ್ಬ ಕೂಲಿ ಕಾರ್ಮಿಕನಿಗೆ, ಮನೆಗೆಲಸ ಮಾಡುವ ಮಹಿಳೆಗೆ, ಒಬ್ಬ ಲೋಡರ್‌ಗೆ ಅಥವಾ ಅಂತಹ ವರ್ಗದ ಒಬ್ಬ ತಾಯಿಗೋ ತಂದೆಗೋ ಇರಬಾರದು ಎಂದು ಆದೇಶ ಮಾಡಲು ಯಾರಿಗೆ ಸಾಧ್ಯ? ಉರ್ದು ಅಥವಾ ಕನ್ನಡ ಅಥವಾ ಯಾವುದೇ ಪ್ರಾದೇಶಿಕ ಭಾಷೆ ಉಳಿಯಲು ಬೆಳೆಯಲು ಆ ಭಾಷೆಯು ನಮ್ಮ ನಾಲಿಗೆಯ ಮೇಲೆ ಆಡಬೇಕು ನಮ್ಮ ಕೈಯಲ್ಲಿ ಬರವಣಿಗೆಯ ಮೂಲಕ ನಲಿಯಬೇಕು. ನಮ್ಮ ಆಫೀಸುಗಳಲ್ಲಿ, ನ್ಯಾಯಾಲಯದಲ್ಲಿ, ರೆವಿನ್ಯೂ ಇಲಾಖೆಯಲ್ಲಿ ಹಾಗೂ ಸರ್ಕಾರದ ಕಡತಗಳಲ್ಲಿ ಜೀವಂತವಾಗಿ ಸ್ಪಂದಿಸುತ್ತಿರಬೇಕು. ಈ ಆಶಯ ವಾಸ್ತವವಾಗಲು, ಆ ಭಾಷೆಗಳು ನಮ್ಮ ಮಕ್ಕಳನ್ನು ಬೇಡುತ್ತವೆ. ಆದರೆ ನಮ್ಮ ಮಕ್ಕಳನ್ನು ನಾವೇ ಕೈಯಾರೆ ಜಾಗತೀಕರಣದ ಪ್ರಭುತ್ವವನ್ನು ಹೇರುತ್ತಿರುವ ರಕ್ಕಸನ ಜೋಳಿಗೆಯೊಳಗೆ ಅರ್ಪಿಸಿ ಬಂದಿರುವಾಗ ಈ ಭಾಷೆಗಳಿಗೆ ದಕ್ಕುವವರ್‍ಯಾರು? ನಮ್ಮ ಮುಂದಿನ ತಲೆಮಾರು ನಮ್ಮ ಭಾಷೆಗಳಲ್ಲಿ ಆಡಿ ಹಾಡಿ ನಕ್ಕು ನಲಿದು ಕಣ್ಣು ಕೆಡುವಿ ಬೈದಾಡದಿದ್ದರೆ... ಸರ್ಕಾರವೇನು ಮಾಡಬೇಕು...

■ ಬಾನು ಮುಷ್ತಾಕ್


ಡಾ. ಗೋಪಿನಾಥ್ ನಾರಂಗ್

ಧಾತ್ತೇರಿ

• ಯಾಹು

ಸದ್ಯದಲ್ಲಿ ನೀವು ಕೆಜೆಪಿ ಸೇರದು ಒಳ್ಳೆದು ಸಾರ್

ಶಂಕರ ಬಿದರಿ ಎಂಬ ಅಪರೂಪದ ಪೊಲೀಸ್ ಅಧಿಕಾರಿ ಈಗ ಮೂರನೆ ದರ್ಜೆ ರಾಜಕಾರಣಿಯಂತೆ ಪಾರ್ಟಿ ಬದಲಿಸಲು ಕಾಯುತ್ತಾ ಕುಳಿತಿದ್ದಾರೆ ಎಂಬ ಮನ ಕರಗಿಸುವ ವಿಷಯ ಹರಡಿದೆಯಲ್ಲಾ, ಈ ಬಗ್ಗೆ ಮಾಜಿ ಪೊಲೀಸ್ ಮತ್ತು ಹಾಲಿ ರಾಜಕಾರಣಿಯನ್ನು ಮಾತನಾಡಿಸಬೇಕೆನಿಸಿ ಕೂಡಲೇ ಫೋನ್ ಮಾಡಿದರೆ ರಿಂಗಾಯ್ತು.

ರಿಂಗ್‌ಟೋನ್: ಟರ್‌ರ್... ಟರ್‌ರ್... ಟರ್‌ರ್...

"ಹಲೋ ಯಾರ್‍ರೀ?"

"ನಾನು ಸಾರ್, ಪತ್ರಕರ್ತ ಯಾಹು ಅಂತ ನನ್ಹೆಸರು."

"ಏನೇಳ್ರಿ."

"ನಿಮ್ಮ ರಾಜಕೀಯ ತೀರ್ಮಾನಗಳು ನಿಮ್ಮ ವೀರಪ್ಪನ್ ಬೇಟೆ ತರನೇ ಕಾಣ್ತಾಯಿವೆಯಲ್ಲ ಸಾರ್?"

"ಯಾಕ್ರಿ ಹಾಗಂತಿರಾ?"

"ನನಗೇನೊ ಅದೇ ತರ ಕಾಣ್ತು ಸಾರ್. ಅದಕ್ಕೆ ಹಾಗಂದೆ. ನೀವು ವೀರಪ್ಪನ್ ಹಿಡಿಯಕ್ಕೆ ಅಂತ ಹೋದಾಗ ನಿಮ್ಮ ಜೊತೆಯಿದ್ದ ಪೊಲೀಸರು ಸವೆದಿರೊ ದಾರೀಲಿ ಓಡಾಡಿದ್ರು. ಕಾಡೊಳಗಡೆ ಯಾರೂ ಹೋಗಲಿಲ್ಲ, ಹಾಗಾಗಿ ವೀರಪ್ಪನ್ ಕೂಡ ಆರಾಮಾಗಿ ನೂರ ಮೂವತ್ತೈದು ಜನ ಕೊಂದ, ಮದುವೆಯಾದ, ಎರಡು ಮಕ್ಕಳನ್ನು ಮಾಡಿದ. ವಯಸ್ಸಾದ ಮೇಲೆ ಸತ್ತ. ಇಂತಹ ಕ್ರೂರಿಯನ್ನು ಕೊಲ್ಲೊ ಕಾರ್ಯಾಚರಣೆಯ ಮುಂದಾಳಾಗಿದ್ದ ನಿಮಗೆ ಸುಲಭವಾಗಿ ಸಿಕ್ಕಿದ್ದೋರು ತಮಿಳು ಜನ. ಅದರಲ್ಲೂ ಹೆಂಗುಸರು. ಅವರನ್ನು ತಗಂಡೋಗಿ ಚಚ್ಚಿ ಎಲ್ಲಿದ್ದಾನೆ ವೀರಪ್ಪನ್ ಹೇಳಿ ಅಂತ ಹಿಂಸೆ ಕೊಟ್ರಿ, ಈ ಕಾರಣವಾಗಿ ಸದಾಶಿವ ಆಯೋಗದಿಂದ ಛೀಮಾರಿ ಹಾಕಿಸಿಕೊಂಡು ಬಹಳ ಸಂಕಟ ಪಟ್ರಿ. ನಿಮ್ಮ ಪ್ರಮೋಷನ್ ವಿಷಯದಲ್ಲೂ ಹಿನ್ನಡೆಯಾಗಿ ಕಡೆಗೆ ಹೋರಾಟದಿಂದ ಅದನ್ನ ಪಡೆದ್ರಿ. ಇಂತಹ ಸಾಧನೆಗಳು ಪೊಲೀಸ್ ಇಲಾಖೆ ಸಾಧನೆಗಳಾಗಿ ಉಳಿತವೆ ಅಷ್ಟೆ, ಆದ್ರೆ ರಾಜಕಾರಣಕ್ಕೆ ಬರಬೇಕಾದ್ರೆ ಬೇರೆ ಸಾಧನೆ, ನಡವಳಿಕೆ ಮುಖ್ಯ ಅನ್ನದೆ ಗೊತ್ತಿಲ್ಲವಲ್ಲ ಸಾರ್ ನಿಮಗೆ?"

"ರಿ, ರಾಜಕಾರಣಕ್ಕೆ ಯಾರು ಬೇಕಾದ್ರು ಬರಬಹುದು."

"ಬನ್ನಿ ಸಾರ್. ಬೇಡ ಅನ್ನಕ್ಕೆ ನಾನ್ಯಾರು. ಆದ್ರೆ ನೀವು ಹೋರಾಡಿದ್ದು ಸಾಹಸ ಮಾಡಿದ್ದು ಸಹಾಯ ಮಾಡಿದ್ದು ಎಡೂರಪ್ಪ ಸರಕಾರಕ್ಕೆ, ಅಂಥೋರು ಕೆಜೆಪಿಗೆ ಹೋಗದು ಬಿಟ್ಟು ಕಾಂಗ್ರೆಸಿಗ್ಯಾಕೋದ್ರಿ, ಅಂತ?"

"ಕಾಂಗ್ರೆಸ್ಸು ಯಾವ ಕಡೆಯಿಂದ ನೋಡಿದ್ರೂ ನಾ... ಸೇರೊ ಅಂತ ಪಾರ್ಟಿ ಕಂಡ್ರಿ. ಅಲ್ಲಿ ನಿಮ್ಮ ನಿವ... ಸಾಧನೆ, ಸ್ವತಂತ್ರ ವ್ಯಕ್ತಿತ್ವದಿಂದ ಬೆಳೆಬಹುದು."

"ಅದೇನೊ ನಿಜ ಸಾರ್. ಬಿಜೆಪಿಲಾದ್ರೆ ಚಡ್ಡಿಗ... ಅಜೆಂಡಾಗಳನ್ನ ಕೇಳಬೇಕಾಗುತ್ತೆ, ಇನ್ನ ಜೆಡಿಎಸ್‌ಗೋ... ಅಪ್ಪ ಮಕ್ಕಳು ಹೇಳಿದಂಗೆ ಕೇಳಬೇಕಾಗತ್ತೆ."

"ಅದ್ಕೆ ಅಲ್ಲವೇನ್ರಿ ನಾನು ಕಾಂಗ್ರೆಸ್‌ಗೋಗಿದ್ದು."

"ಅಲ್ಲ ಸಾರ್, ಆ ಕಾಂಗ್ರೆಸ್‌ನವ್ರು ಪ್ರತಿಭಟನೆ ಕುಂತಿದ್ದಾಗ ಅವರನ್ನೆಲ್ಲ ಹಿಡದು ಅರೆಸ್ಟ್ ಮಾ... ನಾಯಿಪಾಡ್ಮಾಡಿದ್ರಿ. ಎಡೂರಪ್ಪ ಬೋಪಯ್ಯನ್ನ ಹಿಡಕೊಂ... ಬಹುಮತ ಸಾಬೀತು ಮಾಡಕ್ಕೆ ಹೋದಾಗ ವಿರೋ... ಪಕ್ಷದವರನ್ನ ವಿಧಾನಸೌಧದ ಒಳಗಡೆ ಬಿಡ್ಲಿಲ್ಲ, ಆ... ಸಿದ್ದರಾಮಯ್ಯ ನಿಮ್ಮ ಕ್ಯಾಪನ್ನ ಹಾರಿಸಿದ್ರು. ಇ... ಪ್ರಕರಣನ ಮರತು ಕಾಂಗ್ರೆಸ್ನೋದ್ರೆ ಅವ್ರು ಟಿಕೆಟ್ ಕೊಡ್ತರ ಸಾರ್?"



ಮಂಡ್ಯ: ಕ್ರಿಕೆಟ್ ಬೆಟ್ಟಿಂಗ್ ದಂಧೆಕೋರರು

ಮಂಡ್ಯ ಮೂಲದ ಉದ್ಯಮಿಯೊಬ್ಬ ಮೈಸೂರಿನಲ್ಲಿ ಆತ್ಮಹತ್ಯೆ ಮಾಡಿಕೊಂಡದ್ದು, ಇಪ್ಪತ್ನಾಲ್ಕರ ಹದಿಹರೆಯದ ಯುವಕ ರೈಲಿಗೆ ತಲೆಕೊಟ್ಟು ಆತ್ಮಹತ್ಯೆಗೆ ಶರಣಾಗಿದ್ದು, ಒಂದು ತಿಂಗಳ ಹಿಂದೆಯಷ್ಟೇ ಯುವಕನೊಬ್ಬ ತನ್ನ ಹೊಚ್ಚ ಹೊಸ ಕಾರಿನಲ್ಲೆ ವಿಷ ಸೇವಿಸಿ ಜೀವನಕ್ಕೆ ವಿದಾಯ ಹೇಳಿದ್ದು, ಉತ್ತಮ ಕುಟುಂಬದ ಸಭ್ಯ ಹುಡುಗರು ಪೊಲೀಸರಿಗೆ ಸಿಕ್ಕಿ ಕೇಸು ಹೆಟ್ಟಿಸಿಕೊಂಡಿದ್ದರ ಹಿಂದೆ ನಿಜವಾದ ಅಸಲಿ ಕಾರಣವೊಂದಿದೆ!

ಅದು ಕ್ರಿಕೆಟ್ ಬೆಟ್ಟಿಂಗ್!



ಹತ್ತಾರು ದೇಶಗಳಲ್ಲಿ ಉತ್ತಮ ಕ್ರೀಡೆಯಾಗಿ ನೋಡಿ ಸಂತಸಪಡುತ್ತಿದ್ದ ಕ್ರಿಕೆಟ್ ಇಂದು ಮಾಫಿಯಾ ಡಾನ್‌ಗಳ ಕೈಮುಷ್ಠಿಗೆ ಸಿಲುಕಿದೆ. ಕ್ರಿಕೆಟ್ ಬೆಟ್ಟಿಂಗ್ ಎಂಬ ಹಾಳುಕೂಪದಲ್ಲಿ ಸಿಲುಕಿ ಹೊರಬರಲಾಗದೆ ಬಲಿಯಾದವರ, ಬರ್ಬಾದಾಗುತ್ತಿರುವವರ ಸಂಖ್ಯೆ ಮಂಡ್ಯದಲ್ಲಿ ದಿನೇ ದಿನೇ ಹೆಚ್ಚಾಗುತ್ತಿರುವುದನ್ನು ನೋಡಿದರೆ ಇನ್ನು ಕೆಲವೇ ದಿನಗಳಲ್ಲಿ ಸಾವಿರಾರು ಕುಟುಂಬಗಳು ಬೀದಿಗೆ ಬೀಳುವುದರಲ್ಲಿ ಯಾವುದೇ ಸಂಶಯವಿಲ್ಲ.

ಮಂಡ್ಯ ಜಿಲ್ಲೆಯಲ್ಲಿ ಇಂದು ಕ್ರಿಕೆಟ್ ಆಟವಾಗಿಯಷ್ಟೇ ಉಳಿದಿಲ್ಲ, ಬದಲಿಗೆ ಬೆಟ್ಟಿಂಗ್ ದಂಧೆ ನಗರದ ಗಲ್ಲಿಗಲ್ಲಿ ಸೇರಿದಂತೆ ಗ್ರಾಮೀಣ ಪ್ರದೇಶಗಳ ಸಂದಿ-ಗೊಂದಿಗಳಲ್ಲೂ ತನ್ನ ಕಬಂಧಬಾಹುಗಳನ್ನು ಚಾಚಿದೆ. ಶಾಲಾ-ಕಾಲೇಜುಗಳ ವಿದ್ಯಾರ್ಥಿಗಳು, ಹದಿಹರೆಯದ ಯುವಕರು, ತರಕಾರಿ ಮಾರ್ಕೆಟ್‌ನಲ್ಲಿ ಕೆಲಸ ಮಾಡುವ ಕೂಲಿಗಳು, ಹಮಾಲಿಗಳು ಸೇರಿದಂತೆ ಎಲ್ಲಾ ವರ್ಗದವರನ್ನು ಕ್ರಿಕೆಟ್ ಬೆಟ್ಟಿಂಗ್ ಎಂಬ ಆಕ್ಟೋಪಸ್ ತನ್ನ ಹಿಡಿತದಲ್ಲಿಟ್ಟುಕೊಂಡಿದೆ ಎಂದರೆ ಖಂಡಿತವಾಗಿಯೂ ತಪ್ಪಾಗಲಾರದು. ಸಿಂಗಲ್‌ನಂಬರ್ ಲಾಟರಿ, ಮಟ್ಕಾ, ಕುದುರೆ ಕೇಸು, ಇಸ್ಪೀಟುಗಳನ್ನು ಮಾತ್ರ ಕಂಡಿದ್ದ ಮಂಡ್ಯದಲ್ಲಿಂದು ಕ್ರಿಕೆಟ್ ಬೆಟ್ಟಿಂಗ್ ದಂಧೆ ರಾಜಾರೋಷವಾಗಿ ವಿಜೃಂಭಿಸುತ್ತಾ ಹಲವರನ್ನು ಬಲಿತೆಗೆದುಕೊಳ್ಳುತ್ತಿದೆ.

ಸಾಲು ಸಾಲು ಆತ್ಮಹತ್ಯೆಗಳು

ಮಂಡ್ಯದಲ್ಲಿ ಕಳೆದೊಂದು ತಿಂಗಳ ಅವಧಿಯಲ್ಲಿ ನಡೆದಿರುವ ಮೂವರು ಯುವಕರ ಆತ್ಮಹತ್ಯೆಯ ಹಿಂದೆ ಕ್ರಿಕೆಟ್ ಬೆಟ್ಟಿಂಗ್ ದಂಧೆಯ ಕರಾಳ ರುದ್ರನರ್ತನವಿದೆ. ಮಂಡ್ಯದ ವಿ.ವಿ.ನಗರ ನಿವಾಸಿಯಾದ ಈಡಿಗ ಜನಾಂಗದ ರಾಮಚಂದ್ರಪ್ಪ ಎಂಬುವರು ತುಂಬಾ ಕಷ್ಟಪಟ್ಟು ಆರ್ಥಿಕವಾಗಿ ಮೇಲೆ ಬಂದಿದ್ದರು. ಇವರ ಪುತ್ರ ಮಹೇಶ್ ಆಲಿಯಾಸ್ ಪೆಪ್ಸಿ ಮಹೇಶ್ ಎಂಬ 40ರ ಹರೆಯದ ವ್ಯಕ್ತಿ 6-7 ವರ್ಷಗಳ ಹಿಂದೆ ಮಂಡ್ಯದ ಜನರೇ ಹೊಗಳುವಂತ ಯಶಸ್ವಿ ಉದ್ಯಮಿಯಾಗಿದ್ದ ಮೊದಮೊದಲು ಮಂಡ್ಯಕ್ಕೆ ಪೆಪ್ಸಿ, ಕೋಕಾಕೋಲ ಸರಬರಾಜು ಮಾಡುವ ಉದ್ಯಮ ಪ್ರಾರಂಭ ಮಾಡಿದ್ದ ಮಹೇಶ್ ನಂತರ ಕೇಬಲ್ ಉದ್ಯಮಕ್ಕೂ ಕೈಚಾಚಿ ಯಶಸ್ವಿಯಾಗಿದ್ದ ನಂತರದ ದಿನಗಳಲ್ಲಿ ಮಹೇಶ್ ಮಂಡ್ಯ ನಗರಸಭೆಯ ಹಾಲಿ ಅಧ್ಯಕ್ಷ ಸಿದ್ದರಾಜು ಜೊತೆ ಕೈಜೋಡಿಸಿ ಮೈಸೂರಿನಲ್ಲಿ ರಿಯಲ್ ಎಸ್ಟೇಟ್ ಉದ್ಯಮಕ್ಕೆ ಕೈಹಾಕಿ ಸೈ ಎನಿಸಿಕೊಂಡಿದ್ದ. 10 ವರ್ಷಗಳ ಹಿಂದೆ ರಜನಿ ಎಂಬುವರನ್ನು ವಿವಾಹವಾದ ಮಹೇಶ್‌ಗೆ ಇಬ್ಬರು ಮಕ್ಕಳಿದ್ದು, ಸುಖೀ ಕುಟುಂಬವಾಗಿತ್ತು. ಈಗ್ಗೆ ಆರು ವರ್ಷಗಳ ಹಿಂದೆ ಮಂಡ್ಯ ತೊರೆದು ಮೈಸೂರಿನಲ್ಲಿ ವಾಸ್ತವ್ಯ ಹೂಡಿದ್ದ ಮಹೇಶ್ ಬಳಿ ಹಣವಿದ್ದುದರಿಂದ, ಸ್ನೇಹಿತರ ಬಳಗ ದೊಡ್ಡದಾಯಿತು. ಕೈಎತ್ತಿ ನೀಡುವ ಗುಣವಿದ್ದರಿಂದ ಹಲವರು ಈತನ ಸ್ನೇಹಿತರಾದರು.

ಆದರೆ ಯಾರು ಈ ಮನೆಹಾಳು ಮಾಡುವ ಕ್ರಿಕೆಟ್ ಬೆಟ್ಟಿಂಗ್ ಕೂಪಕ್ಕೆ ತಳ್ಳಿದರೋ ಕ್ರಮೇಣ ಮಹೇಶ್ ಈ ದಂಧೆಯಲ್ಲಿ ಮುಳುಗಿಹೋದ. ಕೊನೆಗೆ ತಾನೇ ಬುಕ್ಕಿಯಾಗಿಯೂ ಮಾರ್ಪಟ್ಟ. ಸಿಗರೇಟ್ ಹೊಗೆ ಕಂಡರೂ ದೂರ ಹೋಗುತ್ತಿದ್ದ ಮಹೇಶ್ ಕ್ರಿಕೆಟ್ ಬೆಟ್ಟಿಂಗ್ ಜಾಲಕ್ಕೆ ಬಿದ್ದ ನಂತರ ಸಿಗರೇಟು, ಕುಡಿತ ಸೇರಿದಂತೆ ಇತರೆ ಚಟಗಳ ದಾಸನಾದ. ಹಗಲುರಾತ್ರಿಗಳ ಪರಿವೆಯಿಲ್ಲದೆ ಬೆಟ್ಟಿಂಗ್ ನಡೆಸಿದ. ಯಾವ ಹೆಂಡತಿ ತಾನೇ ಬೆಟ್ಟಿಂಗ್‌ನಿಂದ ಸಾಲಗಾರನಾದ ಗಂಡನನ್ನು ಸಹಿಸಿಕೊಳ್ಳುತ್ತಾಳೆ. ಸುಂದರವಾಗಿದ್ದ ಸಂಸಾರದಲ್ಲಿ ಆಗಾಗ್ಗೆ ಜಗಳಗಳು ಶುರುವಾದವು. ಕಷ್ಟಪಟ್ಟು ಸಂಪಾದನೆ ಮಾಡಿದ್ದ ರಾಮಚಂದ್ರಪ್ಪ ತಮ್ಮದೊಂದಿಷ್ಟು ಆಸ್ತಿ ಮಾರಿ ಮಹೇಶನ ಸಾಲ ತೀರಿಸಿದ್ದರು. ಮಹೇಶ್ ಆತ್ಮಹತ್ಯೆ ಮಾಡಿಕೊಳ್ಳುವ ತಿಂಗಳ ಹಿಂದಷ್ಟೇ 40 ಲಕ್ಷ ಸಾಲ ತೀರಿಸಿದ್ದರು.



ಆದರೆ ಅ.16ರಂದು ಜೈಪುರದಲ್ಲಿ ನಡೆದ ಭಾರತ ಹಾಗೂ ಆಸ್ಟ್ರೇಲಿಯ ನಡುವಿನ ಪಂದ್ಯದಲ್ಲಿ ಆಸ್ಟ್ರೇಲಿಯದವರು 380 ರನ್‌ಗಳ ಭರ್ಜರಿ ಮೊತ್ತ ದಾಖಲಿಸಿದ್ದರು. ಈ ಪಂದ್ಯದಲ್ಲಿ ಭಾರತ ಸೋಲುವುದು ಖಚಿತ ಎಂದು ಬುಕ್ಕಿಗಳು 100:23ರಷ್ಟು ರೇಟ್ ಕೊಟ್ಟಿದ್ದರು. ಅಂದರೆ ಭಾರತ ಗೆಲ್ಲುತ್ತದೆಂದು 23 ರೂಪಾಯಿ ಕಟ್ಟಿದರೆ ಗೆದ್ದಾಗ 100 ರೂ. ಸಿಗುತ್ತಿತ್ತು. ಹೇಗಿದ್ದರೂ ಈ ಪಂದ್ಯದಲ್ಲಿ ಭಾರತ ಸೋಲುವುದು ಗ್ಯಾರಂಟಿ ಎಂದುಕೊಂಡ ಬುಕ್ಕಿ ಮಹೇಶ್ 1 ಕೋಟಿಗೂ ಹೆಚ್ಚು ಮೊತ್ತವನ್ನು ಕಟ್ಟಿಸಿಕೊಂಡಿದ್ದ. 360ರನ್ ಹೊಡೆದು ಭಾರತ ಗೆಲ್ಲುವುದು ಅಸಾಧ್ಯವೇ ಎಂದು ಭಾವಿಸಿದ ಮಹೇಶ್ ದೊಡ್ಡ ಮೊತ್ತವನ್ನು ದೆಹಲಿ ಮೂಲದ ಬುಕ್ಕಿಗೆ ಕಟ್ಟದೆ ತನ್ನಲ್ಲೇ ಉಳಿಸಿಕೊಂಡಿದ್ದ ಈ ಪಂದ್ಯದಲ್ಲಿ ಭಾರತ ಗೆದ್ದು ಆಸ್ಟ್ರೇಲಿಯ ಸೋತಿತು. ಈ ಕಡೆ ಬೆಟ್ಟಿಂಗ್ ಹಣ ನೀಡಬೇಕಿದ್ದ ಮಹೇಶ ಹಣ ಹೊಂದಿಸಲು ಸಾಕಷ್ಟು ಪರದಾಡಿದ. ಬೆಟ್ಟಿಂಗ್‌ದಾರರಿಗೆ ಹಣ ಕೊಡಲು ಸಾಧ್ಯವಾಗದೆ ಅ.17ರ ಮಧ್ಯಾಹ್ನ ಪೆಪ್ಸಿ ಮಹೇಶ ಮೈಸೂರಿನ ತನ್ನ ತೋಟದ ಮನೆಯಲ್ಲಿ ಆತ್ಮಹತ್ಯೆಗೆ ಶರಣಾದ. ತಂದೆ-ತಾಯಿ, ಹೆಂಡತಿ, ಇಬ್ಬರು ಮಕ್ಕಳೊಂದಿಗೆ ಸುಖಸಂಸಾರ ಸಾಗಿಸುತ್ತಿದ್ದ ಮಹೇಶನನ್ನು ಕ್ರಿಕೆಟ್ ಬೆಟ್ಟಿಂಗ್ ದಂಧೆ ಬಲಿಪಡೆಯಿತೆಂದೇ ಹೇಳಬಹುದು.

ಸಚಿವ ಅಂಬರೀಶ್, ಎಸ್‌ಪಿ ಕ್ರಮ ಕೈಗೊಳ್ಳಲಿ



ಬೆಟ್ಟಿಂಗ್ ದಂಧೆ ಮಂಡ್ಯದಲ್ಲಿ ರಾಜಾರೋಷವಾಗಿ ನಡೆಯುತ್ತಿದ್ದರೂ ಪೊಲೀಸರು ಮಾತ್ರ ಕಣ್ಣಿದ್ದೂ ಕುರುಡರಂತೆ ದಂಧೆಕೋರರನ್ನು ಹಿಡಿಯಲು ಮೀನಾಮೇಷ ಎಣಿಸುತ್ತಿದ್ದಾರೆ. ಈ ಹಿಂದೆ ಡಿವೈಎಸ್‌ಪಿ ಚನ್ನಬಸವಣ್ಣ ಮಹೇಂದ್ರ, ಶಂಕರ್ ಮೊದಲಾದವರನ್ನು ಬಂಧಿಸಿ ಕೇಸು ಜಡಿದಿದ್ದರು. ಆದರೆ ಅದೇನೂ ಪ್ರಯೋಜನವಾದಂತಿಲ್ಲ. ಈಗ್ಗೆ ವಾರದ ಹಿಂದೆ ರಂಜಿತ ಎಂಬ ಯುವಕ ತನ್ನ ಸ್ನೇಹಿತರ ಜೊತೆ ಸೇರಿ ಬೆಟ್ಟಿಂಗ್ ದಂಧೆ ನಡೆಸುತ್ತಿದ್ದನೆಂದು ಪಶ್ಚಿಮಠಾಣೆ ಪೊಲೀಸರು ಬಂಧಿಸಿದ್ದರು. ಆಗಿನ್ನು ಬೆಟ್ಟಿಂಗ್ ಜಾಲಕ್ಕೆ ಬಂದಿದ್ದ ರಂಜಿತ್ ಪ್ರಕರಣದಲ್ಲಿ ಸಣ್ಣ ಕೇಸಷ್ಟೇ ಜಡಿದ ಪೊಲೀಸರು 2 ಲಕ್ಷ ಭರ್ತಿ ರೊಕ್ಕ ಸುಲಿದುಕೊಂಡರು ಎಂಬುದಾಗಿ ಮಂಡ್ಯದ ಗಲ್ಲಿ ಗಲ್ಲಿಗಳಲ್ಲೂ ಜನ ಮಾತನಾಡುತ್ತಿದ್ದಾರೆ.

ಈ ಪ್ರಕರಣವನ್ನು ಸರಿಯಾಗಿ ತನಿಖೆ ನಡೆಸಿದ್ದರೆ ಪೊಲೀಸರು ಮಂಡ್ಯದ ಪ್ರಮುಖ ಬುಕ್ಕಿಗಳ ಜೊತೆಗೆ ಇವರ ಬಾಸ್‌ಗಳನ್ನು ಬಂಧಿಸಿ ಜೈಲಿಗೆ ಗದುಮಬಹುದಿತ್ತು. ಆದರೆ ಮಂಡ್ಯದ ಯಾವ ಪೊಲೀಸರು ಪ್ರಮುಖರನ್ನು ಮುಟ್ಟದಿರುವುದರಿಂದ ಅವರ ಬೆಟ್ಟಿಂಗ್ ದಂಧೆ ಯಾವ ಅಡೆತಡೆಯೂ ಇಲ್ಲದೆ ನಡೆಯುತ್ತಿದೆ. ಈಗಲಾದರೂ ಮಂಡ್ಯ ಎಸ್‌ಪಿ ಭೂಷಣ್ ಬೊರಸೆ ಅವರು ಕ್ರಿಕೆಟ್ ಬೆಟ್ಟಿಂಗ್ ದಂಧೆಕೋರರ ನಡು ಮುರಿಯದಿದ್ದರೆ ಮಂಡ್ಯದ ಯುವಜನಾಂಗ ಬೆಟ್ಟಿಂಗ್‌ಕೂಪದಲ್ಲಿ ಬಿದ್ದು ದುರಂತ ಅಂತ್ಯ ಕಾಣುವುದು ನಿಶ್ಚಿತ.

ಅಂಬರೀಶ್ ಕೂಡಲೇ ಎಸ್‌ಪಿ ಭೂಷಣ್ ಬೊರಸೆ ಅವರಿಗೆ ಕ್ರಿಕೆಟ್ ಬೆಟ್ಟಿಂಗ್ ದಂಧೆಕೋರರ ಮೇಲೆ ಕ್ರಮ ಕೈಗೊಳ್ಳುವಂತೆ ತಾಕೀತು ಮಾಡಲಿ. ಆ ಮೂಲಕ ಬೆಟ್ಟಿಂಗ್ ದಂಧೆಗೆ ತಮ್ಮ ಮಕ್ಕಳನ್ನು ಕಳೆದುಕೊಂಡ ಪೋಷಕರ ಕಣ್ಣೀರಿನ್ನು ನಿಲ್ಲಿಸಲಿ, ಮಂಡ್ಯದ ಯುವಜನಾಂಗವನ್ನು ಬೆಟ್ಟಿಂಗ್ ಮಾಫಿಯಾದ ಹಿಡಿತದಿಂದ ರಕ್ಷಿಸಲಿ.

ರೈಲಿಗೆ ತಲೆಕೊಟ್ಟ ಯುವಕ

ಮಂಡ್ಯದ ಜೈನರ ಬೀದಿಯಲ್ಲಿರುವ ಸಾಮ್ರಾಟ್ ಜವಳಿ ಅಂಗಡಿಯ ಮಾಲೀಕ ಶಾಂತಿಪ್ರಸಾದ್‌ಗೆ ಮಂಡ್ಯದಲ್ಲಿ ಒಳ್ಳೆಯ ಗೌರವವಿದೆ. ಅವರ ಮಗ ಗೌತಮ್‌ಗೆ ಕೇವಲ 24 ವರ್ಷ. ಕ್ರಿಕೆಟ್ ಬೆಟ್ಟಿಂಗ್ ಎಂಬ ಮೃತ್ಯುಕೂಪದೊಳಗೆ ಅರಿಯದೆ ಹೆಜ್ಜೆಯಿಟ್ಟ ಆ ಯುವಕ ಕೊನೆಗೆ ಅದರಿಂದ ಹೊರಬರಲಾಗದೆ ನಾಲ್ಕು ದಿನಗಳ ಹಿಂದೆ ಉಮ್ಮಡಹಳ್ಳಿ ಗೇಟ್ ಬಳಿ ರೈಲಿಗೆ ತಲೆಕೊಟ್ಟು ಆತ್ಮಹತ್ಯೆ ಮಾಡಿಕೊಂಡ. ತಂದೆ ಶಾಂತಿಪ್ರಸಾದ್‌ಗೆ ಮಗ ಕ್ರಿಕೆಟ್ ಬೆಟ್ಟಿಂಗ್ ಮಾಡುತ್ತಿದ್ದುದೇ ಗೊತ್ತಿರಲಿಲ್ಲ. 24ನೇ ವಯಸ್ಸಿನ ಮಗನನ್ನು ಕಳೆದುಕೊಂಡ ಶಾಂತಿಪ್ರಸಾದ್ ಮತ್ತು ಅವರ ಪತ್ನಿಯ ಪುತ್ರ ರೋದನ ಇನ್ನಾರಿಗೂ ಬರಬಾರದು.

ಹಳೇಬೂದನೂರಿನ ಅಂಕಣ್ಣನ ಮಗ ಅನಿಲ್‌ಗೆ 30 ವರ್ಷವಷ್ಟೇ ಆಗಿತ್ತು, ಲೇವಾದೇವಿ, ಚೀಟಿ ಮಾಡಿಕೊಂಡು ಒಂದಷ್ಟು ಕಾಸು ಮಾಡಿದ್ದ. ಅದ್ಯಾವಾಗ ಕ್ರಿಕೆಟ್ ಬೆಟ್ಟಿಂಗ್‌ನಲ್ಲಿ ಬಿದ್ದನೋ ತಿಳಿಯದು. ಈಗ್ಗೆ ತಿಂಗಳ ಹಿಂದಷ್ಟೇ ಸ್ವರ್ಣಸಂದ್ರದ ಬಳಿ ಕೆಲವೇ ತಿಂಗಳ ಹಿಂದಷ್ಟೇ ಖರೀದಿಸಿದ್ದ ಸ್ವಿಫ್ಟ್ ಕಾರಿನಲ್ಲೇ ವಿಷ ಸೇವಿಸಿ ಜೀವನವನ್ನೇ ಕೊನೆಗೊಳಿಸಿಕೊಂಡ.

ಇವೆಲ್ಲ ಬೆಟ್ಟಿಂಗ್‌ಗೆ ಬಲಿಯಾದವರ ಕಥೆಯಾಯಿತು. ಆದರೆ ಇದರಿಂದ ಬರ್ಬಾದಾಗುತ್ತಿರುವವರ ಕಥೆ ಬಹಳ ಇದೆ. ಬಹಳಷ್ಟು ಜನರು ಈ ಕೂಪಕ್ಕೆ ಬಿದ್ದು ಬರ್ಬಾದಾಗಿ ಮನೆ-ಮಠ, ಹೆಂಡತಿ-ಮಕ್ಕಳನ್ನು ತೊರೆದು ಊರೇ ಬಿಟ್ಟಿದ್ದಾರೆ. ಡ್ರಗ್ಸ್ ವ್ಯಕ್ತಿಯನ್ನು ನಾಶ ಮಾಡಿದರೆ, ಬೆಟ್ಟಿಂಗ್ ದಂಧೆ ಆತನ ಜೊತೆಗೆ ಇಡೀ ಕುಟುಂಬವನ್ನೇ ಸರ್ವನಾಶ ಮಾಡುತ್ತಿದೆ. ಪೇಟೆ ಬೀದಿಯಲ್ಲಿದ್ದ ಮಾರ್ವಾಡಿ ಚಂಪಾಲಾಲ್, ರಂಗೋಲಿ ಸುರೇಶ್ ಬುಕ್ಕಿಗಳಾಗಿ ಕೋಟ್ಯಾಂತರ ದುಡ್ಡನ್ನು ಮುಂಡಾಯಿಸಿ ಊರೇ ಬಿಟ್ಟರು. ಮತ್ತೊಬ್ಬ ಬುಕ್ಕಿ ಮಾರ್ವಾಡಿ ಸಂಜೀವ್‌ಕುಮಾರ್ ಜೈನ್ ಅಲಿಯಾಸ್ ಸಂಜು ಕೋಟಿ ಮೊತ್ತವನ್ನು ಎತ್ತಿ ಹಾಕಿ ಪುಣೆ ಸೇರಿಕೊಂಡಿದ್ದಾನೆ. ರಂಗೋಲಿ ಸುರೇಶ್ ಹಾಗೂ ಮಾರ್ವಾಡಿ ಸಂಜು ಪುಣೆಯಲ್ಲಿ ಮತ್ತದೇ ಹಾಳು ದಂಧೆ ಮುಂದುವರೆಸಿದ್ದಾರೆ.

ಆದರೂ ಬೆಟ್ಟಿಂಗ್ ಜಾಲಕ್ಕೆ ಬೀಳುತ್ತಿರುವ ಯುವಸಮುದಾಯಕ್ಕೆ ಮುಂದೊಂದು ದಿನ ತನಗೂ ಇಂತಹ ಪರಿಸ್ಥಿತಿ ಬರಬಹುದೆನ್ನುವ ಆತಂಕ ಕಾಣುತ್ತಿಲ್ಲ. ಸುಲಭವಾಗಿ ಹಣ ಮಾಡಬಹುದೆನ್ನುವ ತೆವಲಿಗೆ ಬಿದ್ದು ಈ ರೀತಿ ಬೆಟ್ಟಿಂಗ್ ಮಾಡುತ್ತಿರುವ ಯುವಸಮುದಾಯವನ್ನೇ ಗುರಿಯನ್ನಾಗಿಸಿಕೊಂಡಿರುವ ಬುಕ್ಕಿಗಳು ಅವರ ಜೀವನವನ್ನೇ ಹಾಳುಮಾಡುತ್ತಿದ್ದಾರೆ.

ಮಂಡ್ಯದಲ್ಲಿ ಬೆಟ್ಟಿಂಗ್ ರಾಜಾರೋಷ

ಮಂಡ್ಯದಂತಹ ಸಣ್ಣ ನಗರದಲ್ಲಿರುವ ಬುಕ್ಕಿಗಳು ಮುಂಬಯಿ, ದೆಹಲಿ ಮೊದಲಾದ ಕಡೆ ಲಿಂಕ್ ಬೆಳೆಸಿಕೊಂಡು ಇಲ್ಲಿಂದ ಅಲ್ಲಿಗೆ ಹಣ ಕಳುಹಿಸುತ್ತಾರೆ. ದೆಹಲಿಯ ಮಹೇಂದರ್ ಎಂಬ ಬುಕ್ಕಿಗೆ ಮಂಡ್ಯದ ಬಹುತೇಕ ಬುಕ್ಕಿಗಳು ಬೆಟ್ಟಿಂಗ್ ಹಣ ಕಳುಹಿಸುತ್ತಾರೆ. ಮಂಡ್ಯದ ಸುಭಾಷ್-ಮೇಂದಿ ಆಲಿಯಾಸ್ ಮಹೇಂದ್ರ ಜಂಟಿಯಾಗಿ ಬೆಟ್ಟಿಂಗ್ ಅಡ್ಡೆ ತೆರೆದಿದ್ದಾರೆ. ಗಾಂಧಿನಗರದ ಪಲ್ಲಿ-ನಿಂಗರಾಜು, ಶಂಕರ್, ಚಂದ್ರ, ಅಪೂರ್ವ ದರ್ಶಿನಿ ಮಹದೇವು, ಪಂಚಾಕ್ಷರಿ, ಮಾದೇಗೌಡನ ಕೊಪ್ಪಲು ಜಗ, ಮಾರ್ವಾಡಿ ಸುರೇಶ್, ಮಹೇಂದರ್, ಉಮಾಶಂಕರ್, ಸಂದೀಪ್, ಪ್ರಸನ್ನ, ರವಿ, ಕರಿ ಮಂಜ ಸೇರಿದಂತೆ ಹಲವರು ಬುಕ್ಕಿಗಳಿದ್ದಾರೆ. ಪ್ರತಿ ಬುಕ್ಕಿಯೂ ಒಂದು ಮ್ಯಾಚ್‌ಗೆ ಕನಿಷ್ಟವೆಂದರೂ 20-25 ಲಕ್ಷಕ್ಕಿಂತ ಅಧಿಕ ಮೊತ್ತವನ್ನು ಬೆಟ್ಟಿಂಗ್ ಕಟ್ಟಿಸುತ್ತಾರೆ. ಅಂದರೆ ಪ್ರತಿ ಮ್ಯಾಚ್‌ಗೆ 4 ಕೋಟಿಗಳಷ್ಟು ಹಣ ಬುಕ್ಕಿಗಳ ಕೈಸೇರುತ್ತಿದೆ.

ದಿನಕ್ಕೊಂದು ಅಡ್ಡೆ

ಮಂಡ್ಯದ ಬುಕ್ಕಿಗಳು ದಿನಕ್ಕೊಂದು ಅಡ್ಡೆಯಲ್ಲಿ ಕೂತು ಬೆಟ್ಟಿಂಗ್ ನಡೆಸುತ್ತಾರೆ. ಒಂದಷ್ಟು ಮೊಬೈಲ್, ಲ್ಯಾಪ್‌ಟಾಪ್ ಇದ್ದರೆ ಸಾಕು ಬೆಟ್ಟಿಂಗ್ ದಂಧೆಯನ್ನು ಎಲ್ಲಿ ಬೇಕಾದರೂ ನಡೆಸಬಹುದು. ಬೆಟ್ಟಿಂಗ್‌ನಲ್ಲೂ ತರಹೇವಾರಿ ಇದೆ. ಲಂಬಿ ಬಾರಿ ಇಡೀ ಪಂದ್ಯದಲ್ಲಿ ಯಾರು ಗೆಲ್ಲುತ್ತಾರೆ, ಯಾರು ಸೋಲುತ್ತಾರೆ ಎಂದು ಬೆಟ್ ಕಟ್ಟುವುದು. ಸೆಷನ್ ಎಂದರೆ 10, 15, 20, 35, 45 ಓವರ್‌ಗಳಲ್ಲಿ ಎಷ್ಟು ರನ್ ಹೊಡೆಯುತ್ತಾರೆ ಎಂದು ಬೆಟ್ ಕಟ್ಟುವುದು. ಇನ್ನು ಟಾಸ್ ಯಾರು ಗೆಲ್ಲುತ್ತಾರೆ, ಸೋಲುತ್ತಾರೆ, ಯಾರು ಶತಕ ಹೊಡೆಯುತ್ತಾರೆ ಎಂದೆಲ್ಲಾ ಪ್ರತಿ ಬಾಲಿಗೂ ಬೆಟ್ ನಡೆಯುತ್ತದೆ. ಪೊಲೀಸರಿಗೆ ಇವೆಲ್ಲಾ ಗೊತ್ತಿಲ್ಲವೆಂದಲ್ಲ, ಗೊತ್ತಿದ್ದರೂ ಅವರು ಯಾವ ಕಾರಣಕ್ಕೆ ಸುಮ್ಮನಿದ್ದಾರೆ ಎಂಬುದನ್ನು ಬಿಡಿಸಿ ಹೇಳಬೇಕಿಲ್ಲ.

■ ವರದಿಗಾರ

"ನನ್ನ ಪ್ರಾಮಾಣಿಕ ಕರ್ತವ್ಯನ ಗುರುತಿಸಬೇಕಾಗಿತ್ತು ಕಂಡ್ರಿ."

"ನೀವು ಪ್ರಾಮಾಣಿಕವಾಗಿಯೂ ಎಡೂರಪ್ಪನ ಸರಕಾರಕ್ಕೆ ದುಡುದ್ರಿ ಸಾರ್. ಅದಕ್ಕಾಗಿ ಎಡೂರಪ್ಪ ನಿಮ್ಮನ್ನ ಗೌರವಿಸಿ ಟಿಕೆಟ್ ಕೊಟ್ಟು ಕೇವಲ ಉಳಿಯೋವಷ್ಟು ಓಟನ್ನಾದ್ರು ಕೊಡುಸ್ತಿದ್ರು. ಯಲ್ಲಾನೂ ಬಿಟ್ಟು ಸಮಾಜವಾದಿ ಪಾರ್ಟಿ ಸೇರಿದ್ರಲ್ಲಾ, ಅದು ಇನ್ನೊಂದು ಜೆಡಿಎಸ್ ಸಾರ್."

"ಅದು ನನಗೆ ಸ್ವಲ್ಪ ತಡವಾಗಿ ಗೊತ್ತಾಯ್ತು ಇವರೆ."

"ಸಾರ್, ಯಾಕೊ ಪೊಲೀಸ್‌ನೋರು ರಾಜಕಾರಣದಲ್ಲಿ ಬಾಳಿಕೆ ಬರ್ತಾಯಿಲ್ಲ ಸಾರ್. ನೋಡಿ ಆ ಕೋದಂಡರಾಮಯ್ಯ ಯತ್ಲಾಗೋದ್ರೊ, ಏನೊ. ಸಾಂಗ್ಲಿಯಾನ ಸುಮ್ಮನಾದ್ರು, ಇನ್ನು ನಾನೂ ಅಪ್ಲಿಸಿಗುಟ್ಟಿದ್ದಿನಿ ಅಂತ ಗುಟರಾಕಿದ ಸುಭಾಷ್ ಭರಣಿ ಈಗ ಏನು ಮಾಡ್ತಾಯಿದ್ದಾರೊ ಗೊತ್ತಿಲ್ಲ, ಈಗ ಕೆಂಪಯ್ಯ, ಸಿದ್ದರಾಮಯ್ಯ ಸಭೆಗೆ ಯಾರ್ಯಾರನ್ನ ಕರೆಸಬೇಕು, ಬೆಯಿಕಲ್ ಹೇಗೆ ಅರೇಂಜ್ ಮಾಡಬೇಕು, ಯಾರನ್ನ ಟ್ರಾನ್ಸ್‌ಫರ್ ಮಾಡಬೇಕು ಅಂತ ತೆರೆಮರೆಲಿ ಕಾಲ ಹಾಕ್ತಾಯಿದಾರೆ. ಬಿ.ಸಿ.ಪಾಟೀಲ್ ಅಂತ ಒಬ್ಬ ಪೊಲೀಸ್ ಹೇದೊಯಿದ್ದ, ಆತ ನೇರ ರಾಜಕಾರಣಕ್ಕೆ ಹೋದ್ರೆ ಬೆಲೆ ಇರಲ್ಲ ಅಂತ, ಸಿನಿಮಾ ಹೀರೋ ಆಗಿ, ಇಲಾಖೆಲಿ ದುಡದ ಹಣದಲ್ಲಿ ಕಳಕೊಂಡು, ರಾಜಕಾರಣಕ್ಕೆ ಬಂದು, ಈಗ ಏನಾದ್ನೋ ಗೊತ್ತಿಲ್ಲ, ಇಂತ ಉದಾಹರಣೆಗಳೆಲ್ಲಾ ಇರುವಾಗ ನೀವು ಹೆಂಗೆ ಬಂದ್ರಿ?"

"ಹಾಗೆ ಇರಬಹುದಾದ ಸಾಮಾಜಿಕ ಕಳಕಳಿಯಿಂದ ಬಂದೆ ಕಂಡ್ರಿ."

"ಸಾಮಾಜಿಕ ಕಳಕಳಿ ಸಮಾಜವಾದಿ ಪಾರ್ಟಿಯಿಂದ ಈಡೇರುತ್ತ ಸಾರ್? ಚನ್ನಪಟ್ಟಣದ ಎಮ್ಮೆಲ್ಲೆ ಗೆದ್ದದ್ದೂ ಆತನದ್ದೇ ಆದ ಓಟನಿಂದ. ಆದ್ದರಿಂದ ಸಮಾಜವಾದಿ ಪಾರ್ಟಿಗೂ ಯೋಗೇಶ್ವರನಿಗೂ ಸಂಬಂಧವಿಲ್ಲ. ಉತ್ತರ ಪ್ರದೇಶದ ಒಂದು ಪಾರ್ಟಿನ ಇಲ್ಲಿ ನಾಟಿ ಹಾಕಿ ಬೆಳೆಸಕ್ಕಾಗಲ್ಲ, ಅಂತ ಎಡೂರಪ್ಪನವರೇ ಆರು ಸೀಟಿಗೆ ನಿಂತೋದ್ರು. ಹಿಂಗಿರುವಾಗ ನೀವು ಯಾವ ನೆಲೆಲಿ ರಾಜಕಾರಣ ಮಾಡ್ತಿರಿ."

"ಹೊಸ ಪಾರ್ಟಿ ಕಟ್ತೀವಿ. ರಚನಾತ್ಮಕವಾಗಿ ಕೆಲಸ ಮಾಡ್ತೀವಿ."

"ಜನ ನಿಮ್ಮನ್ನ ಪೊಲೀಸ್ ಅಂತರೆ ವರತು ರಾಜಕಾರಣಿ ಅನ್ನಲ್ಲ, ಚನ್ನಪಟ್ಟಣದ ಎಮ್ಮೆಲ್ಲೆ ನಿಮಗೆ ಹೆದರಿದ್ದೂ ಅದ್ಕೆ ಸಾರ್. ನೂರಾರು ಚೆಕ್ ಬೌನ್ಸ್ ಕೇಸಲಿ ಆತ ಪೊಲೀಸರಿಂದ ತಪ್ಪಿಸಿಕೊಂಡು ತಿರುಗಿ ತಿರುಗಿ ಒಂದು ಅವ್ಯಕ್ತ ಭಯ ಆತನಲ್ಲಿದೆ. ಅದ್ಕೆ ನಿಮ್ಮ ಕಂಡು ದೂರ ಹೋಯಿದ್ದ."

"ಇದು ನನಗೆ ಗೊತ್ತೇಯಿಲ್ಲವಲ್ರಿ."

"ನಿಮಗಿನ್ನು ಕುಮಾರು ವಿಷಯ ಗೊತ್ತಿಲ್ಲ ಸಾರ್. ಬರೀ ಚೀಬಲ್ಲ ರಾಜಕಾರಣ ಮಾಡಕ್ಕಾಗಲ್ಲ, ಈಗ ನೀವೇನು ಮಾಡಬಹುದು ಅಂದ್ರೆ ಹಣದ ರಾಶಿ ಹಾಯ್ಕೊಂಡಿರೊ ಎಡೂರಪ್ಪನ ಕೆಜೆಪಿ ಸೇರಿ. ಬಾಗಲಕೋಟೆಗೆ ನಿಂತು ಸಾಧ್ಯವಾದ್ರೆ ಗೆದ್ದು ಲೋಕಸಭೆಗೆ ಹೋಗಿ. ಅದು ಬಿಟ್ಟು ಪಾರ್ಟಿ ಕಟ್ತಿನಿ ಅಂದ್ರೆ ವಿ.ಆರ್.ಎಲ್. ಕಾಯೋಳಿನ ಕತೆಯಾಗತ್ತೆ."

"ವಿಆರ್‌ಎಲ್ ಕಾಯೋಳು ಅಂದ್ರೇನು?"

"ಒಬ್ಬ ಹಳೇ ಲಾರಿ ಮಾಲೀಕ ಇದ್ದ ಸಾರ್. ಅದಕ್ಕೆ ಪಬ್ಲಿಕ್ ಕ್ಯಾರಿಯರ್ ಅಂತ ಬೋರ್ಡಾಕಿದ. ಆ ಲಾರಿಯಿಂದ ಒಳ್ಳೆ ದುಡಿಮೆ ಆಯ್ತು, ಲೋನ್ ಮಾಡೀ ಮಾಡಿ ಕರ್ನಾಟಕದ ತುಂಬ ಲಾರಿ ಬಿಟ್ಟ, ಬಸ್‌ಗಳನ್ನು ಬಿಟ್ಟ. ಕರ್ನಾಟಕದ ನರನಾಡಿ ತರ ಇರೊ ರಸ್ತೆ ತುಂಬ ಬರೀ ವಿ.ಆರ್.ಎಲ್.ಗಳದೇ ಹಾರನ್ನು. ಹಣ ಹರದು ಬಂತು. ಒಂದು ಪತ್ರಿಕೆ ಮಾಡಿದ. ಅವ್ರುನವೇ ಲಾರಿಗಳು ಪತ್ರಿಕೆನ ಕರ್ನಾಟಕದ ಮೂಲೆಮೂಲೆಗೆ ತಲುಪಿಸಿದೊ. ಅಗ್ಗದ ಬೆಲೆಗೆ ಸಿಗೊ ಈ ಪೇಪರ್ ಹೊಡೆತ ತಡಿಯಕ್ಕಾಗದೆ ಉಳಿದ ಪತ್ರಿಕೆಯೋರು ಬೆಲೆ ಇಳಿಸಿದ್ರು. ಆದ್ರು ಲಾರಿ ಪೇಪರ್ ಕಟಿಂಗ್ ಶಾಪ್ರು, ಫುಟ್‌ಪಾತ್ ಅಂಗಡೀಲಿ ಬಿಲ್ಡಾಡತಿದ್ದೋ. ತಾನು ಕೈಹಾಕಿದ ಉದ್ದಿಮೆಗಳೆಲ್ಲಾ ಸಕ್ಸಸ್ ಆಗಿದ್ರಿಂದ ಲಾರಿ ಮಾಲೀಕ ಪಾರ್ಟಿ ಮಾಡಿ ಕಾಯಿಹೋಳು ಚಿಹ್ನೆ ಮೇಲೆ ಚುನಾವಣೆಗೂ ಹೋದ. ಆದ್ರೆ ಒಂದೇ ಒಂದು ಸೀಟು ಬರಲಿಲ್ಲ, ಅಂಥಾದ್ದರಲ್ಲಿ ನಿಮ್ಮ ಹತ್ರ ಲಾರಿನೂ ಇಲ್ಲ, ಪೇಪರೂ ಇಲ್ಲ, ಹಣಾನೂ ಇಲ್ಲ, ಹೋಗ್ಲಿ ಒಳ್ಳೆ ಹೆಸರೂ ಇಲ್ಲ... ಇಂತದ್ರಲ್ಲಿ ನೀವದ್ಯೆಂಥಾ ರಾಜಕಾರಣ ಮಾಡ್ತಿರಿ ಸಾರ್? ಮಾತಾಡಿ ಸಾರ್. ಹಲೋ? ಹಲೋ? ಹಲೋ?"

ಥೂತ್ತೇರಿ!!!

ಹರಿದಾಸಿ



ಒಂದು ಮಣಿಪುರಿ ಕತೆ

ಸೋಮುಸ್ ಅಮುನ ಸೋದರತ್ತೆ ಕಬೋಲ್ಲೈಳ ಕಾಯಿಲೆ ಗರಿಷ್ಠ ಮೀರಿದೆ ಎಂಬ ಸುದ್ದಿ ಬಹು ಶೀಘ್ರವೇ ಹಬ್ಬಿತು. ಆಮೇಲೆ ಹಳ್ಳಿಯ ಜನ ದಡಬಡಿಸಿ ಅಡಿಗೆಯ ತಯಾರಿಗೆ ಇಳಿದರು. ಕಬೊಲ್ಲೈ ಬಹಳ ದಿನಗಳಿಂದ ಹಾಸಿಗೆ ಹಿಡಿದಿದ್ದಳು. ಅವಳ ಹಾರೈಕೆಯಲ್ಲಿ ಊರಿನ ವೈದ್ಯ ಟೋಲೆನ್ ಮೈಬ ಇದ್ದ. ಅವಳ ನಾಡಿಮಿಡಿತ ಹಿಡಿದಿದ್ದ ಆತ ಕಳೆದ ಒಂದು ವಾರದಿಂದ ಅವಳ ನಾಡಿಮಿಡಿತ ಅಂತಿಮವಾಗಿ ಸ್ತಬ್ಧಗೊಳ್ಳುವುದನ್ನೇ ನಿರೀಕ್ಷಿಸುತ್ತ ಚಾತಕಪಕ್ಷಿಯಂತೆ ಕಾದಿದ್ದ.

ಟೋಲೆನ್ ಮೈಬ ಸಮರ್ಥನೀಯ ವೈದ್ಯ ಅಲ್ಲದೆ ತನ್ನ ಹಾರೈಕೆಯಲ್ಲಿ ಈವರೆಗೆ ತಾನು ಒಂದು ನೂರು ಮಂದಿಗಿಂತ ಹೆಚ್ಚು ರೋಗಿಗಳ ಹೋಗುವ ಪ್ರಾಣವನ್ನು ಉಳಿಸಿದ್ದೆನೆಂದು ಹೇಳುವುದನ್ನು ಎಂದೂ ಮರೆತವನಲ್ಲ.

ಅವನು ಸ್ವಯಂ ವೈದ್ಯ ವೃತ್ತಿಗಿಳಿದು ಇನ್ನೂ ಮೂರು ವರ್ಷಗಳೂ ಕಳೆದಿರಲಿಲ್ಲ, ಅವನು ತಾನು ಆರೈಕೆ ಮಾಡಿದ ಹಲವು ರೋಗಿಗಳನ್ನು ನೋಡಿ ಇವರ ಹಣೆಬರಹ ಹೆಚ್ಚೆಂದರೆ ಇನ್ನೂ ಎರಡು ಮೂರು ದಿನಗಳೆಂದು ಹೇಳಿದವರಲ್ಲಿ ಅನೇಕರು ಇನ್ನೂ ಗಟ್ಟಿಮುಟ್ಟಾಗಿ ಬದುಕಿದ್ದರು ಹಾಗೂ ತಮ್ಮ ದೈನಂದಿನ ಕೆಲಸ ಕಾರ್ಯಗಳಲ್ಲಿ ಮುಳುಗಿದ್ದರು. ಸರಿಯಾಗಿ ನೋಡಿದರೆ, ಹಲವು ರೋಗಿಗಳ ಬಗೆಗೆ ಇವನು "ಭಯ ಪಡಬೇಡಿ, ಯಮನ ಕೈಲೂ ನಿಮ್ಮ ಪ್ರಾಣ ಹೋಗದು' ಎಂದವರು ಹರಹರ ಎಂದಿದ್ದರು. ಆ ಹಳ್ಳಿಯಲ್ಲಿ ಬೇರೆ ಯಾರೂ ವೈದ್ಯರು ಗತಿ ಇಲ್ಲದ ಕಾರಣ 'ಹಾಳು ಊರಿಗೆ ಉಳಿದೋನೇ ಗೌಡ' ಎಂಬಂತೆ ಅವನನ್ನೇ ಆಶ್ರಯಿಸಬೇಕಿತ್ತು, ತುರ್ತು ಸ್ಥಿತಿಯ ಸಮಯದಲ್ಲಿ, ಟೋಲೈನ್ ಮೈಬ ಕಾಯಿಲೆಗಳನ್ನು ಬಹು ಗಂಭೀರವಾಗೇ ಪರಿಗಣಿಸುತ್ತಿದ್ದ. ರೋಗಿ ಏನಾದರೂ ಅತಿ ಗಂಭೀರ ಸ್ಥಿತಿ ತಲುಪಿದ್ದರೆ ಆತ ರೋಗಿ ಸಹಿತ ಹಗಲುರಾತ್ರಿ ಎಡೆಬಿಡದೇ ಇರುತ್ತಿದ್ದ. ಕಬೋಲ್ಲೈಳ ಪ್ರಸಂಗದಲ್ಲೂ ಇದೇ ಆಗಿದ್ದು. ಅವನು ಒಂದರಕ್ಷಣವೂ ಕಣ್‌ರೆಪ್ಪೆಯನ್ನು ಮುಚ್ಚದವನಲ್ಲ.

ಅಂದು ಗುರುವಾರ, ಪೂರ್ಣ ಪೌರ್ಣಿಮಿಯ ಮಾರನೇ ದಿನವದು. ಕಬೋಲ್ಲೈಳ ದೇಹಸ್ಥಿತಿ ಮುಂಜಾನೆಯಿಂದಲೆ ಹದಗೆಡುತ್ತಾ ಬಂದಿತ್ತು, ಸನ್ನಿರೋಗಕ್ಕೆ ತುತ್ತಾಗಿದ್ದಳು. ಮೇಲಿಂದ ಮೇಲೆ ಪ್ರಜ್ಞೆ ಕಳೆದುಕೊಳ್ಳುತ್ತಿದ್ದಳು. ಅರವತ್ತು ವಸಂತಗಳನ್ನು ಕಂಡಿದ್ದ ಬಹುದಿನಗಳಿಂದ ಏನನ್ನು ತಿಂದಿರದ ಆಕೆ ಹಾಸಿಗೆ ಮೇಲೆ ಒಣಗಿದ ಕಾಷ್ಠದಂತೆ ಬಿದ್ದಿದ್ದಳು. ಅವಳ ಶರೀರವನ್ನು ಶುದ್ಧಿ ಮಾಡುವ ಹಾಗೂ ಅವಳ ಪಾಪಗಳನ್ನು ಸ್ವಚ್ಛ ಮಾಡುವ ಕ್ರಿಯೆ ಕುರಿತಂತೆ ಜನರು ಆಡುವ ಮಾತುಗಳ ಅರಿವು ಸಹ ಆಕೆಗೆ ಒಂದಿಷ್ಟು ಇರಲಿಲ್ಲ.

ಅವಳ ಹಿಡಿತ ತಪ್ಪಿದ ನಾಡಮಿಡಿತವನ್ನು ಟೋಲೆನ್ ಮೈಬ ಪತ್ತೆಹಚ್ಚಲು ಮಾಡಿದ ಯತ್ನ ಕೊನೆಗೂ ಅವನ ಕೈಬೆರಳುಗಳಿಗೆ ಸಿಕ್ಕಿತು. ನಿಸ್ಸಂದೇಹವಾಗಿ, ಟೋಲೆನ್ ಮೈಬ ರೋಗಿಗಳ ಬಿದ್ದು ಹೋಗುವ ದೈಹಿಕ ಪ್ರಕೃತಿಯೆಡೆಗೆ ಅವನು ಹೆಚ್ಚಿನ ಆಸಕ್ತಿ ಹರಿಸುತ್ತಿದ್ದನೇ ಹೊರತು ಅವರ ನಾಡಿಮಿಡಿತದ ಏರಿಳಿತದ ಬಗೆಗಲ್ಲ, ಅವನ ಮೂರು ವರ್ಷಗಳ ಅನುಭವ ಅವನಿಗೆ ರೋಗಿಯ ದೈಹಿಕ ಪ್ರಕೃತಿಯ ಬಗೆಗೆ ಹೆಚ್ಚು ಅನುಭವವನ್ನು ಗಳಿಸಿಕೊಟ್ಟಿತ್ತೇ ಹೊರತು ಚಕ್ಕರ್ ಹೊಡೆವ ನಾಡಿಮಿಡಿತಕ್ಕಲ್ಲ, ಕಬೋಲ್ಲೈಳ ದೇಹಸ್ಥಿತಿ ಆಕೆ ಹೆಚ್ಚೆಂದರೆ ಒಂದೆರಡು ದಿನ ಉಸಿರಾಡುವಳೆಂದು ಅವನಿಗೆ ಸ್ಪಷ್ಟ ಸೂಚನೆಯನ್ನು ಕೊಟ್ಟಿತು. ಅವಳ ನಾಡಿಮಿಡಿತ ತೀರ ದುರ್ಬಲ ಗೊಂಡಿದೆ ಎಂದು ಅವನಿಗೆ ಭಾಸವಾಯಿತು. ತದನಂತರ ದಿಗಿಲುಟ್ಟಿಸುವ ದನಿಯಲ್ಲಿ "ಸರಿ, ಅಮು, ಇನ್ನೂ ಹೆಚ್ಚು ತಡಮಾಡಬೇಡಿ. ದೇಹ ಸ್ವಚ್ಛಗೊಳಿಸುವ ಕೆಲಸ ಸಾಗಲಿ, ಅವಳ ಆತ್ಮ ಬೇರೊಂದು ಲೋಕಕ್ಕೆ ತೆರಳಲಿದೆ. ಇಹಲೋಕದ ಈ ದಿನವೇ ಅವಳ ಕೊನೆ ದಿನ. ಅನುಮಾನವೇ ಇಲ್ಲ."

ಟೋಲೆನ್ ಮೈಬನ ಮಾತುಗಳಿಂದ ಹಳ್ಳಿಯಲ್ಲಿ ಚಟುವಟಿಕೆ ತೀವ್ರಗೊಂಡಿತು. ಪೂಜಾರಿ ಅಗ್ಯ ಟೊಮಲ್‌ಗೆ ತನ್ನ ಸೋದರತ್ತೆಯ ಸ್ಥಿತಿಯ ಸುದ್ದಿಯನ್ನು ಅಮು ಶೀಘ್ರವೇ ತಿಳಿಸಿದ. ಹಳ್ಳಿಯ ಪ್ರಮುಖ ಹಾಡುಗಾರ ಓಜಾ ಬಿಹಾರಿ, ಓಜಾ ನ್ಯೂಗ್ಬನ್, ಮೃದಂಗದವನು, ಚಿಕ್ಕಪ್ಪ ಮೋಹೆ, ಹರಿಕಥೆ ದಾಸರು, ಶ್ಯಾಮ ತಾತ, ದೊಡ್ಡಪ್ಪ ಮೊಂಗಾಲ್, ಮತ್ತೊಬ್ಬ ತಾತ ಶಕ್ತಿ ಹಾಗೂ ಇನ್ನಿತರೆ ಊರಿನ ಹಿರಿಯರು ಬಂದು ನೆರೆದರು.

ಹಳ್ಳಿಗರು ಒಡನೆಯೇ ಒಟ್ಟುಗೂಡಿದರು. ಒಬ್ಬೊಬ್ಬರು, ಇಬ್ಬಿಬ್ಬರು ಜೊತೆಗೂಡಿ ಬಂದರು ಅಮು ಮನೆಗೆ. ಊರ ಪಟೇಲ್ ಶಮು; ಪೂಜಾರಿ ಅೃಗ್ಯನ ಕುರಿತು, "ಅೃಗ್ಯ, ಬೇಗ ಆಗಬೇಕು ಕರ್ಮಗಳೆಲ್ಲ, ಕಬೋಲ್ಲೈಳ ದೇಹ ಶುಚಿಗೊಳಿಸುವ ವ್ಯವಸ್ಥೆ ಮಾಡಿ. ದೇವಭೂಮಿಗೆ ಆಕೆಯ ಪಯಣ ಸಾಗಲಿದೆ. ಈ ಪ್ರಪಂಚ ಪಾಪದ ಕೊಡ. ಇಲ್ಲಿಯ ಪಾಪಗಳಿಂದ ಅವಳ ದೇಹವನ್ನು ಸ್ವಚ್ಛಗೊಳಿಸಬೇಕು. ಈ ಭೂಮಿ ಮೇಲೆ ಅವಳ ವಂಶಪಾರಂಪರ್ಯ ಹರಿದುಬಂದ ಪಾಪಗಳು ಅವು. ಪಾಪಗಳಿಂದ ಅವಳನ್ನು ಮುಕ್ತಗೊಳಿಸಬೇಕು. ಸಾಧ್ಯವಾದ ಮಟ್ಟಿಗೆ ತನ್ಮೂಲಕ ಅವಳ ಯಾತ್ರೆ ಪರಲೋಕಕ್ಕೆ ಸುಗಮವೆ ನಿಸಲಿದೆ" ಎಂದ ಶಮುನ ಈ ಪ್ರಸ್ತಾವ ವನ್ನು ಇತರರು ಒಪ್ಪಿದರು. ಪೂಜಾರಿ ಕಬೋಲ್ಲೈಳನ್ನು ಪಾಪಗಳಿಂದ ಮುಕ್ತಗೊಳಿಸಲು ಸಂಸ್ಕಾರಗಳನ್ನು ಪ್ರಾರಂಭಿಸಿದ.

ಇವೆಲ್ಲ ಸಹಜವಾಗಿ, ಕಬೋಲ್ಲೈಳ ಮೇಲೆ ಯಾವ ಪರಿಣಾಮವನ್ನು ಬೀರಲಿಲ್ಲ, ಹಾಸಿಗೆ ಮೇಲೆ ಮೈ ಚೆಲ್ಲಿದ್ದಳು ಅಲಿಸುತ್ತ ಸತ್ತಂತಿದ್ದಳು. ಅಸಂತುಷ್ಟೆ. ಗಂಡ ಮಕ್ಕಳೊಡನೆ ಕೂಡಿದ ಸುಖ ಸಂಸಾರದ ಕನಸು ಅವಳಿಂದ ದೂರವೆ ಉಳಿದಿತ್ತು, ಜೀವನದ ವಸಂತಕಾಲದಲ್ಲೇ ವಿಧವೆಯಾಗಿದ್ದಳು ಬಹುಬೇಗನೆ. ತವರುಮನೆಗೆ ಹಿಂದಿರುಗಿದ್ದಳು. ಅವಳ ದುಃಖ ಕುರಿತಂತೆ ಯಾರೂ ಯೋಚಿಸಲಿಲ್ಲ, ಬದಲಿಗೆ, ಹಳ್ಳಿಗರ ದಳ್ಳುರಿಗೆ ತುತ್ತಾದಳು ಗಂಡನನ್ನು ನುಂಗಿ ಹಾಕಿಕೊಂಡವಳೆಂದು. ಆಕೆ ಪಾಪ! ನಿರುಪದ್ರವಿ ಆದರೂ ಪ್ರತಿಯೊಬ್ಬರ ಅಸಹನೆ, ಸಿಟ್ಟು, ಕೋಪ ಸಹಿಸಿಕೊಳ್ಳಬೇಕಾಯಿತು.

ಅಮುನ ಗದ್ದೆಯಲ್ಲಿ ಆಕೆಗೆ ಕಾನೂನುರೀತ್ಯಾ ಪಾಲಿನ ಹಕ್ಕಿತ್ತು, ಆದರೆ ಎಂದೂ ಆ ಬಗ್ಗೆ ಚಕಾರವೆತ್ತಲಿಲ್ಲ, ಜೊತೆಗೆ ಆ ಹಕ್ಕಿನ ಅರಿವೂ ಇರಲಿಲ್ಲ ಅನ್ನಿ! ಹೀಗಾಗಿ ಆಕೆ ಅಮುನ ಮನೆಯಲ್ಲಿ ನತದೃಷ್ಟ ಗುಲಾಮಳಂತೆ ತನ್ನ ಜೀವನಯಾತ್ರೆ ಸಾಗಿಸಿದ್ದಳು. ಸೋದರತ್ತೆ ಮೇಲೆ ಅಮುಗೆ ಅಷ್ಟಕ್ಕಷ್ಟೆ. ಆದಕಾರಣ ಕಬೋಲ್ಲೈಳ ಸನ್ನಿಹಿತ ಸಾವು ಅಮುನ ಹೃದಯದಲ್ಲಿ ಯಾವುದೇ ದುಃಖವನ್ನುಂಟುಮಾಡಲಿಲ್ಲ.

ಹಿರಿಯರು ಕುಳಿತು ಕಬೋಲ್ಲೈಳನ್ನು ವೈಷ್ಣವ ಯಾಚಕಿಯಾಗಿಸುವ ತೀರ್ಮಾನ ಕೈಗೊಂಡರು. ಕಾರಣ ಆಕೆಗೆ ಮಕ್ಕಳಿರಲಿಲ್ಲ, ಈ ಉಪಕ್ರಮದಿಂದ ಈ ಲೋಕದ ಪಾಪಗಳಿಂದ ಆಕೆ ಮುಕ್ತಳಾಗುತ್ತಾಳೆ. ಆಕೆಗೆ ಮುಕ್ತಿ ಲಭಿಸುತ್ತದೆ. ಹುಟ್ಟು-ಸಾವುಗಳೆಂಬ ಅಂತ್ಯವಿಲ್ಲದ ಜೀವನ ಚಕ್ರದಿಂದ ಮುಕ್ತಳಾಗುತ್ತಳೆ. ಆದ್ದರಿಂದ ತೋಮಲ್ ಅೃಗ್ಯ ತೋಮಲ್ ಅವಳ ಕುರಿತು ಉಪಕ್ರಮಗಳಿಗೆ ಚಾಲನೆ ಕೊಟ್ಟ. ಪಾಪ! ಆಕೆಗೆ ವೈಷ್ಣವ ಮತಧರ್ಮ ಶಾಸ್ತ್ರದ ಬಗ್ಗೆ ಏನೂ ತಿಳಿಯದು. ಅಂತೆಯೆ ಮುಕ್ತಿಪಥದ ಬಗೆಗೂ, ಆಕೆ ಈಗ ಪ್ರಜ್ಞಾಹೀನಳಾಗಿದ್ದಾಳೆ. ವೈಷ್ಣವ ತತ್ವದಂತೆ, ಆಕೆಗೆ ಹೊಸ ಹೆಸರನ್ನು ನಾಮಕರಣ ಮಾಡಿದರು. ಅವಳೀಗ 'ಹರಿದಾಸಿ'.

ತದನಂತರ ಒಂದು ಆಶ್ಚರ್ಯಕರ ಪ್ರಸಂಗ ನಡೆಯಿತು. ಹರಿದಾಸಿ ವೈಷ್ಣವಿ ಉಪಕ್ರಮಗಳೆಲ್ಲ ಮುಗಿದ ಮೇಲೆ ಕಣ್ಣು ತೆರೆದಳು. ಸುತ್ತಮುತ್ತ ನೆರೆದಿದ್ದ ಜನರನ್ನು ಗುರುತಿಸಿದಳು, ಮಾತನಾಡಲು ಪ್ರಾರಂಭಿಸಿದಳು. ಅಂತಿಮವಾಗಿ, ಆಕೆ "ಹಸಿವು, ಅನ್ನ ಕೊಡಿ, ಒಣ ಮೀನು ಸುಟ್ಟು ಕೊಡಿ" ಎಂದಳು. ಈವರೆಗೂ ಮೈಬ ಟೋಲೆನ್‌ನ ನಾಡಿಮಿಡಿತದ ಕ್ಷಮತೆಯನ್ನು ಯಾರೂ ಸಂದೇಹಿಸಿರಲಿಲ್ಲ, ಆದರೆ ರೋಗಿಯ ಈ ಬದಲಾದ ಪರಿಸ್ಥಿತಿಯು ಅವನ ಅವಲಂಬಿತರ ಕಾರಣ ಹಲವಾರು ಹಿಂದಿರುಗಿಸಲಾಗದಂತಹ ಬೆಳವಣಿಗೆಗಳಾಗಿರುವ ಸೂಚನೆ ಆಗಿತ್ತು, ಆಮೇಲೆ ಹರಿದಾಸಿಯನ್ನು ಕಬೋಲ್ಲೈಳನ್ನಾಗಿ ಹಿಂಪರಿವರ್ತನೆ ಮಾಡುವ ಕಾರ್ಯ ಸಾಧ್ಯವಾಗಲಿಲ್ಲ, ಅಲ್ಲೀಗ ಹಿರಿಯರು ಒಬ್ಬೊಬ್ಬರೆ ಕರಗಿದರು. ಅೃಗ್ಯಟೊಮಲ್ ದಕ್ಷಿಣೆ ಕಾಸು ಕೈಗೆ ಬಂದೊಡನೆ ಕಾಲಿಗೆ ಬುದ್ಧಿ ಹೇಳಿದ. ವೈದ್ಯ ಟೋಲೆನ್ ಮೈಬನ ಕಣ್ಮರೆಯನ್ನು ಯಾರೂ ಗಮನಿಸಲಿಲ್ಲ, ಅಲ್ಲಿ ಉಳಿದವರು ಮನೆಮಂದಿ ಮಾತ್ರ!


ಅಮುನ ಸೋದರತ್ತೆ ಜೀವಂತಳಿದ್ದಾರೆ- ಈಗ ಹರಿದಾಸಿ ಎಂಬ ಹೊಸ ಹೆಸರೊತ್ತು, ಆಕೆ ವೈಷ್ಣವಿಯಾದ್ದರಿಂದ ಅವಳ ನೆಲೆಗೂಡು ಈಗ ಮನೆಯ ವರಾಂಡದ ಒಂದು ಮೂಲೆ. ಈಗ ಅವಳು ಅಲ್ಲಿ ತನ್ನ ಅಂತಿಮ ಮುಕ್ತಿಯ ನಿರೀಕ್ಷೆಯಲ್ಲಿದ್ದಾಳೆ. ಆಕೆಯ ಮನೆಯ ಪ್ರವೇಶ ನಿಷಿದ್ಧವಾಯಿತು! ಅಮುನ ಸಂಸಾರಕ್ಕೂ ಈಗ ಸಂಕಟ ಶುರುವಾಯಿತು. ಆಕೆಗೆ ಪ್ರತ್ಯೇಕವಾಗಿ ಶಾಖಾಹಾರ ಬೇಯಿಸಬೇಕಿತ್ತು, ಈ ವ್ಯವಸ್ಥೆ ಹರಿದಾಸಿ ವೈಷ್ಣವಿಗೆ ಇರುಸುಮುರುಸು ತಂದಿತು. ಆಕೆಯ ಆಯ್ಕೆಯದಲ್ಲ ಹೊಸ ಪಂಥ: ವೈಷ್ಣವಿ ಹರಿದಾಸಿ. ಮೀನಿನ ಸಾರಿಗೆ, ಒಣ ಮೀನಿಗೆ ಅವಳ ಮನ ತಹತಹಿಸುತ್ತಿತ್ತು, ಆದರೆ ಮತ ಅಡ್ಡ ಬಂದಿತ್ತು, ನಿತ್ಯ ಮೀನು ಬೇಕೆಂದು ಹರಿದಾಸಿ ಒತ್ತಾಯ ಮಾಡುತ್ತಿದ್ದಳು. ಅಮು ಹಾಗೂ ಇತರರು "ವೈಷ್ಣವಿ ಮೀನೂ ತಿನ್ನುತ್ತಾರಾ? ಅದು ಪಾಪ!" ಎನ್ನುವರು.

ಆದರೆ ಅದು ಯಾರ ಪಾಪ?

- (ಮೂಲ: ಮಣಿಪುರಿ) ಐಬೋಮ್ಚ

- (ಕನ್ನಡಕ್ಕೆ) ಸೊಂದಲಗೆರೆ ಲಕ್ಷ್ಮೀಪತಿ

(Indian Literature ಆಯ್ದ ಸಣ್ಣಕಥೆ)



ಹೊಲಗಳಲ್ಲಿ ನಿಲ್ಲಿಸುವ ಬೆದರುಬೊಂಬೆಗಳು ಪುರುಷಾಕೃತಿಯೇ ಆಗಿರುತ್ತವಲ್ಲ ಏಕೆ?

- ಸಾಯಿಬಾಬಾ ಇಷ್ಟು ಹೊತ್ತಿಗೆ ಪುನರ್‌ಜನ್ಮ ಎತ್ತಬೇಕಿತ್ತಲ್ಲವಾ, ಎಲ್ಲಿರಬಹುದು?

  - ನಾಗ, ಮಂಡ್ಯ

- ಬಹುಶಃ ನರಕದಲ್ಲಿ.
- ಪ್ರೇಮ ಪ್ರಕರಣಗಳ ಬಗ್ಗೆ ಜನ ಯಾವಾಗಲೂ ಕುತೂಹಲ ತಾಳಲು ಕಾರಣವೇನು?

  - ಸಂಜಯ, ದಾವಣಗೆರೆ

- ಅದೊಂಥರ ರೋಮಾಂಚನದ ರಿನೀವಲ್ ತರ.
- ಕೃಷಿ ಉತ್ಪನ್ನಗಳ ಮಾರಾಟಕ್ಕೆ ಮಾಡೆಲ್‌ಗಳನ್ನು ಬಳಸಲ್ಲ ಯಾಕೆ ಸಾರ್?

  - ಚಂದ್ರಕಾಂತ್, ಹಾವೇರಿ

- ನಟ ರವಿಚಂದ್ರನ್ ಈಗಾಗಲೇ ಅದರ ಅರ್ಥ ಕೆಡಿಸಿರೋದು ಸಾಕಾಗಿಲ್ಲವಾ?
- ಅಡ್ವಾಣಿ ಕೊನೆಗೂ ಮೋದಿಯ ನಾಯಕತ್ವ ಒಪ್ಪಿಕೊಂಡಿದ್ದು ಹೇಗೆ?

  - ಫ್ರಾನ್ಸಿಸ್, ಉಜಿರೆ

- ಪ್ರಧಾನಿಯಾಗದಿದ್ದರೂ ರಾಷ್ಟ್ರಪತಿಯಾಗುವ ತಿರುಕನ ಕನಸಿಗಾಗಿ.
- ಹೆಣ್ಣಿನ ಸೌಂದರ್ಯ ಹೊಗಳುವಂತೆ ಗಂಡಿನ ಸೌಂದರ್ಯವನ್ನು ಯಾರೂ ಹೊಗಳಲ್ಲ ಯಾಕೆ?

  - ಚಂದ್ರನ್, ಹಾಸನ

- ಹಾಗಂತ ಕೊರಗುವ ನಮ್ಮ ಲಿಸ್ಟಿಗೆ ನೀನೂ ಸೇರಿಕೊಂಡೆಯಾ?
- ಸಚಿನ್ ಕ್ರಿಕೆಟ್ ಬಿಟ್ಟ ಮೇಲೆ ಏನು ಮಾಡುತ್ತಾನೊ?

  - ದೇವಪ್ರಸಾದ್, ಬೀದರ

- ಆ ಅವಿವೇಕಿ ಕುಕ್ಕೆ ಸುಬ್ರಮಣ್ಯದಲ್ಲಿ 'ಸರ್ಪದೋಷ' ಪುರೋಹಿತನಾಗಲು ಲಾಯಕ್ಕಾಗಿದ್ದಾನೆ.
- ರಮ್ಯಾ ಒಳ್ಳೆಯ ರಾಜಕಾರಣಿ ಆಗುವಂತೆ ಕಾಣುತ್ತಿದೆ!

  - ರಾಜೂಗೌಡ, ಮದ್ದೂರು

- ಆಕೆ ಬದುಕಲು ಕಲಿತಿರುವಾಕೆ.
- ಈ ಸಾರಿಯ ಕನ್ನಡ ರಾಜ್ಯೋತ್ಸವದ ವಿಶೇಷ ಏನಿರಬಹುದು?

  - ಜಯಣ್ಣ, ರಾಜಾಜಿನಗರ


- ವಾ. ಗೌಡ 'ಕನ್ನಡಕ್ಕಾಗಿ ಕುಸ್ತಿ ಬೆಳೆಸಿಕೊ ಇನ್ನಷ್ಟು ಆಸ್ತಿ' ಎಂಬ ಯೋಜನೆ ಶುರು ಮಾಡಲಿದ್ದಾನೆ.
- ಬೆಳಗಿನ ಹೊತ್ತು ಟಿವಿ ಜ್ಯೋತಿಷಿಗಳ ಮುಖ ನೋಡಿದಾಗ ರೇಗುತ್ತದಲ್ಲ?

  - ಚೇತನ್, ಅರಸೀಕೆರೆ

- ಖುದ್ದಾಗಿ ಹೋಗಿ ನೋಡಿದವರು ಡಕಾಯಿತರನ್ನು ಕಂಡುಬಂದಂತೆ ಹೆದರಿ ನಡುಗುತ್ತಿದ್ದಾರೆ.
- ಹೊಲಗಳಲ್ಲಿ ನಿಲ್ಲಿಸುವ ಬೆದರುಬೊಂಬೆಗಳ ಪುರುಷಾಕೃತಿಯೇ ಆಗಿರುತ್ತವಲ್ಲ ಏಕೆ?

  - ಸಿದ್ದೇಗೌಡ, ಹಾಸನ

- ಹೆಣ್ಣು ಬೆದರು ಬೊಂಬೆ ನಿಲ್ಲಿಸಿದರೆ, ದೂರ ಓಡಬೇಕಾದವರು ಹತ್ತಿರ ಬರುವ ಅಪಾಯ ಇರುವುದರಿಂದ.



- ಯಡಿಯೂರಪ್ಪ ಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನು ಏಕವಚನದಲ್ಲಿ ಬೈದಿದ್ದಾರೆ?

  - ರವಿಕುಮಾರ್, ಶಿವಮೊಗ್ಗ

- ಮೇಲ್ಜಾತಿ ದುರಹಂಕಾರ ವ್ಯಕ್ತವಾಗುವ ಬಗೆ ಅದು.
- ಬಿ.ಎಲ್. ಶಂಕರ್ 'ಧರ್ಮಸ್ಥಳದ ನಾಯಕರ ಬಗ್ಗೆ ಕೆಟ್ಟ ಮಾತಾಡಬೇಡಿ' ಅಂದಿದ್ದಾರೆ.... ಏನಿದರ ಮರ್ಮ!

  - ಪರಿಮಳ, ಹಾಸನ

- ತಿಂದಿರುವ ಭಿಕ್ಷಾನ್ನದ ಋಣ ಮತ್ತು ಮುಂಬರಲಿರುವ ಎಲೆಕ್ಷನ್ ಕಣ.
- ಜಗದ್ಗುರುಗಳು ಯಾವಾಗಲೂ ನಿಧಾನವಾಗಿ ಮಾತಾಡುವುದೇಕೆ?

  - ರೇಣುಕಾ, ಯಳಂದೂರು

- ಅವರಾಡುವ ಮಾತುಗಳು ಮೊದಲು ಅವರಿಗೇ ಅರ್ಥವಾಗಬೇಕಲ್ಲ.
- ಕನ್ನಡ ಮೇಷ್ಟ್ರುಗಳಿಗೆ ಸಂಸ್ಕೃತ ಕಲಿಸಬೇಕು ಅಂತ ಸಾಹಿತಿ ಎಸ್.ಎಲ್. ಭೈರಪ್ಪ ಕರೆಕೊಟ್ಟದ್ದು ನೋಡಿದಿರಾ?

  - ಸೌಮ್ಯ, ಮೈಸೂರು

- ಆ ಮನೋರೋಗಿ ಮೊದಲು ಮಾನವಂತರ ಕನ್ನಡ ಕಲಿಯಲಿ ಅಲ್ಲವಾ
- ಪತ್ನಿಪೀಡಿತರ ಕತೆ ಇಷ್ಟು ಬೇಗ ಮುಗಿದೆ ಹೋಯಿತಾ?

  - ರಂಜನ್, ಬೆಂಗಳೂರು

- ಅದು ಪುರುಷ ಪೀಡಿತರ ವ್ಯಥೆಗಳಷ್ಟು ಇರಲಿಕ್ಕಿಲ್ಲ...
- ಲೈಬ್ರರೀಲಿ ಪುಸ್ತಕ ಓದೋವಾಗ ನಿದ್ದೆ ಬರುತ್ತೆ but ಕಣ್ಣಾಮುಚ್ಚಾಲೆ ಓದುವಾಗ ನಿದ್ದೆ ಹಾರಿ ಹೋಗುತ್ತೆ ಯಾಕೆ ದ್ಯಾವ್ರೆ?


  - ರಾಜಾನಾಯಕ, ಬೆಂಗಳೂರು ವಿ.ವಿ.

- ಇದು 'ಕಣ್ಣು ಮುಚ್ಚಾಲೆ' ಅಲ್ಲ ಅದಕ್ಕೆ....

(ಸೂಚನೆ: ಕಣ್ಣಾಮುಚ್ಚಾಲೆಗೆ ಪತ್ರ ಕಳುಹಿಸುವವರು ಅಂಚೆ ಮೂಲಕ, ಮೊಬೈಲ್ ನಂ. 9980331427ಗೆ SMS ಮತ್ತು kannamucchale@gmail.com ಗೆ ಇ-ಮೇಲ್ ಮೂಲಕವೂ ಕಳುಹಿಸಬಹುದು. ನಿಮ್ಮ ಹೆಸರು, ಊರು ತಪ್ಪದೇ ಬರೆಯಿರಿ)

ಸರ್ದಾರ್ ಪಟೇಲ್ ಪ್ರತಿಮೆ ಪ್ರಚಾರ- ಸಾವಿರಾರು ರೈತರು ಅತಂತ್ರ

ಮೋದಿಯ ಮಾತುಗಳನ್ನು ನಂಬುವುದಾದರೆ ಗುಜರಾತ್ ರಾಜ್ಯದಷ್ಟು ಸುಖೀ ರಾಜ್ಯ ಇನ್ನೊಂದಿಲ್ಲ. ಮೋದಿ ಸರ್ಕಾರ ಸಾಧಿಸಿರುವ 'ಅಭಿವೃದ್ಧಿ'ಯಿಂದಾಗಿ ರೈತರೂ ಸೇರಿದಂತೆ ಅಲ್ಲಿನ ಜನರೆಲ್ಲರೂ ಸುಖವಾಗಿದ್ದಾರಂತೆ. ಆದರೆ ಹಳ್ಳಿಗಳಿಗೆ ಹೋದರೆ ರೈತರ ನಿಜಸ್ಥಿತಿಯೇನು, ಅವರ ಬವಣೆಗಳೇನು, ಅಲ್ಲಿ ಏನಾಗುತ್ತಿದೆ ಎಂಬುದೆಲ್ಲ ತಿಳಿಯುತ್ತದೆ. ಉದಾಹರಣೆಗೆ ನರ್ಮದಾ ಅಣೆಕಟ್ಟಿನ ಸುತ್ತಮುತ್ತಲ ಭೂಮಿಯ ವಿಚಾರವನ್ನೆ ನೋಡಿ. ಇದ್ದಕ್ಕಿದ್ದಂತೆ ಸರ್ಕಾರ ಅಣೆಕಟ್ಟಿಗೆ ಸಮೀಪದ, 70ಕ್ಕೂ ಅಧಿಕ ಹಳ್ಳಿಗಳನ್ನೊಳಗೊಂಡ ಪ್ರದೇಶದಲ್ಲಿ ಸರ್ದಾರ್ ಪಟೇಲರ 182 ಮೀಟರ್ ಎತ್ತರದ ವಿಗ್ರಹವನ್ನು ಸ್ಥಾಪಿಸಿ ಅದನ್ನೊಂದು ಪ್ರವಾಸಿತಾಣವಾಗಿ ಪರಿವರ್ತಿಸುವ ನಿರ್ಣಯವೊಂದನ್ನು ಕೈಗೊಂಡಿತು.




ಇದಕ್ಕೋಸ್ಕರ ರಾಜ್ಯದ ನಗರಾಭಿವೃದ್ಧಿ ಇಲಾಖೆಯಡಿ ಕೆವಾಡಿಯ ಅಭಿವೃದ್ಧಿ ಪ್ರಾಧಿಕಾರ (KADA) ಎಂಬ ಸಂಸ್ಥೆಯನ್ನು ರಚಿಸಲಾಯಿತು. ಸದರಿ ಪ್ರಾಧಿಕಾರ ಇದೇ ವರ್ಷದ ಮಾರ್ಚ್ ತಿಂಗಳಲ್ಲಿ ಎಲ್ಲಾ ಹಳ್ಳಿಗಳ ಸರಪಂಚರಿಗೆ ಪತ್ರವೊಂದನ್ನು ಬರೆದು ಸರ್ಕಾರ ಕೇಳಿರುವ ಭೂಮಿಯನ್ನು ಬಿಟ್ಟುಕೊಡದಿದ್ದರೆ ಹಳ್ಳಿಗರನ್ನೆಲ್ಲ ಬಲವಂತವಾಗಿ ಒಕ್ಕಲೆಬ್ಬಿಸಲಾಗುವುದು ಎಂದು ಬೆದರಿಕೆ ಹಾಕಿದೆ. ಆದರೆ ಈ ಬೆದರಿಕೆಗೆ ಸೊಪ್ಪುಹಾಕದ ರೈತರು ತಮ್ಮ ಭೂಮಿಯನ್ನು ಬಿಟ್ಟುಕೊಡದಿರಲು ನಿರ್ಧರಿಸಿ ಕೆವಿಡಿಎ ವಿರೋಧ್ ಮುಂಚ್ ಎಂಬ ಸಂಘಟನೆಯೊಂದನ್ನು ಸ್ಥಾಪಿಸಿದರು.

ಈ ಕುರಿತು ಚರ್ಚಿಸಲೆಂದು ಅಕ್ಟೋಬರ್ 1ರಂದು ಗ್ರಾಮಸ್ಥರ ಸಭೆಯೊಂದನ್ನು ಕರೆಯಲಾಯಿತು. ವಿಷಯ ತಿಳಿದ ಮೇಲಧಿಕಾರಿಗಳು ಸರಪಂಚರನ್ನು, ಪಂಚಾಯತ್ ಸದಸ್ಯರನ್ನು, ಕಂದಾಯಾಧಿಕಾರಿಗಳನ್ನು ಕರೆಸಿ ಹಳ್ಳಿಯ ಜನ ಸಭೆ ಸೇರದಂತೆ ಮಾಡಲು ಯತ್ನಿಸಿದರು. ಇದಕ್ಕೆ ಜಗ್ಗದ ಜನ ಸರ್ದಾರ್ ಸರೋವರ್ ನಿಗಮ ಮತ್ತು ಕೆವಿಡಿಎ ಅಧ್ಯಕ್ಷರನ್ನು ಮತ್ತು ನರ್ಮದಾ ಜಿಲ್ಲಾಧಿಕಾರಿಗಳನ್ನು ಸಭೆಗೆ ಆಹ್ವಾನಿಸಿ ಅಲ್ಲಿ ತಂತಮ್ಮ ನಿಲುವುಗಳನ್ನು ಹೇಳಿರೆಂದು ಕೇಳಿಕೊಂಡರು. ಆದರೆ ಆ ಗಣ್ಯರು ಸಭೆಗೆ ಬರಲಿಲ್ಲ. ಬದಲಾಗಿ ದೊಡ್ಡ ಪೊಲೀಸ್ ಪಡೆಯೊಂದನ್ನು ಕಳುಹಿಸಿ ಜನರನ್ನು ಬೆದರಿಸಲು ಯತ್ನಿಸಿದರು. ಸಭೆಯಲ್ಲಿ ಭಾಗವಹಿಸಲು ಬರುತ್ತಿದ್ದವರ ವಿಡಿಯೊ ಚಿತ್ರೀಕರಣ ಮಾಡಲಾಯಿತು. ಆದರೂ ಜನ ಇದನ್ನೆಲ್ಲ ಲೆಕ್ಕಿಸದೆ ಸಭೆಗೆ ಹಾಜರಾದರು. ಅಂದು ಸುಮಾರು 2000 ಜನರು ಸೇರಿದ್ದರು. ಅವರೆಲ್ಲರೂ ಯೋಜನೆಯನ್ನು ತೀವ್ರವಾಗಿ ವಿರೋಧಿಸಿದ್ದಾರೆ.

'ನಮ್ಮ ಮಕ್ಕಳು ಪ್ರವಾಸಿ ಹೋಟೆಲ್‌ಗಳಲ್ಲಿ ಕೂಲಿಯಾಳುಗಳಾಗಿ ದುಡಿಯುವುದು, ನಮ್ಮ ಹೆಣ್ಣುಮಕ್ಕಳು ವೇಶ್ಯೆಯರಾಗುವುದು ನಮಗೆ ಬೇಕಿಲ್ಲ... ಇಲ್ಲಿಗೆ ಪೊಲೀಸರನ್ನು ಕಳುಹಿಸಿದ್ದು ಕಾನೂನು ಸುವ್ಯವಸ್ಥೆ ಕಾಪಾಡಲೊ ಅಥವಾ ನಮ್ಮಲ್ಲಿ ಭಯ ಹುಟ್ಟಿಸಿ ನಾವೇನೂ ಮಾತಾಡದಂತೆ ಮಾಡಲೊ... ಏನೇ ಆದರೂ ನಮ್ಮ ನೆಲ, ಜಲ, ಅರಣ್ಯಗಳನ್ನು ಸುತಾರಾಂ ಬಿಟ್ಟುಕೊಡಲಾರೆವು' ಎಂದು ಘೋಷಿಸಿದ್ದಾರೆ. ಕೆವಾಡಿಯ ಕೇವಲ ಒಂದು ನಿದರ್ಶನ ಅಷ್ಟೆ. ಇಂಥಾ ಹಲವಾರು ನಿದರ್ಶನಗಳನ್ನು ಕೊಡಬಹುದು.

(ಆಧಾರ: ಕೌಂಟರ್‌ವ್ಯೂ, ಇಂಡಿಯನ್ ಎಕ್ಸ್‌ಪ್ರೆಸ್)




ಕೃಷಿ ಸಾಧನೆಯ ನಕಲಿ ಬೆಳೆ

ಹತಾಶೆಯಿಂದ ಕೂಡಿರುವ ಮೋದಿ ಕ್ಯಾಂಪ್‌ನ ಪ್ರಚಾರಸಮರದ ಮತ್ತೊಂದು ಎಪಿಸೋಡ್ ಇಲ್ಲಿದೆ. ತುಂಬಾ ಜಾಣತನದಿಂದ ಪೋಣಿಸಿ ಬಿತ್ತರಿಸಲಾದ ದಂತಕಥೆ ಇದು...

ಕಳೆದೆರಡು ದಶಕಗಳಿಂದಲೂ ಇಡೀ ದೇಶದ ಕೃಷಿರಂಗ ಬಿಕ್ಕಟ್ಟಿನಲ್ಲಿದೆ. ಹೀಗಿರುವಾಗ ಕೃಷಿರಂಗದಲ್ಲಿ ತನ್ನ ರಾಜ್ಯ ಶೇಕಡಾ 10ರ ಅಭಿವೃದ್ಧಿ ದರ ಸಾಧಿಸಿದೆ ಎಂದು ಮೋದಿ ಹೇಳಿದಾಗ ಅಭಿನಂದನೆಗಳ ಮಹಾಪೂರವೇ ಹರಿದುಬಂತು. ಆದರೆ ಎಂದಿನಂತೆ ಒಂಚೂರು ಕೆದಕಿದಾಗ ಈತನ ಹೇಳಿಕೆ ಬರೀ ಅಂಕಿಅಂಶಗಳ ಒಂದು ಚಮತ್ಕಾರವೆಂಬುದು ಸ್ಪಷ್ಟವಾಗುತ್ತದೆ.

ಗುಜರಾತ್ ರಾಜ್ಯದ ಅಧಿಕೃತ ದಾಖಲೆಗಳ ಪ್ರಕಾರವೆ 1988-98ರ ದಶಕದಲ್ಲಿ ಸರಾಸರಿ ಅಭಿವೃದ್ಧಿ ದರ ಶೇಕಡಾ 10ರಷ್ಟಿತ್ತು, 1999 ಮತ್ತು



2000ನೆ ಇಸವಿಗಳಲ್ಲಿ ಅಲ್ಲಿ ಬರಗಾಲ ತಲೆದೋರಿತು. ಸ್ವಾಭಾವಿಕವಾಗಿ ಇಳುವರಿಯ ಪ್ರಮಾಣ ಕುಂಠಿತವಾಯಿತು. ಪರಿಣಾಮವಾಗಿ ಅಭಿವೃದ್ಧಿ ದರ ಶೇಕಡಾ 30ರಷ್ಟು ಕೆಳಗಿಳಿಯಿತು. ಮುಂದಿನ ನಾಲ್ಕು ವರ್ಷಗಳ ಅವಧಿಯಲ್ಲಿ (2001-05) ಚೆನ್ನಾಗಿ ಮಳೆಯಾದ್ದರಿಂದ ಉತ್ಪಾದನೆ ಸಹಜ ಮಟ್ಟಕ್ಕೆ ತಲುಪಿತು. ಈಗ ನೀವು 1999-2000ರ ಕುಂಠಿತ ಉತ್ಪಾದನೆಯನ್ನು ಆಧಾರವಾಗಿಟ್ಟುಕೊಂಡು ಲೆಕ್ಕಹಾಕಿದರೆ ಮುಂದಿನ ವರ್ಷಗಳಲ್ಲಿ ಭಾರಿ ಹೆಚ್ಚಳವಾದಂತೆ ಅನಿಸದಿರುತ್ತದೆಯೇ? ಮೋದಿ ಮಾಡಿದ್ದು ಇದನ್ನೆ.

ಮತ್ತೊಂದು ವಿಷಯ.


ಮೋದಿಯ ಲೆಕ್ಕಾಚಾರದಲ್ಲಿ ಹಣದುಬ್ಬರದ ಸುದ್ದಿಯೇ ಇಲ್ಲ. ವಾಸ್ತವದಲ್ಲಿ ಹಣದುಬ್ಬರವನ್ನೂ ಪರಿಗಣಿಸಿ ಲೆಕ್ಕಹಾಕಿದಾಗ 2001-09ರ ಅವಧಿಯಲ್ಲಿ ಕೃಷಿ ಅಭಿವೃದ್ಧಿಯ ದರ ಎಷ್ಟಾಗುತ್ತದೆ ಗೊತ್ತೆ? ಕೇವಲ 4%. ಇದೆಲ್ಲಿ, ಮೋದಿಯ 10% ಎಲ್ಲಿ! ಇನ್ನೂ ತಮಾಷೆಯ ಸಂಗತಿಯೆಂದರೆ 11ನೇ ಪಂಚವಾರ್ಷಿಕ ಯೋಜನೆಯ ಪ್ರಕಾರ ಗುಜರಾತ್‌ನ (ಕೃಷಿ) ಅಭಿವೃದ್ಧಿಯ ದರ 37% ಇಳಿಕೆಯಾಗಿತ್ತು!!

(ಆಧಾರ: www.Pheku.com, http://www.Pheku.com)

ಅಕ್ರಮ ಗಣಿಗಾರಿಕೆ ಚಾಂಪಿಯನ್

ಭ್ರಷ್ಟಾಚಾರದಲ್ಲಿ ನಮ್ಮ ಬಳ್ಳಾರಿಯ ಅದಿರು ಹಗರಣ, ಉತ್ತರಪ್ರದೇಶದ ಮರಳು ದಂಧೆಗಳನ್ನೂ ಮೀರಿಸುವಂಥಾ ಬ್ರಹ್ಮಾಂಡ ಹಗರಣವೊಂದು ಮೋದಿಯ ಗುಜರಾತ್‌ನಲ್ಲಿ ನಡೆಯುತ್ತಿದೆ. ಅಲ್ಲಿ ಕಳೆದ 10 ವರ್ಷಗಳಲ್ಲಿ ಆಗಿರುವ ಅಕ್ರಮ ಗಣಿಗಾರಿಕೆಯ ಮೌಲ್ಯವನ್ನು ಲೆಕ್ಕಹಾಕಿದರೆ ಅದರ ಮುಂದೆ ಬಳ್ಳಾರಿ, ಉತ್ತರಪ್ರದೇಶಗಳು ಏನೇನೂ ಅಲ್ಲ. ಸೌರಾಷ್ಟ್ರ ಕರಾವಳಿ, ಕಚ್ ಮತ್ತು ಉತ್ತರ ಭಾಗದಲ್ಲಿ ನಡೆಯುತ್ತಿರುವ ಅಕ್ರಮ ಗಣಿಗಾರಿಕೆಯ ಪರಿಣಾಮವಾಗಿ ಬೆಟ್ಟಗಳು ಬಯಲುಗಳಾಗಿವೆ, ಬಯಲುಗಳು ಬಂಜರುಭೂಮಿಗಳಾಗಿವೆ. ಪೋರ್‌ಬಂದರ್ ಜಿಲ್ಲೆಯಲ್ಲಿ ನಡೆದಿರುವ 54 ಕೋಟಿ ಮೌಲ್ಯದ ಅಕ್ರಮ ಗಣಿಗಾರಿಕೆಯ ಹಗರಣದಲ್ಲಿ ಮೋದಿ ಮಂತ್ರಿಮಂಡಲದ ಹಿರಿಯ ಸದಸ್ಯ ಬಾಬುಭಾಯಿ ಬೊಖಾರಿಯ ಹೆಸರು ಕೇಳಿಬಂದಿದೆ.

ಗುಜರಾತ್‌ನ ವಿವಿಧ ಉದ್ಯಮಗಳಿಗೆ ಬೇಕಾಗುವ ಸುಣ್ಣದಕಲ್ಲು ಮತ್ತು ಇತರ ಖನಿಜಗಳ ಶೇಕಡಾ 60ರಷ್ಟು ಅಕ್ರಮ ಗಣಿಗಾರಿಕೆಯಿಂದಲೆ ಬರುತ್ತಿದೆ ಎನ್ನಲಾಗಿದೆ. ಸೌರಾಷ್ಟ್ರದಲ್ಲಿ ರಾಸಾಯನಿಕ ಕಾರ್ಖಾನೆಗಳನ್ನು ಹೊಂದಿರುವ ನಾಲ್ಕು ದೊಡ್ಡ ಕಾರ್ಪೊರೇಟ್ ಸಂಸ್ಥೆಗಳು ದಿನಕ್ಕೆ 10,000 ಟನ್ನುಗಳಷ್ಟು ಸುಣ್ಣದಕಲ್ಲು ಕಬಳಿಸುತ್ತವೆ. ವರ್ಷಕ್ಕೆ 20 ಲಕ್ಷ ಟನ್ನುಗಳಷ್ಟು ಸುಣ್ಣದಕಲ್ಲು ಪೋರ್‌ಬಂದರ್‌ನಲ್ಲಿರುವ ಕಾಸ್ಟಿಕ್ ಸೋಡಾ ಮತ್ತು ಸಿಮೆಂಟ್ ಉದ್ದಿಮೆಗಳಿಗೇ ಬೇಕಾಗುತ್ತದೆ. ಇದನ್ನು ಪ್ರತಿ ಟನ್ನಿಗೆ ರೂ 200-300ರಂತೆ ಲೆಕ್ಕಹಾಕಿದಾಗ ವರ್ಷಕ್ಕೆ ಸುಮಾರು 180 ಕೋಟಿ ರೂಪಾಯಿಗಳ ವ್ಯವಹಾರ ಆಗುತ್ತದೆ. ಇನ್ನು ಕಟ್ಟಡಗಳಿಗೆ ಬೇಕಾದ 80 ಲಕ್ಷ ಟನ್ನುಗಳಷ್ಟು ಉತ್ತಮ ಗುಣಮಟ್ಟದ ಕಲ್ಲನ್ನೂ ಪೋರ್‌ಬಂದರ್ ಕರಾವಳಿಯಿಂದ ತೆಗೆಯಲಾಗುತ್ತಿದೆ. ಇದರ ಬೆಲೆ ಪ್ರತಿ ಟನ್ನಿಗೆ ರೂ 1300-1400. ಅರ್ಥಾತ್ ವರ್ಷಕ್ಕೆ ಸುಮಾರು 1000 ಕೋಟಿ ರೂಪಾಯಿಗಳ ವ್ಯವಹಾರ.



ಹಾಗಾದರೆ 10 ವರ್ಷಗಳಲ್ಲಿ ಎಷ್ಟು ವ್ಯವಹಾರ ಆಗಿರಬೇಕು, ನೀವೇ ಯೋಚಿಸಿ! ಇನ್ನೂ ಬಯಲಿಗೆ ಬರದಿರುವಂಥಾ ಹಗರಣಗಳ ಸಂಖ್ಯೆ ಎಷ್ಟಿದೆಯೊ ಗೊತ್ತಿಲ್ಲ. ಯಾಕೆಂದರೆ ಲೋಕಾಯುಕ್ತ ಇದ್ದರಲ್ಲವೆ ಗೊತ್ತಾಗುವ ಅವಕಾಶ ಮತ್ತು ಸಾಧ್ಯತೆಗಳಿರುವುದು?

(ಆಧಾರ: wttp://www.dnaindia.com/ahmedabad/) ■

08 ⏮ ಕಪಾಲಿ ಮೋಹನ..

ಲಕ್ಷಾಂತರ ರೂಪಾಯಿಗಳ ಲಾಭದ ದಂಧೆಯಾಯಿತು. ಆ ಹೊತ್ತಿಗೆ ಶೇಷಾದ್ರಿಪುರದ ಕಿನೋ ಟಾಕೀಸ್ ಎದುರಿನ ಸುಧಾ ಬಿಲ್ಡಿಂಗ್‌ನಲ್ಲಿ ಅಡ್ಡೆ ಹಾಕುತ್ತಿದ್ದ ಮೋಹನನ ಜೊತೆಗಿದ್ದ ಸದಾನಂದ, ಜೈರಾಮ, ರಘು ಮುಂತಾದ ಪುಡಿರೌಡಿಗಳೆಲ್ಲ ಸೇರಿಕೊಂಡು ಅದೊಂದು ದಿನ ಮೋಹನನನ್ನೇ ಕತ್ತರಿಸಿಬಿಟ್ಟರು. ಇನ್ನೇನು ಸತ್ತೇ ಹೋದನೆಂದು ಭಾವಿಸಿ ಬಿಟ್ಟುಹೋದ ಮೋಹನನ ಅದೃಷ್ಟ ಚೆನ್ನಾಗಿತ್ತು, ಆರು ತಿಂಗಳು ಪೂರ್ತಿ ಆಸ್ಪತ್ರೆಯಲ್ಲಿ ಮಲಗಿದ್ದು ಹೇಗೋ ಚೇತರಿಸಿಕೊಂಡ ಮೋಹನ ಬಹಿರಂಗವಾಗಿ ಓಡಾಡುವುದನ್ನೇ ನಿಲ್ಲಿಸಿಬಿಟ್ಟ.

ಹಾಗಂತ ತನ್ನ ಫೈನಾನ್ಸಿಂಗ್ ದಂಧೆ ನಿಲ್ಲಿಸಲಿಲ್ಲ. ಮೊದಲು ಮಲ್ಲೇಶ್ವರದಲ್ಲಿ ತನ್ನ ಫೈನಾನ್ಸ್ ಅಡ್ಡೆ ತೆರೆದವನು ಕ್ರಮೇಣ ಗುಟ್ಟಹಳ್ಳಿ ಸರ್ಕಲ್ಲಿನಲ್ಲಿ 'ಬಾಲಾಜಿ ಫೈನಾನ್ಸ್' ಶುರುವಿಟ್ಟ. ಅಲ್ಲಿಯತನಕ ಕಪಾಲಿ ಗಲ್ಲಿಯ ರೌಡಿ ಪಟಾಲಮ್ಮಿ ನಾಯಕನಂತಿದ್ದ ಮೋಹನನ ವಿರುದ್ಧ 1995ರ ಹೊತ್ತಿಗೆ ಮತ್ತೊಬ್ಬನ ನಟೋರಿಯಸ್ ರೌಡಿ ಕಪಾಲಿ ಆನಂದನೇ ತಿರುಗಿ ಬಿದ್ದ. ಏಕೆಂದರೆ ಕಪಾಲಿ ಆನಂದ ಮಾರ್ಕೆಟ್‌ದೇವಿ ಬಂಟ ಪೂಣೆ ವಿರುದ್ಧ ಕಾಲಗಿಕ್ಕಿದವನು ಬೆಂಗಳೂರು ಅಂಡರ್‌ವರ್ಲ್ಡ್‌ನಲ್ಲಿ ಸಾಕಷ್ಟು ಬೆಳೆದಿದ್ದ. ಮೋಹನನಿಗೂ ಇದೇ ಬೇಕಿತ್ತು, ಆ ಹೊತ್ತಿಗಾಗಲೇ ಮೋಹನನ ತಮ್ಮ ಗೋಪಾಲನೂ ಮೀಟರ್ ಬಡ್ಡಿ ದಂಧೆಯಲ್ಲಿ ಬೇರು ಬಿಟ್ಟಿದ್ದ. ಇದೆಲ್ಲಕ್ಕೂ ಮಿಗಿಲಾಗಿ ಮೋಹನನ ಚೀಟಿ ಸಾಮ್ರಾಜ್ಯ ವಿಸ್ತರಿಸಿತ್ತು. ಬೆಂಗಳೂರಿನ ಅನೇಕ ಹೊಟೇಲ್ ಮಾಲೀಕರು, ಗಾಂಧಿನಗರದ ಸಣ್ಣಪುಟ್ಟ ವ್ಯಾಪಾರಸ್ಥರೆಲ್ಲ ಈತನ ಬಳಿಯೇ ಚೀಟಿ ಹಾಕುತ್ತಿದ್ದರು.

ಹಾಗೇ ಬೆಳೆದು ನಿಂತ ಈತನ ಚೀಟಿ ದಂಧೆ ಇಸವಿ 2000ರ ಹೊತ್ತಿಗೆ ಯಾವ ಮಟ್ಟಕ್ಕೆ ವ್ಯಾಪಿಸಿತೆಂದರೆ, ಪೊಲೀಸ್ ಅಧಿಕಾರಿಗಳು, ಸಿನಿಮಾ ಮಂದಿ, ರಿಯಲ್ ಎಸ್ಟೇಟ್ ಸೇರಿದಂತೆ ಅನೇಕ ಘಟಾನುಘಟಿಗಳೇ ಈತನ ವ್ಯವಹಾರದ ತೆಕ್ಕೆಗೆ ಸೇರಿದ್ದರು. ತಿಂಗಳಿಗೆ ಕನಿಷ್ಠವೆಂದರೂ 15 ಚೀಟಿಗಳಿರುತ್ತಿದ್ದವು. ದಿನಬಿಟ್ಟು ದಿನ ಒಂದಲ್ಲ ಒಂದು ಚೀಟಿ ಇದ್ದೇ ಇರುತ್ತಿತ್ತು, ಅದೂ ಸಣ್ಣ ಮೊತ್ತವೇನಲ್ಲ, ಲಕ್ಷದಿಂದ ಹಿಡಿದು ಕೋಟಿ ಮೊತ್ತದ ಚೀಟಿಗಳು!

ಬಂದ ಲಾಭ ಯಾಪಾಟಿಯದೆಂದರೆ ಸದಾಶಿವನಗರದಲ್ಲಿ 10 ಕೋಟಿ ಬೆಲೆಬಾಳುವ ಸೈಟೊಂದನ್ನು ಖರೀದಿಸಿದ. ಭರ್ಜರಿ ಬಂಗಲೆಯೆಬ್ಬಿಸಿ ಅದನ್ನು ವರನಟ ರಾಜ್ ಕೈಯಲ್ಲೇ ಉದ್ಘಾಟಿಸಿದ. ತಮ್ಮ ಗೋಪಾಲನಿಗೆ ಶೇಷಾದ್ರಿಪುರದಲ್ಲಿ ಮನೆ ಕಟ್ಟಿಸಿಕೊಟ್ಟ. ತನ್ನ ಹುಟ್ಟೂರು ಬಕ್ಕಾಡಿಯಲ್ಲಿ ಅದ್ದೂರಿಯ ಬಂಗಲೆಯೆಬ್ಬಿಸಿದ. ರಾಜ್ ಬದುಕಿದ್ದಷ್ಟೂ ಕಾಲ ಮೋಹನ್ ಪ್ರತಿ ವರ್ಷ ಅದ್ದೂರಿಯ ಅಯ್ಯಪ್ಪಸ್ವಾಮಿ ಪೂಜೆ ಏರ್ಪಡಿಸಿ ಅದಕ್ಕೆ ಖುದ್ದು ರಾಜ್‌ರನ್ನೇ ಕರೆದೊಯ್ಯುತ್ತಿದ್ದ ಅದೇನು ಪ್ರೀತಿಯೋ ಗೊತ್ತಿಲ್ಲ ಬರಬರುತ್ತ ರಾಜ್ ಪಾಲಿಗೆ ಈತನೇ ಮಾನಸ ಪುತ್ರನಂತಾಗಿದ್ದ!

ಅಂತೂ 2005ರ ಹೊತ್ತಿಗೆ ಇಡೀ ರಾಜ್ ಕುಟುಂಬವೇ ಮೋಹನನಿಗೆ ಹತ್ತಿರವಾಗಿತ್ತು. ಮೆಜೆಸ್ಟಿಕ್ ಬಸ್‌ಸ್ಟ್ಯಾಂಡ್ ಮತ್ತು ಶಾಂತಿನಗರದ ಬಿಎಂಟಿಸಿ ಬಸ್‌ನಿಲ್ದಾಣವಲ್ಲದೆ ಇತರೇ ನಾಲ್ಕು ಹೊಟೇಲುಗಳಿಗೆ ಮೋಹನ ರಾಘಣ್ಣನನ್ನು ತನ್ನ ಪಾರ್ಟನರ್ ಮಾಡಿಕೊಂಡಿದ್ದ ಇದಲ್ಲದೆ ರಾಘಣ್ಣನ ಪಾಲುದಾರಿಕೆಯಲ್ಲಿ ಮೋಹನ ದೇವನಹಳ್ಳಿ ಸುತ್ತಮುತ್ತ ಬೇಕಾಬಿಟ್ಟಿ ಜಮೀನು ಖರೀದಿಸಿದ್ದ ಮೆಜೆಸ್ಟಿಕ್, ಸದಾಶಿವನಗರ ಸೇರಿದಂತೆ ಹಲವೆಡೆ ರಾಜ್ ಕುಟುಂಬರ ಇತರರ ಪಾಲುದಾರಿಕೆಯಲ್ಲೂ ನಿವೇಶನ ಖರೀದಿಸಿಟ್ಟಿದ್ದ. ಇದಲ್ಲದೆ ಬೇರೆ ಯಾವ್ಯಾವ ದಂಧೆಗಳಲ್ಲಿ ಮೋಹನ ರಾಜ್ ಕುಟುಂಬದ ಬಂಡವಾಳವನ್ನು ತೊಡಗಿಸಿದ್ದನೊ. ಏನು ಯಡವಟ್ಟಾಯಿತೊ ಬಲ್ಲವರ್ಯಾರು?

ಸದ್ಯ ರಾಘಣ್ಣನ ಅನಾರೋಗ್ಯಕ್ಕೂ ಕಪಾಲಿ ಮೋಹನನ ವ್ಯಾವಹಾರಿಕ ಮಹತ್ವಾಕಾಂಕ್ಷೆಗೂ ಸಂಬಂಧವಿದೆಯೆ? ಅಥವಾ ಗಾಂಧಿನಗರದಲ್ಲಿ ಈ ಥರದ ಊಹಾಪೋಹ ಎದ್ದಿರುವುದು ಕುಚೋದ್ಯವೇ?

ಇದೆಲ್ಲದರ ಅರ್ಥವೇನು?

■ ರಾ. ಸೋಮನಾಥ್

ದಲಿತ ನಾನಿಗಳು

ನಿನ್ನೆ ರಾತ್ರಿ
ಕಾನ್ಶಿರಾಮ್ ಕನಸ್ಸಲ್ಲಿ ಬಂದಿದ್ದರು
ನನ್ನನ್ನು ನೆಲದಿಂದ ಎತ್ತಿ
ಕುರ್ಚಿಯ ಮೇಲೆ ಕೂಡಿಸಿದರು.
* * *



ಪ್ರಿಯವಾದ ಫಸಲು
ಆತ್ಮಹತ್ಯೆ ಮಾಡಿಕೊಂಡಿತು
ರೈತ ಅದರ ಜೊತೆ
ಕೈಜೋಡಿಸಿದನಷ್ಟೇ.
* * *

ಜಾತಿ
ರಕ್ತಬೀಜಾಸುರ
ಕೊಚ್ಚಿ ಕೊಂದರೆ
ಉಪಜಾತಿಗಳಾಗಿ ಹುಟ್ಟಿಕೊಳ್ಳುತ್ತದೆ.
* * *+

ಇದೇನಾಶ್ಚರ್ಯ
ಕೊಲೆಗಡುಕನೂ
ಮಾನವನ ಹಾಗೆ
ಕಾಣುತ್ತಾನೆ!
* * *

ದೇವರು
ಮಣ್ಣ ಮೂರ್ತಿಯಲ್ಲಿಲ್ಲ
ಅವಳು ಮಣ್ಣನ್ನೂ ರೊಟ್ಟಿಯಾಗಿಸುವ
ದಲಿತ ತಾಯಿ.
* * *

ಕಂಡೋರೆಲ್ಲಾ
ಬುದ್ಧರಾಗಬೇಕಿಲ್ಲ
ತಮ್ಮ ಬುದ್ಧಿ ಕಳೆದುಕೊಳ್ಳದಿದ್ದರೆ
ಅಷ್ಟೇ ಸಾಕು.
* * *

ಫುಲೆ,
ಶಂಖನಾದ ಮಾಡಿದರು:
ಶೂದ್ರನೇ
ನಿನಗಿದು ಶುಭಾರಂಭ.
* * *

ಹಾಲು ಕೊಡೋದು ಎಮ್ಮೆ
ಪೂಜೆಗೊಳೋದು ಗೋವು
ಇದು ಪ್ರಾಣಿಪ್ರಪಂಚದ
ಜಾತಿವಂತಿಕೆಯಲ್ಲವೇ?
* * *


ಹಸಿ ಹುಲ್ಲು ಸುಡೋದಾದರೂ ಹೇಗೆ?
ಒಂದಷ್ಟು ಕಟ್ಟಾಚರಣೆ
ಒಂದಿಷ್ಟು ರಾಜಕೀಯವನ್ನು ಅದರ ಮೇಲೆ ಸುರಿ
ಹೇಗೆ ಉರಿತದೆ ನೋಡು.
* * *

ಮಾರಿದೋರು ಒಡೆಯರು
ಕೊಂಡೋರು ಜೀತಾದೋರು
ಮದುವೆ
ಒಳ್ಳೇ ವ್ಯಾಪಾರ ಕೂಡ ಅಲ್ಲ.

ಮೂಲ: ನೇತಾಲ ಪ್ರತಾಪ್ ಕುಮಾರ್
ತೆಲುಗು 'ದಲಿತ ನಾನಿಗಳು' ಕನ್ನಡಕ್ಕೆ: ಕೆ.ಪ್ರಕಾಶ್‌ರಾಜ್

ಈ ಸಾರಿ ಮೋದಿ ಗೆಲ್ಲುವುದಿಲ್ಲ: ಆದರೆ...

ಅಂಚಿನಿಂದ....



ಡಾ.ವಾಸು ಎಚ್.ವಿ.

ಮೋದಿಯ ಪರವಾಗಿ ಏಳಿಸಲಾಗಿರುವ ಅಲೆಯ ಪರಿಣಾಮದಿಂದ ಪ್ರಜ್ಞಾವಂತರು ಕಂಗಾಲಾಗಿದ್ದಾರೆ. ಮೋದಿಯ ಪ್ರಚಾರ ಯಂತ್ರಾಂಗದ ಪ್ರಯತ್ನವಾಗಿ ಏಳುತ್ತಿರುವ ಅಬ್ಬರ ನೋಡಿದರೆ ಆತ ಈಗಾಗಲೇ ಪ್ರಧಾನ ಮಂತ್ರಿಯಾಗಿಬಿಟ್ಟಿದ್ದಾನೆ. ರಾಹುಲ್ ಗಾಂಧಿ ಮತ್ತು ನರೇಂದ್ರ ಮೋದಿ ಎಂಬ ಎರಡೇ ಆಯ್ಕೆಗಳಿವೆಯೆಂತಲೂ, ಆ ಆಯ್ಕೆಗಳಲ್ಲಿ ರಾಹುಲ್ ಅಪ್ರಬುದ್ಧ ವ್ಯಕ್ತಿಯೆಂತಲೂ, ಆತನ ಪಕ್ಷವು ಅತ್ಯಂತ ಭ್ರಷ್ಟವೂ, ಭಾರತದ ಹಿತವನ್ನು ಕಾಯಲು ಸೂಕ್ತವಲ್ಲವೆಂತಲೂ ಬಿಂಬಿಸುವಲ್ಲಿ ಆ ಯಂತ್ರಾಂಗವು ಯಶಸ್ವಿಯಾಗಿದೆ. ಅದಕ್ಕೆ ರಾಹುಲ್ ಗಾಂಧಿ ಮತ್ತು ಅವರ ಪಕ್ಷವೂ ಕಾರಣವಾಗಿದೆ.

ಅದಕ್ಕೆ ಪ್ರತಿಯಾಗಿ ಮೋದಿಯು ಕೇವಲ ಕೋಮುವಾದಿ ಮಾತ್ರವಲ್ಲ ಕಾರ್ಪೋರೇಟ್ ಕಂಪನಿಗಳ ಪರವಾಗಿ ಆಕ್ರಮಣಕಾರಿಯಾಗಿ ಕೆಲಸ ಮಾಡುವ, ಅಭಿವೃದ್ಧಿಯ ವಿಚಾರದಲ್ಲಿ ಗುಜರಾತ್‌ಅನ್ನು ಸಾಪೇಕ್ಷವಾಗಿ ಹಿಂದಕ್ಕೆ ಕೊಂಡೊಯ್ದಿರುವ ಒಬ್ಬ ವಿಫಲನಾದ ಆಡಳಿತಗಾರ ಎಂದು ಬಿಂಬಿಸಲು ಕಾಂಗ್ರೆಸ್ ಪ್ರಯತ್ನ ಹಾಕುತ್ತಿಲ್ಲ; ಬದಲಿಗೆ ಆ ಕೆಲಸವನ್ನು ಕೆಲವು ಪ್ರಗತಿಪರ ಪ್ರಜ್ಞಾವಂತರು ಮಾಡುತ್ತಿದ್ದಾರೆ. ಏಕೆಂದರೆ ಮೋದಿಯ 'ಅಭಿವೃದ್ಧಿ'ಯ ಮಾದರಿಯ ಜೊತೆ ಕಾಂಗ್ರೆಸ್‌ಗೆ ಮೂಲಭೂತ ವ್ಯತ್ಯಾಸವಿಲ್ಲ, ಪ್ರಗತಿಪರವಾಗಿ ಆಲೋಚನೆ ಮಾಡುವವರಿಗೆ ಇದು ಆತಂಕವನ್ನು ಹುಟ್ಟಿಸಿ, ಕಾಂಗ್ರೆಸ್‌ನ ಪರವಾಗಿ ತಾವೇ ಬ್ಯಾಟಿಂಗ್ ಮಾಡಲು ಹೊರಟಿರುವ ದೊಡ್ಡ ಸಂಖ್ಯೆಯೂ ಇದೆ. ಬಿಜೆಪಿಗೆ ಕಾಂಗ್ರೆಸ್ ಪರ್ಯಾಯವೇ? ನಾವ್ಯಾಕೆ ಮೂರನೆ ಪರ್ಯಾಯಕ್ಕಾಗಿ ಪ್ರಯತ್ನ ಪಡಬಾರದು ಎಂಬ ಚರ್ಚೆ ಬೇರೆಯೇ ಆದ ಚರ್ಚೆ.


ಆದರೆ ಈ ಸಾರಿ ಮೋದಿ ಪ್ರಧಾನಿಯಾಗಲು ಸಾಧ್ಯವೇ ಇಲ್ಲ, ಸದ್ಯದ ದೇಶದ ರಾಜಕೀಯ ಪರಿಸ್ಥಿತಿ ಮತ್ತು ಲಭ್ಯವಿರುವ ಅಂಕಿ-ಅಂಶ ಅದಕ್ಕೆ ಪೂರಕವಾಗಿಲ್ಲ, ಕೆಲವು ಸಮೀಕ್ಷೆಗಳು ಕಾಂಗ್ರೆಸ್‌ಗಿಂತ ಬಿಜೆಪಿ, ಯುಪಿಎಗಿಂತ ಎನ್‌ಡಿಎ ಹೆಚ್ಚಿನ ಸೀಟುಗಳನ್ನು ಗೆಲ್ಲುತ್ತವೆ ಎಂದು ಹೇಳಿರುವುದು ವಾಸ್ತವಕ್ಕೆ ದೂರವಾಗಿದೆ. ಎಲ್ಲಾ ಲೆಕ್ಕಾಚಾರಗಳನ್ನೂ ಬಿಜೆಪಿಯ ಪರವಾಗಿ ನಾವು ಮಾಡಿದರೂ ಬಿಜೆಪಿ 150 ಸೀಟುಗಳನ್ನು ದಾಟುವುದು ಕಷ್ಟ. ಹಾಗಾಗಿಯೇ ಅವರೂ ಸಹ 272 ಎಂಬ ಒಂದು ಗುರಿಯನ್ನು ಇಟ್ಟುಕೊಂಡು ತಿಣುಕುತ್ತಿದ್ದಾರೆ. ಅದು ಯಾಕೆ ಎಂಬುದನ್ನು ಅರ್ಥ ಮಾಡಿಕೊಳ್ಳುವ ಮುನ್ನ 2009ರ ಚುನಾವಣೆಯಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್‌ನ ಸಾಧನೆ ಏನು ಎಂಬುದನ್ನು ನೋಡೋಣ. ಮುಖ್ಯವಾಗಿ 518 (ಒಟ್ಟು ಸೀಟುಗಳು 543) ಲೋಕಸಭಾ ಕ್ಷೇತ್ರಗಳಿರುವ 20 ಪ್ರಮುಖ ರಾಜ್ಯಗಳ ಅಂಕಿ-ಅಂಶಗಳು ಹೀಗಿವೆ

ರಾಜ್ಯ	ಒಟ್ಟು	ಕಾಂಗ್ರೆಸ್	ಬಿಜೆಪಿ
ಆಂಧ್ರ	42	33	00 (ತೆಲುಗುದೇಶಂ 6)
ಅಸ್ಸಾಂ	14	07	04
ಬಿಹಾರ	40	02	12 (ಜೆಡಿಯು 20)
ಗುಜರಾತ್	26	11	15
ಹರಿಯಾಣ	10	09	00
ಹಿಮಾಚಲ	04	01	03
ಕರ್ನಾಟಕ	28	06	19
ಕೇರಳ	20	13	00
ಮ.ಪ್ರದೇಶ	29	16	12
ಮಹಾರಾಷ್ಟ್ರ	48	17	09 (ಶಿವಸೇನೆ 11, ಎನ್‌ಸಿಪಿ 8)
ಒರಿಸ್ಸಾ	21	06	00 (ಬಿಜು ಜನತಾದಳ 14)
ಪಂಜಾಬ್	13	08	01
ರಾಜಸ್ತಾನ	25	20	04
ತಮಿಳುನಾಡು	39	08	00 (ಡಿಎಂಕೆ 18, ಅಣ್ಣಾ ಡಿಎಂಕೆ 9)
ಉ.ಪ್ರದೇಶ	80	21	10 (ಬಿಎಸ್‌ಪಿ 20, ಎಸ್‌ಪಿ 21)
ಪ.ಬಂಗಾಳ	42	06	01 (ಟಿಎಂಸಿ 19, ಸಿಪಿಎಂ 9)
ಛತ್ತೀಸ್‌ಗಢ	11	01	10
ಜಾರ್ಖಂಡ್	14	01	08
ಉತ್ತರಾಖಂಡ	05	05	00
ದೆಹಲಿ	07	07	00

ಇದರಲ್ಲಿ ಕಾಣುವಂತೆ 20 ಮುಖ್ಯ ರಾಜ್ಯಗಳ 518 ಸೀಟುಗಳಲ್ಲಿ ಕಾಂಗ್ರೆಸ್‌ಗೆ 194 ಸೀಟುಗಳೂ (28% ಮತಗಳಿಕೆ), ಬಿಜೆಪಿಗೆ 112 ಸೀಟುಗಳೂ (18.8% ಮತಗಳಿಕೆ) ಬಂದಿದ್ದವು. ಈಗ ಬಿಜೆಪಿ 200 ಸೀಟುಗಳನ್ನು ಪಡೆಯಬೇಕೆಂದರೆ ಏನಾಗಬೇಕು. ಮೊದಲು ಅದು ಇರುವ ಸೀಟುಗಳನ್ನು ಉಳಿಸಿಕೊಳ್ಳಬೇಕು ಮತ್ತು ತನ್ನ ಪ್ರಾಬಲ್ಯವಿರುವ ಕಡೆ ಸೀಟುಗಳನ್ನು ಹೆಚ್ಚಿಸಿಕೊಳ್ಳಬೇಕು ಮತ್ತು ಇತರೆಡೆ ಕಾಂಗ್ರೆಸ್ ಅಥವಾ ಇತರ ಪಕ್ಷಗಳ ಸೀಟುಗಳನ್ನು ಕಸಿದುಕೊಳ್ಳಬೇಕು. ಈ ಮೂರರಲ್ಲಿ ಯಾವ್ಯಾವುದರ ಸಾಧ್ಯತೆ ಎಷ್ಟೆಷ್ಟು ನೋಡೋಣ.

ಬಿಜೆಪಿಯ ಪ್ರಾಬಲ್ಯವಿರುವ ಕಡೆ ಸೀಟು ಹೆಚ್ಚಿಸಿಕೊಳ್ಳುವುದು: 2009ರ ಚುನಾವಣೆಯ ಫಲಿತಾಂಶದ ಆಧಾರದಲ್ಲಿ ಹೇಳುವುದಾದರೆ ಅದರ ಪ್ರಬಲ ರಾಜ್ಯಗಳು ಕರ್ನಾಟಕ (ಅತ್ಯಂತ ಹೆಚ್ಚು ಎಂಪಿಗಳು ಇರುವುದು ಕರ್ನಾಟಕದಿಂದಲೇ (28ರಲ್ಲಿ 19), ಮ.ಪ್ರದೇಶ (29ರಲ್ಲಿ 16), ಗುಜರಾತ್ (26ರಲ್ಲಿ 15), ಛತ್ತೀಸ್‌ಗಢ (11ರಲ್ಲಿ 10), ಜಾರ್ಖಂಡ್ (14ರಲ್ಲಿ 8). ಅಂದರೆ ಅದು ಒಟ್ಟು ಪಡೆದುಕೊಂಡ ಸೀಟುಗಳಲ್ಲಿ ಅರ್ಧಕ್ಕೂ ಹೆಚ್ಚು (68)ಅನ್ನು ಈ ಐದು ರಾಜ್ಯಗಳಿಂದಲೇ ಪಡೆದುಕೊಂಡಿತ್ತು.

ಕರ್ನಾಟಕದ ಪರಿಸ್ಥಿತಿ ಇಂದು ಬಹಳ ಬದಲಾಗಿದೆ. ಕಾಂಗ್ರೆಸ್ ಹೇಳಿಕೊಳ್ಳುತ್ತಿರುವ ರೀತಿಯಲ್ಲಿ ಅದು 25 ಸೀಟುಗಳನ್ನು ಗೆಲ್ಲಲಾಗದು ಎಂದಿಟ್ಟುಕೊಳ್ಳೋಣ. ಆದರೆ ಬಿಜೆಪಿ 10ಕ್ಕಿಂತ ಹೆಚ್ಚು ಗೆಲ್ಲುವುದು ಕಷ್ಟ. ಅದರರ್ಥ ಅದು ಕನಿಷ್ಠ 9 ಸೀಟುಗಳನ್ನು ಕಳೆದುಕೊಳ್ಳಲಿದೆ. ಛತ್ತೀಸ್‌ಗಢದಲ್ಲಿ ಅದು ಗೆಲ್ಲಬಹುದಾದ ಗರಿಷ್ಠ (11ರಲ್ಲಿ 10) ಗೆದ್ದುಬಿಟ್ಟಿದೆ. ಈಗ ವಿಧಾನಸಭಾ ಚುನಾವಣೆಗೆ ಹೋಗಲಿರುವ ಮಧ್ಯಪ್ರದೇಶದಲ್ಲಿ ಅದರ ಮತಗಳಿಕೆಯ ಪ್ರಮಾಣ ಶೇ.2ರಷ್ಟು ಕಡಿಮೆಯಾಗಲಿದೆ ಎಂಬ ಸಮೀಕ್ಷೆಯಿದೆ. ಆದರೆ ಮೋದಿ ಮೇನಿಯಾದಿಂದ ಅದು ಹೆಚ್ಚಾಗುತ್ತದೆ ಎಂದೇ ಇಟ್ಟುಕೊಳ್ಳೋಣ. ಆಗ 2/3ರಷ್ಟು ಸೀಟನ್ನು ಪಡೆದುಕೊಂಡರೆ 20 ಸೀಟುಗಳು ಬರುತ್ತವೆ. ಇನ್ನು ಗುಜರಾತ್ ಸಂಪೂರ್ಣವಾಗಿ ಬಿಜೆಪಿಯ ಪರವಾಗಿ ಇರುತ್ತದೆ ಎಂದಿಟ್ಟುಕೊಂಡು 20ರಿಂದ 22 ಸೀಟುಗಳು ಪಡೆಯುತ್ತವೆ ಎಂದುಕೊಳ್ಳೋಣ. ಜಾರ್ಖಂಡ್‌ನಲ್ಲಿ ಹಿಂದಿನ ರೀತಿಯ ಪರಿಸ್ಥಿತಿಯೂ ಬಿಜೆಪಿಗಿಲ್ಲವಾದರೂ ಅದು 10ರಿಂದ 14ರ ತನಕವೂ ಪಡೆಯುತ್ತದೆ ಎಂದು ಬರೆದುಕೊಳ್ಳೋಣ. ಇಷ್ಟೆಲ್ಲಾ ಆದ ಮೇಲೆ, ಬಿಜೆಪಿಯ 2009ರ ಭದ್ರಕೋಟೆಗಳಲ್ಲಿ ಅದರ ಒಟ್ಟು ಸೀಟು ಹೆಚ್ಚಾಗುವುದು 68ರಿಂದ ಹೆಚ್ಚೆಂದರೆ 73-75 ಅಷ್ಟೇ.



ಈಗ ಅದು 180ರಿಂದ 200 ಎಂಪಿಗಳನ್ನು ಪಡೆಯಬೇಕೆಂದರೆ ಕಳೆದ ಸಾರಿ ದುರ್ಬಲವಾಗಿದ್ದ ರಾಜ್ಯಗಳಿಂದ 100-120 ಸೀಟುಗಳು ಗೆಲ್ಲಬೇಕು. ಅದರ ಸಾಧ್ಯತೆ ಏನೆಂದು ನೋಡೋಣ. ಉತ್ತರಪ್ರದೇಶದಿಂದ ಆರಂಭಿಸೋಣ. ಹಾಲಿ ಅಲ್ಲಿ ಮುಜಫರ್‌ನಗರದ ಕೋಮುಗಲಭೆಯ ನಂತರದ ಸ್ಥಿತಿ ಏನೆಂದು ಸರಿಯಾಗಿ ಅಂದಾಜಿಸಬೇಕಿದೆ. ಅಂದರೆ, ಅದರಿಂದ ಎಸ್‌ಪಿಗೆ ಹೆಚ್ಚು ಲಾಭವೋ, ಬಿಜೆಪಿಗೋ ಎಂದು. ಬಿಜೆಪಿಯ ಅತ್ಯಂತ ಹೆಚ್ಚು ಸೀಟು ಪಡೆದಿದ್ದದ್ದು 57. ಅದು ಉತ್ತರಪ್ರದೇಶದ ಜಾತಿ ವಿಭಜೀಕರಣ ಚುನಾವಣಾ ಕ್ಷೇತ್ರದಲ್ಲಿ ಈ ಮಟ್ಟಿಗೆ ಆಗದೇ ಇದ್ದಾಗ. ವಾಜಪೇಯಿ ನೇತೃತ್ವದಲ್ಲಿ ಅಧಿಕಾರಕ್ಕೆ ಬರುವ ಹೊತ್ತಿಗೆ ಆ ರೀತಿಯ ವಿಭಜೀಕರಣ ನಡೆದು ಅದು 29ಕ್ಕೆ ಇಳಿದು ಬಿಟ್ಟಿತು. ಆ ನಂತರ ಮತ್ತಷ್ಟು ಇಳಿದು ಕಳೆದ ಚುನಾವಣೆಯಲ್ಲಿ 10 ಸೀಟುಗಳಲ್ಲಿ ಗೆದ್ದಿದ್ದರು. ಈ ಸಾರಿ ಅದು ಮತ್ತೆ 29ಕ್ಕೆ ಏರುತ್ತದೆ ಎಂದೇ ಬಿಜೆಪಿಯ ಪರವಾಗಿ ಬರೆದುಕೊಳ್ಳೋಣ.

ಇದರ ನಂತರ ಬಿಜೆಪಿ ಲಾಭ ಪಡೆದುಕೊಳ್ಳಬಹುದಾದ ದೊಡ್ಡ ರಾಜ್ಯವೆಂದರೆ ಬಿಹಾರ. ಇಲ್ಲೂ ಸಹ ಅತ್ಯಂತ ಹೆಚ್ಚು ಸೀಟುಗಳನ್ನು ಪಡೆದದ್ದು 1999ರಲ್ಲಿ - 23 ಸೀಟುಗಳು. ಆದರೆ 2009ರ ಚುನಾವಣೆಯ ಹೊತ್ತಿಗೆ ಜೆಡಿಯುನ ಚುನಾವಣಾ ಮೈತ್ರಿಯ ಹೊರತಾಗಿಯೂ ಪಡೆದುಕೊಳ್ಳಲು ಸಾಧ್ಯವಾಗಿದ್ದು 12 ಸೀಟುಗಳನ್ನು ಮಾತ್ರವೇ. ಈಗ ಆ ಮೈತ್ರಿಯೂ ಇಲ್ಲ, ಆದರೂ ಈ ಸಾರಿಯೂ 12 ಸೀಟು ಗೆಲ್ಲುತ್ತದೆ ಎಂಬ ಲೆಕ್ಕಾಚಾರವಿರಲಿ. ಇನ್ನು ಮಹಾರಾಷ್ಟ್ರ. ಕಳೆದ ಚುನಾವಣೇಲಿ 9 ಬಿಜೆಪಿ ಎಂ.ಪಿಗಳಿದ್ದರು. ಅಲ್ಲಿ ವಾಜಪೇಯಿ ಪ್ರಧಾನಿಯಾದ 99ರಲ್ಲೂ ಗೆಲ್ಲಲು ಸಾಧ್ಯವಾಗಿದ್ದು 13 ಸೀಟುಗಳನ್ನು ಮಾತ್ರ. ಈ ಸಾರಿ ಇನ್ನೂ 2 ಹೆಚ್ಚು ಅಂದರೆ 15 ಸೀಟು ಪಡೆದುಕೊಳ್ಳಬಹುದು.

ಇನ್ನೊಂದು ದೊಡ್ಡ ರಾಜ್ಯ ರಾಜಸ್ಥಾನ. ಇಲ್ಲಿ ಸಾಮಾನ್ಯವಾಗಿ ಬಿಜೆಪಿ ಮತ್ತು ಕಾಂಗ್ರೆಸ್‌ನ ನಡುವೆ ಅಲೆ ಬೀಸುತ್ತಿರುತ್ತದೆ. ಈ ಸಾರಿ ಆಳುವ ಕಾಂಗ್ರೆಸ್‌ನ ವಿರುದ್ಧ ಬಿಜೆಪಿಯ ಪರವಾಗಿ ಅಲೆ ಇರುವ ಸಾಧ್ಯತೆಯೇ ಹೆಚ್ಚು, ಅದರ ಪರವಾಗಿಯೇ ಲೆಕ್ಕ ಹಾಕಿ 21 ಸೀಟು ಗೆಲ್ಲುತ್ತಾರೆಂದು ಅಂದಾಜಿಸೋಣ. ಇದು ಇದುವರೆಗೆ ರಾಜಸ್ಥಾನದಲ್ಲಿ ಬಿಜೆಪಿ ಪಡೆದುಕೊಂಡಿರುವ ಅತೀ ಹೆಚ್ಚು ಸೀಟುಗಳು.

ಇನ್ನು ಪ.ಬಂಗಾಳದಲ್ಲಿ ಇದುವರೆಗೆ ಬಿಜೆಪಿಯು ಅತ್ಯಂತ ಹೆಚ್ಚು ಪಡೆದುಕೊಂಡಿದದ್ದು 1999ರಲ್ಲಿ 2, ಹರ್ಯಾಣದಲ್ಲಿ 99ರಲ್ಲೇ 5 ಮತ್ತು ಪಂಜಾಬ್‌ನಲ್ಲಿ 3. ಈ ಸಾರಿಯೂ ಇದಕ್ಕಿಂತ ಹೆಚ್ಚು ಸಾಧ್ಯವಿಲ್ಲ, ಆದರೆ ಬಿಜೆಪಿಯ ಮಿತ್ರ ಪಕ್ಷಗಳು ಇಲ್ಲಿ ಗೆಲ್ಲುವ ಸಾಧ್ಯತೆ ಇದೆ. ಇನ್ನು ಒರಿಸ್ಸಾದಲ್ಲಿ ಅದರ ಗರಿಷ್ಠ ಗಳಿಕೆ 99ರಲ್ಲಿ 9. ಅದು 2004ರಲ್ಲಿ 7ಕ್ಕೆ ಇಳಿದು, 2009ರಲ್ಲಿ ಬಿಜೆಡಿ ಅದರಿಂದ ದೂರವಾದ ಮೇಲೆ ಸೊನ್ನೆಯಾಗಿತ್ತು. ಈ ಸಾರಿ ನಾವು ಉದಾರವಾಗಿ ಅದು 7ಕ್ಕೆ ಏರುತ್ತದೆಂದು ಇಟ್ಟುಕೊಳ್ಳೋಣ. ದೆಹಲಿಯಲ್ಲಿ ಬಿಜೆಪಿ ಪರವಾದ ಸಮೀಕ್ಷೆಗಳೂ 3 ಸೀಟು ಬರುತ್ತವೆಂದು ಹೇಳುತ್ತಿವೆ. ಏಕೆಂದರೆ ಸ್ವತಂತ್ರವಾಗಿ ಸ್ಪರ್ಧಿಸಲಿರುವ ಆಮ್ ಆದ್ಮಿ ಪಕ್ಷವು ಕಾಂಗ್ರೆಸ್ ವಿರೋಧಿ ಮತಗಳನ್ನು ವಿಭಜಿಸುತ್ತದೆ.

ಇನ್ನು ಕೇರಳ ಹಾಗೂ ತಮಿಳುನಾಡುಗಳಲ್ಲಿ ಯಥಾಪ್ರಕಾರ ಒಂದು ಸೀಟೂ ಬರುವುದಿಲ್ಲ. ಆಂಧ್ರದಲ್ಲಿ 1999ರಲ್ಲಿ 7 ಸೀಟು ಪಡೆದುಕೊಂಡಿತ್ತಾದರೂ, ಆ ನಂತರ ಒಂದೂ ಬಂದಿಲ್ಲ, ಈ ಸಾರಿ ತೆಲಂಗಾಣ ಹಾಗೂ ಸೀಮಾಂಧ್ರದ ಅಬ್ಬರದಲ್ಲಿ ಕಾಂಗ್ರೆಸ್ ಪರ ಹಾಗೂ ವಿರುದ್ಧದ ಅಲೆಗಳು ಎರಡು ಹೊಸ ರಾಜ್ಯಗಳಲ್ಲಿ ಕೆಲಸ ಮಾಡುತ್ತವೆಯಾದರೂ ಅದರ ಲಾಭ ಬಿಜೆಪಿಗಾಗುವುದಿಲ್ಲ, ಏಕೆಂದರೆ ಈ ವಿಚಾರದಲ್ಲಿ ಬಿಜೆಪಿ ತೆಲಂಗಾಣದ ಪರವಿತ್ತು ಅಲ್ಲಿ ಕಾಂಗ್ರೆಸ್ ಮತ್ತು ಟಿಆರ್‌ಎಸ್ ಎಲ್ಲಾ ಸೀಟುಗಳನ್ನು ಬಾಚಿಕೊಳ್ಳುತ್ತವೆ. ಈ ರಾಜ್ಯಗಳ ಪೈಕಿ ಅಣ್ಣಾ ಡಿಎಂಕೆ ಮತ್ತು ತೆಲುಗುದೇಶಂ ಬಿಜೆಪಿಯ ಜೊತೆ ಮೈತ್ರಿ ಮಾಡಿಕೊಳ್ಳುವುದು ಖಚಿತ. ತೆಲುಗುದೇಶಂನ ಮೈತ್ರಿ ವೈಎಸ್‌ಆರ್ ಪಕ್ಷವನ್ನು ದೂರವಿಡುತ್ತದೆ.

ಸಾರಾಂಶದಲ್ಲಿ ಎಲ್ಲವೂ ಬಿಜೆಪಿಯ ಪರವಾಗಿಯೇ ಇರುತ್ತದೆ ಎಂದಿಟ್ಟುಕೊಂಡರೂ, ಹೊಸದಾಗಿ ಅದು ಪಡೆದುಕೊಳ್ಳಲಿರುವ ಸೀಟುಗಳು 40ರಿಂದ 50. ಅದರರ್ಥ ಅದು 160-170 ತಲುಪಬಹುದು. 272ಕ್ಕಿಂತ 100 ಸೀಟು ಕಡಿಮೆ. ಇವೆಲ್ಲವೂ ಹಿಂದಿನ ಚುನಾವಣೆಗೂ ಈ ಸಾರಿಗೂ ಬರಬಹುದಾದ ಬದಲಾವಣೆಗಳನ್ನು ಗಮನದಲ್ಲಿಟ್ಟುಕೊಂಡು, ಬಿಜೆಪಿಯ ಅತ್ಯಂತ ಉತ್ತಮ ಗಳಿಕೆಯನ್ನು ಮನದಲ್ಲಿಟ್ಟುಕೊಂಡು ಮಾಡಿದ ಲೆಕ್ಕಾಚಾರ. ಇನ್ನೊಂದು ಅಂಶವೂ ಬಿಜೆಪಿಯ ಪರವಾಗಿ ಕೆಲಸ ಮಾಡಬಹುದು. ಅದು ಸುಮಾರು 15 ಕೋಟಿಯಷ್ಟು ಇರಬಹುದಾದ ಹೊಸ ಮತದಾರರ ಸಂಖ್ಯೆ. ಅಧ್ಯಯನಗಳ ಪ್ರಕಾರ ಇವರಲ್ಲಿ ಹೆಚ್ಚಿನವರು ದಕ್ಷಿಣ ಭಾರತದಲ್ಲಿ ನಗರಗಳಲ್ಲೂ, ಉತ್ತರ ಭಾರತದ ಉತ್ತರ ಪ್ರದೇಶ ಮತ್ತು ಬಿಹಾರಗಳ ಗ್ರಾಮೀಣ ಪ್ರದೇಶಗಳಲ್ಲೂ ಇದ್ದಾರೆ. ದಕ್ಷಿಣ ಭಾರತದಲ್ಲಿ ಕರ್ನಾಟಕ ಬಿಟ್ಟರೆ ಬೇರೆ ಕಡೆ ಬಿಜೆಪಿಗೆ ನೆಲೆಯಿಲ್ಲ, ಕರ್ನಾಟಕದ ಪರಿಸ್ಥಿತಿ ಅದರ ಪರವಾಗಿಲ್ಲ, ಇನ್ನು ಉತ್ತರದ ಗ್ರಾಮೀಣ ಭಾಗವು ಬಿಜೆಪಿಯ ಕಡೆಗಿಲ್ಲ; ಬದಲಿಗೆ ಜಾತಿ ವಿಭಜೀಕರಣದ ಕಾರಣದಿಂದ ಅದಕ್ಕೆ ಲಾಭ ತಂದುಕೊಡುವುದಿಲ್ಲ.

ಇದಲ್ಲದೇ ಸುಮಾರು 145 ಕ್ಷೇತ್ರಗಳಲ್ಲಿ ಮುಸ್ಲಿಮರು ಗಮನಾರ್ಹ ಸಂಖ್ಯೆಯಲ್ಲಿದ್ದಾರೆ. ಅವರಲ್ಲಿ ಈ ಹಿಂದೆ ಮತಗಟ್ಟೆಯ ತನಕ ಬರದವರೂ ಈ ಸಾರಿ ಬಂದು ಮೋದಿಯ ವಿರುದ್ಧ ಮತ ಚಲಾಯಿಸುವ ಸಾಧ್ಯತೆಯೇ ಹೆಚ್ಚು, 180 ಕ್ಷೇತ್ರಗಳಲ್ಲಿ ಅವರ ಪ್ರಮಾಣವು ಶೇ.11ರಿಂದ ಶೇ.35ರವರೆಗೆ ಇದೆ. ಅಂದರೆ ಮೋದಿಯೇ ಮುಸ್ಲಿಂ ಮತಗಳ ಧ್ರುವೀಕರಣಕ್ಕೆ ಕಾರಣನಾಗುತ್ತಾನೆ. ಈ ಎಲ್ಲಾ ಕಾರಣಗಳ ಹೊರತಾಗಿ, ಯಾವುದಾದರೂ ಉನ್ಮಾದದ ಅಲೆ ದೇಶದಾದ್ಯಂತ ಬೀಸಿ ಬದಲಾವಣೆಗೆ ಕಾರಣವಾಗಬೇಕು. ಆ ಸಾಧ್ಯತೆಯೇನೂ ಕಾಣುತ್ತಿಲ್ಲ, ಹೀಗಾಗಿ ಮೋದಿ ಈ ಸಾರಿಯೇ ಗೆದ್ದುಬಿಡಬಹುದೆಂದು ಆತಂಕ ಪಡುವ ಅಗತ್ಯವಿಲ್ಲ.

ಆದರೆ, ಆತಂಕ ಪಡಲು ಬೇರೆ ಕಾರಣಗಳಿವೆ. ಮೋದಿ ಈ ಸಾರಿ ಗೆಲ್ಲದಿರಬಹುದು. ಇದು ಸೆಮಿಫೈನಲ್ ಮಾತ್ರ ಆಗಿದ್ದು, ಫೈನಲ್‌ನಲ್ಲಿ ಗೆಲ್ಲುವ ಎಲ್ಲಾ ಸಾಧ್ಯತೆಗಳಿವೆ. ಈ ಚುನಾವಣೆಯಲ್ಲಿ ಯುಪಿಎ 3 ಆರಿಸಿ ಬರಬಹುದು. ಅಥವಾ ಯಾವುದಕ್ಕೂ ಬಹುಮತ ಬರದೇ ಅಸ್ಥಿರ ಸರ್ಕಾರ ಏರ್ಪಡಲೂಬಹುದು. 1999ರಲ್ಲಿ ವಾಜಪೇಯಿ ಪ್ರಧಾನಿಯಾಗುವುದಕ್ಕೆ ಮುನ್ನ ಇದ್ದ ಅಸ್ಥಿರ ಸರ್ಕಾರವೇ ಎನ್‌ಡಿಎ ಸರ್ಕಾರಕ್ಕೆ ದಾರಿ ಮಾಡಿಕೊಟ್ಟಿತ್ತು, ಇನ್ನು ಕಾಂಗ್ರೆಸ್. ಅದು ಈಗಾಗಲೇ ದೇಶದ ಜನಕ್ಕೆ ಸಾಕು ಸಾಕು ಮಾಡಿದೆ. ಈಗಿರುವ ಆರ್ಥಿಕ ಬಿಕ್ಕಟ್ಟನ್ನು ಜನಸಾಮಾನ್ಯರ ಮೇಲೆ ರವಾನಿಸಿ, ಕಾರ್ಪೋರೇಟ್ ಕಂಪೆನಿಗಳನ್ನು ರಕ್ಷಿಸಲು ಎಲ್ಲಾ ರೀತಿಯ ಸರ್ಕಸ್‌ಗಳನ್ನು ಈಗಲೂ ಮಾಡುತ್ತಿದೆ; ಮುಂದೆಯೂ ಮಾಡುತ್ತದೆ. ಹಾಗಾಗಿ, ಜನರಿಗೆ ಫ್ಯಾಸಿಸ್ಟರೇ ಆಪ್ಯಾಯಮಾನವಾಗಿ ಕಾಣಬಹುದು. ಫ್ಯಾಸಿಸಂನ ಅಪಾಯ ಎಷ್ಟು ತೀವ್ರವಾಗಿದೆ ಎಂದರೆ, ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರವಿರುವ ಕರ್ನಾಟಕದಲ್ಲಿ ಲೇಖಕರನ್ನು ಬಂಧಿಸಲಾಗುತ್ತಿದೆ; ಅಲ್ಪಸಂಖ್ಯಾತರ ಮೇಲೆ ಕರಾವಳಿಯಲ್ಲಿ ದಾಳಿಗಳು ಹೆಚ್ಚಾಗುತ್ತಿವೆ; ನೈತಿಕ ಪೊಲೀಸ್‌ಗಿರಿಯನ್ನು ಪೊಲೀಸರೇ ಮಾಡುತ್ತಿದ್ದಾರೆ. ಖಡ್ಗ ದೀಕ್ಷೆ ಕೊಡುತ್ತೇವೆಂದು ಬಹಿರಂಗವಾಗಿ ಸಾರಿದವರ ಮೇಲೆ ಎಫ್‌ಐಆರ್ ಸಹ ದಾಖಲಾಗಿಲ್ಲ; ಅತ್ಯಾಚಾರ ಮತ್ತು ಕೊಲೆ ಪ್ರಕರಣಕ್ಕೆ ಸಂಬಂಧಪಟ್ಟವರ ಪರವಾಗಿ ಮಂತ್ರಿಗಳೇ ಬಹಿರಂಗ ವಕಾಲತ್ತು ವಹಿಸುತ್ತಾರೆ.

ಆದ್ದರಿಂದ ಈ ಸಂಘರ್ಷ ಬಿಜೆಪಿ ಮತ್ತು ಕಾಂಗ್ರೆಸ್ ನಡುವೆ ನಡೆಯುವ ಸಮರವಲ್ಲ, ಅದರಲ್ಲಿ ಕಾಂಗ್ರೆಸ್ ಸಾಂದರ್ಭಿಕವಾಗಿ ಗೆದ್ದು ಬಿಡಬಹುದಾದರೂ, ಸೋಲುವುದು ಸಾಮಾನ್ಯ ಜನರೇ. ಹಾಗಾಗಿ ಜನರು ಯಥಾಸ್ಥಿತಿವಾದಿಗಳ ವಿರುದ್ಧದ ನಿಜ ಪರ್ಯಾಯದ ಕಡೆಗೆ ಸಾಗುವುದು ಅನಿವಾರ್ಯವಾಗಿದೆ.



ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ಶಿಷ್ಟ ಆರ್ಯರು-ಅನಾರ್ಯ ಅಸುರರು!

ನಾನು ಸಣ್ಣವನಿದ್ದಾಗ ದಸರಾ ಹಬ್ಬದ ಸಂದರ್ಭದಲ್ಲಿ ಉತ್ತರ ಭಾರತದ ನಮ್ಮ ಕುಟುಂಬದ ಮಿತ್ರರೊಬ್ಬರು ನಮ್ಮ ಮನೆಯ ಹಿರಿಯರಾದ ನನ್ನ ಅಜ್ಜಿ ಪಾರ್ವತಮ್ಮನವರ ಕೈಗೆ ಸ್ವೀಟ್ ಪ್ಯಾಕೊಂದನ್ನು ಕೊಟ್ಟು ನಮಸ್ಕರಿಸಿ ಆಶೀರ್ವಾದ ಪಡೆದರು. ಕೊಂಚ ವಾಚಾಳಿಯಾಗಿದ್ದ ಅವರು ತಾವು ಕೊಟ್ಟ ಸಿಹಿಯನ್ನು ತಿನ್ನಿ ಎಂದು ಹೇಳಿ, "ಅಮ್ಮಾ, ರಾಮ ರಾವಣನನ್ನು ಕೊಂದ ವಿಜಯವನ್ನು ಇಲ್ಲಿ ಸಿಹಿಯನ್ನು ತಿಂದು ಸಂಭ್ರಮಿಸುವ." ಎಂಬರ್ಥದಲ್ಲಿ ಮಾತಾಡಿರುವ ಹಾಗೆ ನನ್ನ ನೆನಪು.

ಆದರೆ, ನಮ್ಮಜ್ಜಿ ಪ್ರತಿಕ್ರಿಯೆ ನೀಡಿದ್ದು ಮಾತ್ರ ನನಗೆ ಇನ್ನೂ ಚೆನ್ನಾಗಿ ನೆನಪಿದೆ.

"ರಾಮ ರಾವಣನನ್ನು ಕೊಂದರೆ ನನಗೇಕೆ ಸಂತೋಷ? ನನಗೆ ಈ ಸಿಹಿ ಬೇಡ!" ಅವರ ದೃಷ್ಟಿಯಲ್ಲಿ, ರಾವಣನೇನೂ ನಮಗೆ ಶತ್ರುವಲ್ಲ, ನಾವೇಕೆ ಸಂಭ್ರಮಿಸಬೇಕು? ಆದರೆ, ಆ ಉತ್ತರ ಭಾರತದ ಮಿತ್ರರು, "ರಾವಣನು ಅಸುರ. ರಾಮನು ದೇವ." ಎಂದೇನೋ ಮಾತಾಡಿದರು. ಅದರಿಂದ ನಮ್ಮಜ್ಜಿಯ ಮನವೊಲಿಸ ಲಾಗಲಿಲ್ಲ, ವಾಸ್ತವವಾಗಿ ನಮ್ಮ ಅಜ್ಜಿಯ ನಿಲುವಿನ ಹಿಂದೆ ಅಂತಹ ವೈಚಾರಿಕತೆಯೇನೂ ಇರಲಿಲ್ಲ, ಅವರೂ ಶಿವನನ್ನು ಆರಾಧಿಸುವವರಾಗಿದ್ದು, ರಾವಣನೂ ಶಿವಭಕ್ತನಾಗಿರುವುದೇ ಮುಖ್ಯ ಕಾರಣವಾಗಿದ್ದಿರಬಹುದು. ನನಗೆ ತಿಳಿದಂತೆ ನಮ್ಮ ಮನೆಯಲ್ಲಿ ಶಿವನ ಮೂಲದ ದೇವತೆಗಳ ಹೊರತಾಗಿ ವೈಷ್ಣವ ದೇವತೆಗಳನ್ನೆಂದೂ ಪೂಜಿಸಿರುವುದು ನೆನಪಿಲ್ಲ, ರಾಮನವಮಿಯು ದಿನದಂದೇ ಹುಬ್ಬಳ್ಳಿಯ ಸಿದ್ಧಾರೂಢರು ಹುಟ್ಟಿದ ದಿನವಾದ್ದರಿಂದ, ನಮ್ಮ ಮನೆಯಲ್ಲಿ ರಾಮನವಮಿಯ ದಿನ ಸಿದ್ಧಾರೂಢರ ಪೂಜೆ ಮಾಡಿ ಶಕ್ತ್ಯಾನುಸಾರ ಸಿಹಿ ಮಾಡಿ ಹಂಚುತ್ತಿದ್ದರು.



ಹಾಗೆಂದು ಕಟುವಾದ ಶೈವವಾದಿಗಳೇನೂ ಆಗಿರದಿದ್ದರೂ, ವೈಷ್ಣವಾರಾಧನೆ ಅಭ್ಯಾಸದಲ್ಲಿ ಇರಲಿಲ್ಲ, ಸಿದ್ಧಾರೂಢರು ತಮ್ಮ ಇಷ್ಟ ಲಿಂಗವನ್ನು ತ್ಯಜಿಸಿ ಭವಿಯೆಂದು ಆಗಿನ ಲಿಂಗಾಯತರಿಂದ ದೂರಲ್ಪಟ್ಟವರೂ, ದಂಡನೆಗೆ ಒಳಗಾಗಿದ್ದವರೂ ಆಗಿದ್ದರು. ಸಿದ್ಧಾರೂಢರ ಗಾಢ ಪ್ರಭಾವ ನಮ್ಮ ಮನೆಯಲ್ಲಿತ್ತು, ನಮ್ಮ ಅಜ್ಜಿ, ತಾಯಿಯರೂ ಇಷ್ಟಲಿಂಗವನ್ನು ಧರಿಸಿಕೊಂಡೇ ಇರಲು ಇಷ್ಟ ಪಡದೇ ದೇವರಗೂಡಿಗೆ ಸೇರಿಸಿಬಿಟ್ಟಿದ್ದರು. ನನಗೆ ಲಿಂಗಧಾರಣೆಯ ವಿಧಿಯನ್ನೂ ವಿಧಿಸಲಿಲ್ಲ, ಅವರ ದೃಷ್ಟಿಯಲ್ಲಿ ಸಾಂಪ್ರದಾಯಕವಾದ ವಿಧಿವಿಧಾನಗಳನ್ನು ಆಚರಿಸುವವನು ಶ್ರೇಷ್ಠ ಎಂದು ಎಂದೂ ಅನ್ನಿಸಿರಲಿಲ್ಲ, ಇದು ನನಗೆ ಆರ್ಯ – ಅನಾರ್ಯ ಪರಿಕಲ್ಪನೆಯನ್ನು ವೈಚಾರಿಕವಾಗಿ ನೋಡಲು ಸಾಧ್ಯವಾಯಿತು.

ಆರ್ಯನೆಂದರೆ- ಯೋಗ್ಯ, ಉಚ್ಚಕುಲದವ, ಉದಾರ, ಉತ್ತಮ, ಶ್ರೇಷ್ಠನೆಂಬ ಅರ್ಥಗಳ ಜೊತೆಗೆ ಕುಲೀನ ಮನುಷ್ಯ, ಪೂಜ್ಯ, ಯಜಮಾನ, ಗುರು, ಆಚಾರ್ಯ, ಗೆಳೆಯ, ಮಾವ, ಒಕ್ಕಲಿಗ ಇತ್ಯಾದಿ ಅರ್ಥಗಳನ್ನೂ ಕೊಡುತ್ತದೆ. ಅನಾರ್ಯನೆಂದರೆ ಆರ್ಯನಲ್ಲದವನು. ಅಂದರೆ ಅದರ ಅರ್ಥ ಅಯೋಗ್ಯ ಕೀಳುಕುಲದವ ಇತ್ಯಾದಿ ನಕಾರಾತ್ಮಕವಾದುದಲ್ಲ, ಈ ವಿಷಯದಲ್ಲಿ ಸ್ವಲ್ಪ ಸೂಕ್ಷ್ಮವಾಗಿ ಪರಿಶೀಲಿಸುವ.

ಉದಾಹರಣೆಗೆ, ನನ್ನ ವಿಚಾರಕ್ಕೆ ಗೋಚರವಾದಂತೆ ಸತ್ಯಕ್ಕೆ ವಿರುದ್ಧವಾದ ಪದ ಅಸತ್ಯವಲ್ಲ, ಮಿಥ್ಯ! ಅಸತ್ಯವೆಂದರೆ ಸತ್ಯವಲ್ಲದ್ದು. ಎಂದರೆ ಮಿಥ್ಯವಾಗಿರಬೇಕೆಂದಿಲ್ಲ, ಅಸತ್ಯವೆಂದರೆ ಮಿಥ್ಯವೆಂದಲ್ಲ, ಸತ್ಯವಿಲ್ಲದ್ದು, ಸತ್ಯವಲ್ಲದ್ದು ಅಲ್ಲ, ಇಲ್ಲ- ಎಂದರೆ (ಭೌತಿಕವಾಗಿ) ಇಲ್ಲದಿರುವಿಕೆ. ಅಲ್ಲ- ಎಂದರೆ (ಅಭಿಪ್ರಾಯ ರೂಪದಲ್ಲಿ) ನಿರಾಕರಿಸುವಿಕೆ. ಹಾಗೆ ನೋಡಿದರೆ ಈ ಎರಡೂ ಪದಗಳಿಗೆ ವಾಸ್ತವ ನೆಲೆಗಟ್ಟಿನ ಬೆಂಬಲವಿಲ್ಲ, ಸತ್ಯವು ಇಲ್ಲದಿರುವ ಮಾತ್ರಕ್ಕೆ ಅದು ಮಿಥ್ಯವಾಗುವುದಿಲ್ಲ, ಹಾಗೆಯೇ ಸತ್ಯವನ್ನು ನಿರಾಕರಿಸಿದರೂ ಮಿಥ್ಯೆಯನ್ನು ಹೊಂದಿದವನು ಎಂದೇನೂ ಅಲ್ಲ, ವಸ್ತು(ಪದ)ವನ್ನು ಸಕಾರಾತ್ಮಕ ಧೋರಣೆಯಲ್ಲಿ ಪ್ರಸ್ತುತಪಡಿಸಿ, ಅದರ ವಿರುದ್ಧವಾದುದನ್ನು ನಕಾರಾತ್ಮಕವಾಗಿ ಪ್ರಕಟಿಸುವುದು ಸರಿಯಾದ ಪದ್ಧತಿಯಲ್ಲ, ಹಾಗೆಯೇ ದೋಷವಿರುವುದು ಆರ್ಯ ಮತ್ತು ಅನಾರ್ಯ ಪದಗಳಲ್ಲಿ ಅಲ್ಲ, ಅವುಗಳನ್ನು ಬಳಸುವವರ ಧೋರಣೆಯಲ್ಲಿ!

ಆರ್ಯ ಎಂಬ ಹೆಸರನ್ನು ಜನಾಂಗೀಯವಾಗಿ ಕಂಡಾಗ, ಆ ನಿರ್ದಿಷ್ಟ ಜನಾಂಗಕ್ಕೆ ಸೇರದಿರುವವನು ಅನಾರ್ಯನೆಂದು, ಆ (ಆರ್ಯ) ಜನಾಂಗದವರು ಹೇಳಬಹುದು. ಆದರೆ, ಆ ಜನಾಂಗಕ್ಕೆ ಸೇರದವನು ತನ್ನನ್ನು ಅನಾರ್ಯನೆಂದು ಹೇಳಿಕೊಳ್ಳುವುದರಲ್ಲಿ ಅಥವಾ ಗುರುತಿಸಿಕೊಳ್ಳುವುದರಲ್ಲಿ ಅರ್ಥವೇ ಇಲ್ಲ, ಇನ್ನೂ ಮುಂದುವರಿದು ಆರ್ಯ ಎಂಬ ಪದಾರ್ಥ(ಪದದ ಅರ್ಥ)ವನ್ನು ಅವಲೋಕಿಸಿದರೆ ಅದು ಗುಣವಾಚಕವಾಗಿ ಯಾರಿಗಾದರೂ ಬಳಸಬಹುದು.

ಒಂದು ಸಕಾರಾತ್ಮಕವಾದ ಗುಣವಾಚಕವೊಂದನ್ನು ತಮ್ಮ ಜನಾಂಗದ ಹೆಸರನ್ನಾಗಿರಿಸಿಕೊಂಡು, ತಮ್ಮ ಜನಾಂಗದ ಹೊರತಾದ ಎಲ್ಲಾ ಜನಾಂಗದವರನ್ನು ನಕಾರಾತ್ಮಕವಾಗಿ ನೋಡುವ ಧೋರಣೆಯೇ ಆರ್ಯ ಜನಾಂಗದ ಮೊದಲ ತಪ್ಪು ಹಾಗೂ ಅಸಹನೀಯವಾದ, ಅಕ್ಷಮ್ಯವಾದ ನಿಲುವಿನ ಪ್ರಕಟಣೆಯಾಗಿದ್ದು, ಹಾದೇ ಇತರರಿಗೆ ಆ ಜನಾಂಗದ ಕಂಗಣ್ಣಿನಿಂದ ನೋಡಲೂ ಆಸ್ಪದವಾಗಿದ್ದು,

ಕೇವಲ ಹೆಸರಿನ ಸಂಕೇತಕ್ಕೇ ಗುಣಾರೋಪ ಮಾಡಿಕೊಂಡು, ತಮ್ಮ ಸಮಾಜಕ್ಕೆ ಶಿಷ್ಟ ಸಮಾಜವೆಂದೂ, ತಮ್ಮದಲ್ಲದ ಸಮಾಜವನ್ನು, ಸಂಸ್ಕೃತಿಯನ್ನು ದುಷ್ಟ-ವೆಂದೂ ನಿರೂಪಿಸಲು ಯತ್ನಿಸುವುದು ಒಂದು ಅತ್ಯಂತ ಅಪಕ್ವವಾದ, ಅವೈಜ್ಞಾನಿಕವಾದ, ಅವೈಚಾರಿಕ ಮಾದ ಕುತರ್ಕ. ನಾನು ಒಳ್ಳೆಯವನು. ನನ್ನ ಹೊರತು ಅಥವಾ ನಾನಲ್ಲದ ಪರೆಲ್ಲರೂ ಕೆಟ್ಟವರೆಂದರೆ ನೀವು ಹೇಗೆ ಸಹಿಸುವಿರಿ! ಇಂತಹ ವಿಚಾರದ ಪರಿಕಲ್ಪನೆಯೇ ವಿಚಿತ್ರವಾದರೂ ವ್ಯಾಪಕವಾಗಿ ಬಳಕೆಯಲ್ಲಿದೆ ಎಂದರೆ ಎಂತಹ ಕುಚೋದ್ಯ!

ಅಸುರರ ವಿಷಯದಲ್ಲಿ, ದಾನವರ ವಿಷಯದಲ್ಲಿ ಆರ್ಯರು (ದೇವ-ರು) ಹೀಗೇ ವರ್ತಿಸಿದ್ದಾರೆಂಬುದು ಒಂದು ವೈಚಾರಿಕವಾಗಿ ಆಘಾತಕರ ಸಂಗತಿ. ಆರ್ಯರು, ಆರ್ಯ ಬರಹಗಾರರೆಲ್ಲರೂ ಅಸುರರ ಬಗ್ಗೆ ಬಹು ನಿಂದನಾತ್ಮಕವಾದ ಪರಿಕಲ್ಪನೆಯನ್ನು ಸಮಾಜಕ್ಕೆ ನೀಡುತ್ತಾ ಬಂದಿರುವುದು ಒಂದು ಸಾಂಸ್ಕೃತಿಕ ಶೋಷಣೆ.

ಶಿಷ್ಟ ಸಮಾಜದ ಪರಿಕಲ್ಪನೆ

ರಾಮಕೃಷ್ಣಾಶ್ರಮವೇ ಮೊದಲಾದ ಧಾರ್ಮಿಕ ಮತ್ತು ಅಧ್ಯಾತ್ಮಿಕ ಗ್ರಂಥಗಳನ್ನು ಬರೆದು, ಪ್ರಕಟಗೊಳಿಸುವ ಎಷ್ಟೋ ಪ್ರಕಾಶನಗಳು ಇಂದಿಗೂ ದೇವ ಎಂಬುದು ಸಾತ್ವಿಕವೂ, ಅಸುರ ಎಂಬುದು ತಾಮಸಿಕವೂ ಎಂದು ಸಕಾರಾತ್ಮಕ ಮತ್ತು ನಕಾರಾತ್ಮಕ ಧೋರಣೆಗಳಲ್ಲಿ ವ್ಯಾಖ್ಯಾನಗಳನ್ನು ನೀಡುತ್ತಾ ಪುಸ್ತಕಗಳನ್ನು ಪ್ರಕಟಿಸುತ್ತಿರುವುದು ಆಶ್ಚರ್ಯವೆನಿಸುತ್ತದೆ. ರಾಮಕೃಷ್ಣಾಶ್ರಮವೇ ಮೊದಲಾದ ಅನೇಕ ಆಶ್ರಮಗಳಲ್ಲಿ ಜಾತಿವಾದಗಳಿಲ್ಲ, ಎಲ್ಲರನ್ನೂ ಸಮಭಾವ, ಸಮದೃಷ್ಟಿಯನ್ನು ಆಧ್ಯಾತ್ಮಿಕವಾಗಿ ಕಾಣುವಂತಹ ಮನೋಭಾವಗಳನ್ನು ಬೆಳೆಸುವಂತಹ ಕೈಂಕರ್ಯಗಳನ್ನು ಮಾಡುತ್ತಿದ್ದರೂ, ಇವುಗಳನ್ನು ಕೆಡಿಸಿರುವಂತಹ, ಪೂರ್ವಾಗ್ರಹಗಳಿಂದ ಕೂಡಿರುವ ಧಾರ್ಮಿಕ ಗ್ರಂಥಗಳನ್ನು ಐತಿಹಾಸಿಕ ದೃಷ್ಟಿಯಿಂದ ವಿವೇಚಿಸುವ ಸಾಹಸವೇಕೆ ಮಾಡಿಲ್ಲ ಎಂಬುದು ನನ್ನ ಪ್ರಶ್ನೆ. ಬಹುಶಃ ಐತಿಹಾಸಿಕ ಅಧ್ಯಯನ, ಚಾರಿತ್ರಿಕ ವಿಶ್ಲೇಷಣೆ ಅವರ ಕ್ಷೇತ್ರವಲ್ಲದಿರಬಹುದು. ಬರಿಯ ತಾತ್ವಿಕ ಅಥವಾ ಆಧ್ಯಾತ್ಮಿಕವೇ ಅವರ ಕ್ಷೇತ್ರವೆನಿಸಿದರೂ ಐತಿಹಾಸಿಕವಾಗಿ ತಿರುಚಿರಬಹುದಾದ ಗ್ರಂಥಗಳ ಬಗ್ಗೆ ಗಮನ ಕೊಡುವುದರಿಂದ, ಅಸುರ, ದೈತ್ಯ ರಾಕ್ಷಸ ಇತ್ಯಾದಿಗಳ ವಿಷಯದಲ್ಲಿ ಪರೋಕ್ಷವಾಗಿ ಆಗುತ್ತಿರುವ ಜನಾಂಗೀಯ ನಿಂದನೆ ಆಗದೇನೋ.

ಸುರರು ಮತ್ತು ಅಸುರರು

ಪ್ರಾಚೀನ ವೈದಿಕ ಗ್ರಂಥಗಳ ಅನುಸಾರವಾಗಿ ದೇವ-ರೂ ('ದೇವರು' ಅಲ್ಲ, ದೇವ- ಈ ಪದದ ಬಹುವಚನ ಪ್ರಯೋಗ), ದೈತ್ಯರು; ಈ ಇಬ್ಬರೂ ದೇವತೆಗಳೆಂದೇ ಪರಿಗಣಿಸಿದ್ದಿರಬಹುದು. ದೇವ ಮತ್ತು ದೈತ್ಯರ ನಡುವೆ (ದೈವತ್ವದ) ಅಧಿಕಾರಕ್ಕಾಗಿ ಪೈಪೋಟಿಯಿತ್ತು, ನಂತರದ ವೈದಿಕ ಗ್ರಂಥಗಳಲ್ಲಿ ದೈತ್ಯರನ್ನು ನಕಾರಾತ್ಮಕವಾಗಿ ನೋಡಲಾರಂಭಿಸಿದರೆ, ಪರ್ಷಿಯಾದಲ್ಲಿ ವೇದಕ್ಕೆ ಪ್ರತಿಯಾಗಿ ದೊರಕಿದ ಅವಾಸ್ತಾದಲ್ಲಿ ದೇವ-ರನ್ನು ಕಡೆಗಣಿಸಲಾಗಿತ್ತು, ನಂತರದ ಪುರಾಣಗಳಲ್ಲಿ ದೇವ ಮತ್ತು ದಾನವರಿಬ್ಬರಿಗೂ ಕಶ್ಯಪನೇ ತಂದೆಯೆಂದೂ ಬಿಂಬಿಸಲಾಯಿತು. ದಕ್ಷ ಪ್ರಜಾಪತಿಯ ಅರವತ್ತೂ ಹೆಣ್ಣು ಮಕ್ಕಳನ್ನು ತಾನೇ ಮದುವೆಯಾದ ಕಶ್ಯಪನು ದೇವ, ದಾನವ, ಮಾನವ ಮತ್ತು ಇತರ ಎಲ್ಲಾ ಪ್ರಾಣಿ (ಗಣ?)ಗಳಿಗೂ ತಂದೆಯೆಂದೆನಿಸಿದನು.

ವಿಷ್ಣು ಪುರಾಣದಲ್ಲಿ ಸ್ವಾರಸ್ಯಕರವಾದ ವಿಷಯವೊಂದನ್ನು ಹೇಳುವರು. ಸಮುದ್ರಮಂಥನದ ಕಾಲದಲ್ಲಿ ಸುರೆ ಅಥವಾ ಮದ್ಯದ ದೇವತೆಯಾಗಿ



ಹೊರಹೊಮ್ಮಿದ ವಾರುಣಿಯನ್ನು ದೇವ-ರು ಸ್ವೀಕರಿಸಿದ್ದರಿಂದ ಸುರರು ಎಂದೆನಿಸಿದರು. ಹಾಗೆಯೇ ಆ ಸುರೆಯನ್ನು ಅಥವಾ ವಾರುಣಿಯನ್ನು ಸ್ವೀಕರಿಸಲು ನಿರಾಕರಿಸಿದ್ದರಿಂದ ದಾನವರು ಅಸುರರು ಎಂದೆನಿಸಿದರು ಎಂಬುದು.

ಫ್ರೆಂಚ್ ಇತಿಹಾಸಕಾರ ಅಲೈನ್ ಡೇನಿಲೋ ಹೇಳುವಂತೆ, ಈ ದೇವ-ರು ದಾನವರನ್ನು ನಾಶಪಡಿಸಲು ಯತ್ನಿಸುತ್ತಿದ್ದದ್ದು, ಅವರು ಪಾಪಿಗಳು ಅಥವಾ ದುಷ್ಟರೆಂದೋ ಅಲ್ಲ, ಬದಲಾಗಿ, ಅಸುರರ ಶಕ್ತಿ, ನೈತಿಕತೆ, ಜ್ಞಾನ; ಇವುಗಳಿಂದಾಗಿ ಆರ್ಯರ ದೇವ-ರು ಕೀಳರಿಮೆಯನ್ನು ಹೊಂದಿದ್ದರು. ಇಂಥಾ ದೇವ-ರನ್ನು ಸೇವಿಸುತ್ತಿದ್ದರೆಂಬ ಕಾರಣಕ್ಕೆ ಪ್ರಹ್ಲಾದನಂತಹ ದಾನವ ಕುಲದಲ್ಲಿ ಹುಟ್ಟಿದವರಿಗೂ ಅವರು 'ಬ್ರಾಹ್ಮಣ'ರೆಂದು ಪದವಿ ನೀಡಿದ್ದರು.

ಶಿವಪುರಾಣದ ನಂತರದ ಪುರಾಣಗಳಲ್ಲಿ ನ್ಯಾಯಪರರೂ, ನೈತಿಕವಾಗಿ ಉತ್ತಮರೂ, ಒಳ್ಳೆಯವರೆಂದೂ ಬಿಂಬಿತರಾಗಿದ್ದ ಅಸುರರು, ಕಾಲಕ್ರಮೇಣ ಅಹಂಕಾರಿಗಳೂ, ಯಜ್ಞಗಳನ್ನು ಮಾಡದವರೂ, ದೈವೀ ನಿಯಮಗಳನ್ನು ಮೀರುವವರೂ, ಪವಿತ್ರ ಸ್ಥಳಗಳಿಗೆ ಯಾತ್ರಾರ್ಥಿಗಳಾಗಿ ಹೋಗದವರೂ, ಜೀವ ಜಂತುಗಳನ್ನು ಹಿಂಸಿಸುವವರೂ, ದುಷ್ಟರೂ, ತಮ್ಮ ಪಾಪಗಳಿಂದ ಪ್ರಾಯಶ್ಚಿತ್ತ ಮಾಡಿಕೊಳ್ಳದವರೂ ಇತ್ಯಾದಿಗಳನ್ನು ಹೇಳುತ್ತಾ ದೇವ-ರನ್ನು ವಿರೋಧಿಸುವ ಅವರ ಬಗ್ಗೆ ಗೊಂದಲಗಳನ್ನು ಉಂಟುಮಾಡುವಂತೆ, ಕೆಟ್ಟ ಅಭಿಪ್ರಾಯಗಳು ಮೂಡುವಂತೆ ಆರ್ಯರ ಪರವಾದ ಪುರಾಣಿಕರು ಬರೆಯತೊಡಗಿದರು. ಹೊಸ ರಾಜಕೀಯ ನಿಲುವುಗಳೂ, ಸಾಮಾಜಿಕ ವಿಕಾಸವೂ ಈ ಬಗೆಯ ಬರವಣಿಗೆಗಳಿಗೆ ಮತ್ತು ಅಸುರರನ್ನು ನೋಡುವ (ನೈತಿಕ) ದೃಷ್ಟಿಗೆ ಕಾರಣವಾಗಿರಬಹುದು.

ಅದೇನೇ ಆಗಲಿ, ಶಕ್ತಿಶಾಲಿಯಾದ, ಸೈದ್ಧಾಂತಿಕವಾಗಿ ಚತುರರೂ, ದಾರ್ಶನಿಕರೂ ಆದ ಅಸುರರನ್ನು ಅಷ್ಟು ಸುಲಭವಾಗಿ ಕಡೆಗಣಿಸಲಾಗಲಿಲ್ಲ, ಜನಾಂಗೀಯವಾಗಿ ಅವರನ್ನು ಒಪ್ಪಿಕೊಳ್ಳಲಾಗದಿದ್ದರೂ ಆರ್ಯರಿಗೆ ಅವರನ್ನು ಸಂಪೂರ್ಣವಾಗಿ ನಿರಾಕರಿಸಲಾಗಲಿಲ್ಲ, ಆದಿಮ ಸಂಸ್ಕೃತಿಯವರು ಮಾನ್ಯತೆ ನೀಡುತ್ತಿದ್ದ ಶಕ್ತಿ (ಸ್ಪಿರಿಟ್)ಗಳಿಗೆ, ಭೂತಗಳಿಗೆ ಅಸುರರನ್ನು ಸಮೀಕರಿಸಿದ್ದೂ ಉಂಟು. ಆರ್ಯರು ಅಂತಹ ಶಕ್ತಿಗಳನ್ನು ಕ್ಷುದ್ರ ಶಕ್ತಿಗಳೆಂದು ಕರೆದರು. ಶಕ್ತಿ ಉಪಾಸನೆಯಲ್ಲಿ ಸಾತ್ವಿಕ, ರಾಜಸಿಕ ಮತ್ತು ತಾಮಸಿಕ ಏನೇ ದೃಷ್ಟಿಕೋನಗಳಿಂದ ವಿಶ್ಲೇಷಿಸಿದರೂ, ಅಸುರರದೆಂದು ಹೇಳಲಾದ ಮಾಯಾಸಿದ್ಧಿಗಳನ್ನೂ, ಐಂದ್ರಜಾಲಾದಿ ಚಮತ್ಕಾರಗಳನ್ನೂ ವರ್ಣಿಸುವ ಗ್ರಂಥಗಳಿಗೆ ಡಾಮರವೆಂದು ಕರೆಯುತ್ತಾರೆ. ಹಾಗೆಯೇ ಭ್ರಮಾತ್ಮಕವಾದ ಸ್ಥಿತಿಗಳನ್ನೂ, ಮಾಯಾಸೃಷ್ಟಿಗಳನ್ನು ವಿವರಿಸುವ ತಂತ್ರಶಾಸ್ತ್ರದ ಗ್ರಂಥಗಳಿಗೆ ಶಂಬರಗಳೆಂದು ಕರೆಯುತ್ತಾರೆ. ಇಲ್ಲಿ ಡಾಮರ ಮತ್ತು ಶಂಬರಗಳು ಅಸುರೀ ನಾಮಗಳು ಎಂಬುದನ್ನು ಗಮನಿಸಿ.


ಅಸುರರ ಜ್ಞಾನದ ಕೊಡುಗೆಗಳನ್ನು, ಅವರ ನಾಯಕ ಗುಣದ ಶಕ್ತಿ ಪ್ರದರ್ಶನಗಳನ್ನು ನಿರಾಕರಿಸಲಾಗದೇ ಹೋದಾಗ, ಅವರು ಜನಾಂಗೀಯವಾಗಿ ಆರ್ಯರಲ್ಲದೇ ಹೋಗಿದ್ದರೂ, ಅಂತಹ ಪುರಾತನ ನಾಯಕರನ್ನು ವಿಷ್ಣುವಿನ ಅವತಾರವೆಂದೂ ಐತಿಹ್ಯಗಳಲ್ಲಿ ಸೇರಿಸಲ್ಪಟ್ಟಿತೆಂದು ಅಲೈನ್ ಡೇನಿಲೋ ಅಭಿಪ್ರಾಯಪಡುತ್ತಾನೆ.

ಸುರ ಮತ್ತು ಅಸುರರ ಮಧ್ಯೆ ಎಷ್ಟೇ ಕಾಳಗಗಳು ಆಗಿದ್ದರೂ, ಮುಂದಿನ ಕೃತಿಗಳಲ್ಲಿ ಆರ್ಯ ಮತ್ತು ಅಸುರರ ನಡುವೆ ಸಂಧಾನ ಪ್ರಕ್ರಿಯೆ ಆರಂಭವಾದುದನ್ನು ಗಮನಿಸಬಹುದು. ಅಸುರರಲ್ಲಿ ಬಹು ವ್ಯಾಪಕದಲ್ಲಿ ಕೇಳಿಬರುವ ಹೆಸರೆಂದರೆ ನಾಗಕುಲ. ಮಹಿಷ ಮಂಡಲ ಅಥವಾ ಈಗಿನ ಮೈಸೂರಾದ ಆಗಿನ ಮಹಿಷೂರಿನ ಮಹಿಷಾಸುರನೂ ನಾಗಕುಲದವನೇ ಎಂದು ಹೇಳುತ್ತಾರೆ. ಮಹಾಭಾರತದಲ್ಲಿ ನಾಗಕುಲದ ವಾಸುಕಿಯ ಸೋದರಿಯನ್ನು ಅರ್ಜುನ ಮದುವೆಯಾಗುವುದು, ಮಾತಲಿಯ ಮಗಳನ್ನು ನಾಗರ ಸುಮುಖ ಮದುವೆಯಾಗುವುದು, ನಾಗಕುಲದ ತಕ್ಷಕ ಇಂದ್ರನ ಒಳ್ಳೆಯ ಗೆಳೆಯನಾಗಿರುವುದು, ಭೀಮ ರಾಕ್ಷಸಿಯಾದ ಹಿಡಿಂಬಿಯನ್ನು ಮದುವೆಯಾಗಿ ಘಟೋತ್ಕಚನ ತಂದೆಯಾಗುವುದು, ಕುರುಕ್ಷೇತ್ರದ ಯುದ್ಧದಲ್ಲಿ ಅಸುರರು ಪಾಂಡವರಿಗೆ ನೆರವಾಗುವುದು, ಇತ್ಯಾದಿ.

ಭಾರತದ ಬುಡಕಟ್ಟು ಜನಾಂಗಗಳಲ್ಲಿ ಅಸುರರದೆಂದು ಗುರುತಿಸುವುದರಲ್ಲಿ ಮುಖ್ಯವಾದ ಕೆಲವೆಂದರೆ, ಕಳಿಂಗ, ಮಗಧ ಮತ್ತು ನಾಗ. ಈಶಾನ್ಯ ರಾಜ್ಯಗಳಲ್ಲಿ ನಾಗ ಬುಡಕಟ್ಟುಗಳನ್ನು, ಮಧ್ಯ ಭಾರತದಲ್ಲಿ ಅಸುರ ಬುಡಕಟ್ಟುಗಳನ್ನು ಈಗಲೂ ಕಾಣಬಹುದು.

ಅಸುರರು ಪ್ರಾಚೀನ ಸುಮೇರಿಯಾದವರು ಎಂಬ ವಾದವೂ ಇದೆ. ಅವರು ಆರ್ಯರಿಗಿಂತಲೂ ಹಿಂದಿನವರಂತೆ, ಅವರೇ ಸಿಂಧೂ ಕಣಿವೆಯ ನಾಗರಿಕತೆಯ ನಿರ್ಮಾಪಕರೆಂದೂ ಹೇಳುವುದಿದೆ. ಆದರೆ, ಭಂಡಾರ್ಕರ್ ಅಸುರರನ್ನು ಅಸ್ಸೀರಿಯಾದವರೆಂದು ಗುರುತಿಸುತ್ತಾರೆ. ಕ್ರಿಸ್ಟೆನ್‌ಸನ್‌ರಂತಹ ಇನ್ನೂ ಕೆಲವು ವಿದ್ವಾಂಸರ ಪ್ರಕಾರ ಅಸುರರೆಂದರೆ ಪರ್ಷಿಯಾದವರು ಅಹುರ ಮಾಜ್ದನ ಅನುಯಾಯಿಗಳು. ಅವರಲ್ಲಿ ದೈವ ಮತ್ತು ಅಸುರ ಎಂಬ ಎರಡು ಪಂಗಡಗಳು; ಕೃಷಿ ಮತ್ತು ಪಶು ಸಂಗೋಪನ ಅಸುರರ ಜೀವನ ಕ್ರಮ. ಅಸುರರು ಪರ್ಷಿಯಾದಲ್ಲಿಯೇ ಉಳಿದರೆ, ದೇವ-ರು ಭಾರತಕ್ಕೆ ಬಂದರು. ಆದರೆ ಇದನ್ನು ಒಪ್ಪದ ಬಿ.ಕೆ. ಘೋಷ್, ಅಸುರ ಎಂಬ ಪದ ಉನ್ನತ ನಾಗರಿಕತೆಯಿಂದ ಬಂದಿದೆ ಎನ್ನುತ್ತಾರೆ. ಮಧ್ಯ ಭಾರತದಲ್ಲಿ ಅಸುರ ಬುಡಕಟ್ಟು ಇದ್ದು, ಭಾರತಕ್ಕೆ ಆರ್ಯರು ಬಂದಾಗ, ಅವರನ್ನು ಪ್ರತಿರೋಧಿಸಿದ ಆ ಅಸುರರನ್ನು ಧ್ವಂಸ ಮಾಡಿದರು ಎಂಬುದು ಇವರ ವಾದ. ಹಿಂದಿನ ಅಸುರರು ಮತ್ತು ಇಂದಿನ ಅಸುರ-ಬುಡಕಟ್ಟು ಪ್ರತ್ಯೇಕ ಎನ್ನುವವರು ಪ್ರಾಚೀನ ಅಸುರರನ್ನು ಭಾರತದ ಮೂಲ ನಿವಾಸಿಗಳು ಎನ್ನುತ್ತಾರೆ. ಅಸುರರು, ದೈತ್ಯರು, ದಾನವರು, ನಾಗರು ಇವರೆಲ್ಲಾ ಭಿನ್ನ ಸಾಂಸ್ಕೃತಿಕ ಹಂತದವರಾಗಿದ್ದು ಆರ್ಯರನ್ನು ತಡೆಯಲು ಯತ್ನಿಸಿದವರು ಮತ್ತು ಕ್ರಮೇಣ ಆರ್ಯರ ಆವಕೃಪೆಗೆ ಒಳಗಾಗಿ ಹೀನಜನವೆಂಬ ಹಣೆಪಟ್ಟಿ ತೊಡಿಸಲ್ಪಟ್ಟವರು ಎಂದು ಇವರ ಅಭಿಪ್ರಾಯವೆಂದು ದೇಬಿಪ್ರಸಾದ್ ಚಟ್ಟೋಪಾಧ್ಯಾಯ ತಮ್ಮ ಲೋಕಾಯತ ಅಧ್ಯಯನ ಗ್ರಂಥದಲ್ಲಿ ಉಲ್ಲೇಖಿಸುವರು.

ಪೌರಾಣಿಕ ಗ್ರಂಥಗಳನ್ನೂ ಮತ್ತು ಐತಿಹಾಸಿಕ ಸಂಶೋಧನೆಗಳನ್ನೂ ಒಟ್ಟಿಗೆ ಅಧ್ಯಯನ ಮಾಡುವ ಕ್ರಮದಲ್ಲಿ ಭಾರೀ ಗೊಂದಲಗಳು ಏರ್ಪಡುತ್ತವೆ. ಒಂದು ನಿರ್ದಿಷ್ಟವಾದ ನಿರ್ಣಯಕ್ಕೆ ಬರದಿದ್ದರೂ ಇವೆರಡೂ ನಮಗೆ ಒಂದಷ್ಟರಮಟ್ಟಿಗೆ ಅರಿವನ್ನು, ತಿಳಿವಳಿಕೆಯನ್ನೂ ಹಾಗೂ ಅಧ್ಯಯನಕ್ಕೆ ಸಾಕಷ್ಟು ಸುಳುಹುಗಳನ್ನೂ ನೀಡುವುದು ಸತ್ಯ. ಸುಮೇರಿಯಾ ಮತ್ತು ಅಸಿರಿಯಾ ಸಂಸ್ಕೃತಿಗಳು ಅಸುರರ ಬಗೆಗಿನ ನಮ್ಮ ಅಧ್ಯಯನಕ್ಕೆ ಎಷ್ಟರ ಮಟ್ಟಿಗೆ ಸಹಕಾರಿಯಾಗುವುದು ಎಂಬುದನ್ನು ಮುಂದೆ ನೋಡೋಣ. ■



ಗಿರಿಜಾ ಕಲ್ಯಾಣ

ನಾಟಕ ವಿಮರ್ಶೆ

ಆಹಾರ ಭದ್ರತೆಯ ಕಾನೂನು ರಚನೆಯಾಗುತ್ತಿದೆ. ಆದರೆ ಅದನ್ನು ಬೆಳೆಯುವವನ ಸ್ಥಿತಿ ಶೋಚನೀಯವಾಗಿದೆ. ಅಭದ್ರತೆಯಿಂದ ಕೂಡಿರುವ ರೈತನ ಜೀವನವನ್ನು ಕುರಿತು ಯಾರೂ ಚಿಂತಿಸದಿರುವುದು ವಿಪರ್ಯಾಸ. ಹಿಂದೆ ಮುಖ್ಯಮಂತ್ರಿಯೊಬ್ಬರು ರೈತರ ಆತ್ಮಹತ್ಯೆ ಪ್ರಕರಣದ ನೈಜತೆ ತಿಳಿಯಬೇಕು ಎಂದು ಹೇಳಿ ಮುಜುಗರಕ್ಕೊಳಗಾಗಿದ್ದರು. ಈಗಲೂ ಈ ರೀತಿಯ ಸಾವುಗಳನ್ನು ಅನುಮಾನದಿಂದ ನೋಡುವವರೇ ಹೆಚ್ಚು.

ರೈತರ ಬದುಕನ್ನೇ ವಸ್ತುವಾಗಿಟ್ಟುಕೊಂಡಿದ್ದ ನಾಟಕ 'ಗಿರಿಜಾ ಕಲ್ಯಾಣ' ಇತ್ತೀಚೆಗೆ ಬೆಂಗಳೂರಿನ ರಂಗಶಂಕರದಲ್ಲಿ ಪ್ರದರ್ಶನಗೊಂಡಿತು. ಬೆಂಗಳೂರೆಂಬ ಮಹಾನಗರದಲ್ಲಿ ನಡೆಯುವ ಹತ್ತಾರು ಮನರಂಜನಾ ಕಾರ್ಯಕ್ರಮಗಳಲ್ಲಿ ಇದೂ ಒಂದು ಎಂದು ಭಾವಿಸಿದ ಜನ ಈ ನಾಟಕವನ್ನು ಗಂಭೀರವಾಗಿ ಪರಿಗಣಿಸದೆ. ಇದ್ದದ್ದು ನೋವಿನ ಸಂಗತಿ. ಈ ನಾಟಕವನ್ನು ರಚಿಸಿ, ನಿರ್ಮಿಸಿದ, ನಿರ್ದೇಶಿಸಿದ, ನಟಿಸಿದ ಜನರ ಕಡೆಯವರು ಮಾತ್ರ ಬಂದು ನೋಡಿದರೆ ಸಾಲದು. ರೈತ ತನ್ನ ಮಾಂಸಖಂಡವನ್ನು ಹಿಂಡಿ, ಹೊಟ್ಟೆ ಬಟ್ಟೆ ಕಟ್ಟಿ, ಬೆವರು ಬಸಿದು ಬೆಳೆದ ಅನ್ನ ಉಂಡವರೆಲ್ಲಾ ನೋಡಬೇಕು. ಮುಖ್ಯವಾಗಿ ಆಡಳಿತ ಮಾಡುವವರು, ಕಾನೂನು ರಚಿಸುವವರು, ರೈತರಿಂದ ಮತ ಪಡೆದು ಅಧಿಕಾರ ಹಿಡಿದಿರುವ ಮಹಾನುಭಾವರು ವೀಕ್ಷಿಸಬೇಕು.

'ಗಿರಿಜಾ ಕಲ್ಯಾಣ' ನಾಟಕದ ರಚನೆಕಾರ ಬಿ. ಸುರೇಶ್. ಇದರ ವಿನ್ಯಾಸ ಮತ್ತು ನಿರ್ದೇಶನ ನರೇಶ್ ಮಯ್ಯ ಅವರದ್ದು. ನಾಟಕ 'ರೈತನ ಆತ್ಮಹತ್ಯೆ' ವಿಷಯವನ್ನು ಮುಖ್ಯವಾಗಿಸಿಕೊಂಡಿದ್ದರೂ, ರೈತನ ಮಗಳ ಮದುವೆ, ಅವಳ ಕನಸು, ದುರಂತ ಅಂತ್ಯ ತರಹದ ವಿಷಯಗಳ ಸುತ್ತ ಕೇಂದ್ರೀಕೃತಗೊಂಡಿದೆ. ಪಾತ್ರಗಳ ಸಂಭಾಷಣೆ ಸಹಜವಾಗಿವೆ. ಒಟ್ಟಾರೆಯಾಗಿ ರೈತನ ಅದೋಸ್ಪರ್ಶಿ ಬದುಕನ್ನು ಈ ನಾಟಕ ಅನಾವರಣ ಮಾಡಿರುವುದು ಮೆಚ್ಚುವ ವಿಷಯ.

ನರೇಶ್ ಮಯ್ಯ ನೀನಾಸಂನಲ್ಲಿ ಪಳಗಿದವರು. ನಾಟಕದ ವಿನ್ಯಾಸದಲ್ಲಿ ರಂಗತಜ್ಞತೆ ಎದ್ದು ಕಾಣುತ್ತದೆ. ಮನರಂಜನೆ ದೃಷ್ಟಿಯಿಂದ ಗಿರಿಜಾಳ ಕನಸನ್ನು ಹಾಸ್ಯ-ಶೃಂಗಾರ ರಸಗಳ ಸಂಗಮದಲ್ಲಿ ಪ್ರಸ್ತುತಪಡಿಸಿದ್ದಾರೆ. ಆದರೆ ಅದರ ಹಿಂದೆ ಅವಳ ಅಂತರಂಗದ ಭಾಷೆ, ನಿಜ ಬದುಕಿನ ರೀತಿ ಬೇರೆಯದೆ ಇರುತ್ತದೆ.

ಈ ನಾಟಕದಲ್ಲಿ ನಟಿಸಿರುವ ಎಲ್ಲಾ ಯುವಕರು ಮಂಡ್ಯ ಜಿಲ್ಲೆಯ ಹಳ್ಳಿ ಹುಡುಗರೇ. ಆದರೂ ಅವರೆಲ್ಲ ಲೀಲಾಜಾಲವಾಗಿ ಸಹಜವಾಗಿ ಅಭಿನಯಿಸಿದ್ದಾರೆ. ಡೈಲಾಗ್ ಡಿಲವರಿ; ಸ್ಥಳೈಕ್ಯ ದೃಶ್ಯ ಬದಲಾವಣೆಯಲ್ಲಿ ನಟರ ಲವಲವಿಕೆಯ ಹಿಂದೆ ನರೇಶ್ ಇರುವುದು ತಿಳಿಯುತ್ತದೆ.

ಗಮನ ಸೆಳೆಯುವ ಪಾತ್ರ ಅಮೃತ ರಾಜೇಶ್ ಅವರದ್ದು ಹಳ್ಳಿ ರೈತನ ಮಗಳು. ಹಾಗೆಯೇ ರೈತನ ಪಾತ್ರಧಾರಿ ಬಂದೇಶ್ ಪ್ರೇಕ್ಷಕರನ್ನು ಹಿಡಿದಿಡುತ್ತಾರೆ. ಗುರುಡನ ಪಾತ್ರವನ್ನು ನಿರ್ವಹಿಸಿರುವ ಮಾದೇಗೌಡರು ಸ್ವಲ್ಪ ನಿಧಾನಿಸಬೇಕು. ಏಕೆಂದರೆ ಆತ ಸಾಲಕೊಡುವವನು, ವಸೂಲಿಗಾರ, ಪರೋಕ್ಷ ಹಿಂಸೆಗಾರ. ಲಾಲೂಚನ್ನಯ್ಯನಾಗಿ ಶಿವರಾಂ ಸಹಜವಾಗಿ ಅಭಿನಯಿಸಿದ್ದಾರೆ.

ಬೆಳಕು ಚೆನ್ನಾಗಿದೆ. ವಸ್ತ್ರವಿನ್ಯಾಸ ಸೂಪರ್. ರಂಗ ಸಜ್ಜಿಕೆ ಇಂಪ್ರೂವ್ ಆಗಬೇಕು. ಹೆಚ್ಚಿಸ್ಟಿ, ರಾಗೌ ಒಳ್ಳೆಯ ಗೀತೆ ಕೊಟ್ಟಿದ್ದಾರೆ. ರಂಗದ ಹಿಂದೆ ದುಡಿದವರ ಶ್ರಮ ಸಾರ್ಥಕಗೊಂಡಿದೆ.

ನಾಟಕದ ಕಥೆ ಗಂಭೀರವಾಗಿದ್ದರೂ, ನಿರೂಪಣೆ ಸರಾಗ ಮತ್ತು ಸಲೀಲವಾಗಿದ್ದರೂ, ಒಟ್ಟಾರೆ ರಂಗಕೃತಿ ಇನ್ನೂ ಮನ ಕುಲಕಬೇಕು. ಹೃದಯ ಮುಟ್ಟಬೇಕು.


ಬೆಂಗಳೂರಿನ ಶೋನಲ್ಲಿ ವೀಕ್ಷಕರ ಕೊರತೆಗೆ ಕಾರಣ ಬಕ್ರೀದ್ ಮತ್ತು ಪ್ರಚಾರದ ಕೊರತೆ ಇರಬಹುದು. ಮುಂದಿನ ಪ್ರದರ್ಶನಗಳು ಸಚಿವಾಲಯದವರಿಗೆ, ವಿದ್ಯಾರ್ಥಿಗಳಿಗೆ, ಹಸಿರು ಶಾಲು ಹೊದ್ದಿರುವವರಿಗೆ ವಿಸ್ತರಿಸಲಿ. ಇದನ್ನು ಅರ್ಪಿಸಿದ ಮಂಡ್ಯದ ಕರ್ನಾಟಕ ಸಂಘ ಮತ್ತು ಜನ-ದನಿ ಸಾಂಸ್ಕೃತಿಕ ಟ್ರಸ್ಟ್‌ಗೆ ನನ್ನ ಸಲಾಮು. ಇಂತಹ ಪ್ರಯತ್ನಗಳಿಂದ 'ರೈತರ ಭದ್ರತಾ ಕಾನೂನು' ಜಾರಿಯಾಗುವ ದಿನಗಳು ದೂರವಿಲ್ಲ ಎಂದೆನಿಸುತ್ತದೆ.

■ ಡಾ.ಡಿ.ಗುರುಮೂರ್ತಿ, ಹಾರೋಹಳ್ಳಿ



ನಿರ್ದೇಶಕ ನರೇಶ್ ಮಯ್ಯ







ಧರ್ಮದರ್ಶಿಯಾಗಲು ಹಲವು ಸೂತ್ರಗಳು!

ಒಂದು ಪತ್ರ

ಧರ್ಮ, ದೇವರನ್ನು ಬಂಡವಾಳವಾಗಿ ಮಾಡಿಕೊಂಡು ನಡೆಸುವ ವ್ಯಾಪಾರಕ್ಕಿಂತ ಅಧಿಕ ಲಾಭದಾಯಕವಾದ ಮತ್ತು ಕಡಿಮೆ ಶ್ರಮದಾಯಕವಾದ ಇನ್ನೊಂದು ವ್ಯಾಪಾರ ಪ್ರಾಯಶಃ ಈ ಪುಣ್ಯಭೂಮಿ ಭಾರತದಲ್ಲಿ ಇರುವುದು ಸಾಧ್ಯವೇ ಇಲ್ಲ. ಇದಕ್ಕೆ ತಾಜಾ ಉದಾಹರಣೆ ಬೇಕಿದ್ದರೆ ನಮ್ಮ ಕರಾವಳಿ ಭಾಗಕ್ಕೆ ಬನ್ನಿ. ಇಲ್ಲಿ ದಿನಬೆಳಗಾದರೆ ನೀವು ಸ್ವಾಮೀಜಿಯಾಗಿ ಸಂಸ್ಥಾನಗಳನ್ನು ಕಟ್ಟಬಹುದು, ಸಾಮ್ರಾಜ್ಯಗಳನ್ನು ವಿಸ್ತರಿಸಿಕೊಳ್ಳಬಹುದು. ಜನತೆಯ ವೌಢ್ಯದ ಮೇಲೆಯೇ ಜೀವನೋಪಾಯ ಕಂಡುಕೊಳ್ಳಬಹುದು, ಅನೇಕರಿಗೆ ಉದ್ಯೋಗವನ್ನೂ ಕೊಡಬಹುದು. ಸ್ವಾಮಿ ವಿವೇಕಾನಂದರು ಕೂಡಾ ಯಃಕಶ್ಚಿತ್ ದೈವವಾಗಿ ಗುರೂಜಿಯ ಮೈಮೇಲೆ ಆವಾಹನೆಗೊಂಡು ಅಭಯನೀಡುವ ಅಚ್ಚರಿಗಳಿಗೆ ನೀವಿಲ್ಲಿ ಸಾಕ್ಷಿಯಾಗಬಹುದು.

ನೀವು ಒಂದು ಮತಕ್ಕೆ ಸೇರಿದವರಾಗಿದ್ದು, ನಿಮ್ಮ ಮತ ದೇವರ ಮೂಲಕ ಸಂಪಾದನೆ ಅಷ್ಟಾಗಿ ಆಗಲಿಕ್ಕಿಲ್ಲ ಅನಿಸಿದರೆ ಇನ್ನೊಂದು ಮತಕ್ಕೆ ಸೇರಿದ ದೇವರ ದೇವಸ್ಥಾನ ಸ್ಥಾಪಿಸಿ. ನಿಮ್ಮ 'ದೂರದೃಷ್ಟಿ' ಯನ್ನು ಅರಿಯುವ ಗೋಜಿಗೇ ಹೋಗದ ಜನ, ಆಹಾ ಎಂತಹ ಪರಧರ್ಮ ಪ್ರೀತಿ ಎಂದು ತಲೆದೂಗುತ್ತಾರೆ, ನಿಮ್ಮನ್ನು ಹಾಡಿ ಹೊಗಳುತ್ತಾರೆ. ಹಾಂ, ಮತ್ತೆ ದೇವಸ್ಥಾನದಲ್ಲಿ ವಿಗ್ರಹ ಇಡಲು ಮರೆತರೂ ಪರವಾಗಿಲ್ಲ, ಹುಂಡಿಯಿರಿಸಲು ಮರೆಯಬೇಡಿ. ಹುಂಡಿಯೇ ಇಂತಹ ವ್ಯಾಪಾರದ ಜೀವಾಳ. ಸದರಿ ದೇವರ ಕಾರ್ಣಿಕದ ಬಗ್ಗೆ, ಆಣೆ ಪ್ರಮಾಣಗಳ ಬಗ್ಗೆ ಒಂದಷ್ಟು ಕಟ್ಟುಕತೆಗಳನ್ನು ಹುಟ್ಟುಹಾಕಿ ವ್ಯಾಪಕ ಪ್ರಚಾರ ಮಾಡಿ. ಮುಗ್ಧ ಜನಗಳನ್ನು ಮಂಗ ಮಾಡಿ. ಒಮ್ಮೆ ಇವೆಲ್ಲವೂ ಒಂದು ಹಂತಕ್ಕೆ ತಲುಪಿತೆಂದರೆ ಮತ್ತೆ ನಿಮ್ಮ ವ್ಯಾಪಾರಕ್ಕೆ ಸ್ಪರ್ಧೆ ನೀಡುವವರೇ ಇರುವುದಿಲ್ಲ, ಹುಂಡಿ ತುಂಬಿ ತುಳುಕತೊಡಗುತ್ತದೆ.

ಭಾರತ ಗಣರಾಜ್ಯದ ಕೋರ್ಟುಗಳೆಲ್ಲ ಯಾಕೆ, ನೀವೇ ನ್ಯಾಯ ತೀರ್ಮಾನಗಳನ್ನು ನೀಡುವ ಸಂಪ್ರದಾಯವನ್ನೂ ಆರಂಭಿಸಿ. ನೀವೇ ದೇವರು ಅಂದುಕೊಂಡುಬಿಡಿ. ಭಕ್ತರು ಕಾಲಿಗೆ ಬೀಳುವಾಗ ಅವರನ್ನು ಎಬ್ಬಿಸಲು ಹೋಗಬೇಡಿ (ಅವರು ತಮ್ಮ ಮಿದುಳುಗಳನ್ನು ನಿಮ್ಮ ಪದತಲದಲ್ಲಿರಿಸಿ ಹಾಗೆ ಇರುವಷ್ಟು ಕಾಲ ನಿಮ್ಮ ವ್ಯಾಪಾರ ಸಾಂಗವಾಗಿ ಮುಂದುವರಿಯುತ್ತಿರುತ್ತದೆ). ಅಮಾಯಕ ಭಕ್ತರು ಮಂಡೆ ಬೋಳಿಸಿಕೊಂಡು ಹುಂಡಿಗೆ ಹಾಕಿದ ಹಣವನ್ನು ಬಾಚಿಕೊಂಡು ನಿಮ್ಮ ಸಾಮ್ರಾಜ್ಯವನ್ನು ವಿಸ್ತರಿಸಿಕೊಳ್ಳಿ (ಹಣದ ಲೆಕ್ಕ ಕೊಡಬೇಕಾಗಿ ಬರುವುದರಿಂದ ನಿಮ್ಮ ದೇವಾಲಯ ಸರಕಾರದ ಎಂಡೋಮೆಂಟ್ ಪ್ಯಾಕ್ಟಿಗೆ ಹೋಗದಂತೆ ನೋಡಿಕೊಳ್ಳಿ).

ಭೂಸುಧಾರಣಾ ಕಾನೂನು ಅಲ್ಲೇ ಬಿದ್ದಿರಲಿ. ಸಾವಿರಾರು ಎಕರೆ ಭೂಮಿಯನ್ನು ಕಬ್ಜಾದಲ್ಲಿರಿಸಿಕೊಳ್ಳಲು ಸರಕಾರದ ಮಂದಿಯೇ ನಿಮ್ಮ ಬೆಂಬಲಕ್ಕಿರುವುದರಿಂದ ನಿಮಗೇಕೆ ಭಯ? ನಿಮ್ಮ ಬಳಿ ಎಷ್ಟು ಜಮೀನಿದೆ, ನೀವು ಕಾನೂನು ಮೀರಿ ಅಷ್ಟೊಂದು ಜಮೀನು ಹೊಂದುವುದು ಹೇಗೆ ಸಾಧ್ಯ ಎಂದು ಯಾರಾದರೂ ಪ್ರಶ್ನಿಸಿದರೆ, ಆ ಲೆಕ್ಕ ಎಲ್ಲ ಕಂದಾಯ ಇಲಾಖೆಯಲ್ಲಿದೆ ಎಂದು ಹೇಳಿ ಜಾರಿಕೊಳ್ಳಿ. ಹುಂಡಿಗೆ ಬೀಳುವ ಹಣ ಎಷ್ಟು ಎಂದು ಕೇಳಿದರೆ ತಪ್ಪಿಯೂ ಲೆಕ್ಕ ಕೊಡಬೇಡಿ. ಬಂಡವಾಳ ಪೂರ್ತಿ ಹೊರಬಿದ್ದೀತು. ಇನ್ನೂ ಮುಂದುವರಿದು ಏನಾದರೂ ಕಿರಿಕಿರಿ ಮಾಡಿದರೆ ಮಾನನಷ್ಟ ಮೊಕದ್ದಮೆ ಇದ್ದೇ ಇದೆಯಲ್ಲ, ಬಿಟ್ಟಿ ಹಣ ಇರುವುದರಿಂದ ಹೆಸರಾಂತ ವಕೀಲರೂ ನಿಮ್ಮ ಕಿಸೆಯಲ್ಲೇ ಇರುತ್ತಾರೆ, (ನ್ಯಾಯಾಧೀಶರೇ ನಿಮ್ಮ ಕ್ಷೇತ್ರದ ಭಕ್ತರಾಗಿರುವುದರಿಂದ) ನ್ಯಾಯಾಲಯವೂ ನಿಮ್ಮ ಪರವೇ ಇರುತ್ತದೆ.


ಪಕ್ಷ ಯಾವುದೇ ಇರಲಿ, ಪ್ರಧಾನಮಂತ್ರಿ, ರಾಷ್ಟ್ರಪತಿ, ಮುಖ್ಯಮಂತ್ರಿ, ಸಚಿವರು, ಶಾಸಕರು, ಮಾಜಿಗಳು, ಹಾಲಿಗಳು ಎಲ್ಲರನ್ನೂ ಹೇಗಾದರೂ ಕರೆಸಿಕೊಂಡು ಅವರನ್ನು 'ಚೆನ್ನಾಗಿ ನೋಡಿಕೊಳ್ಳಿ'. ಹೀಗೆಲ್ಲ ಮಾಡುವುದರಿಂದ ಸರಕಾರವೇ ತಮ್ಮ ಹಂಗಿಗೆ ಸಿಲುಕುತ್ತದೆ. ಇಡಿಯ ಆಡಳಿತ ಯಂತ್ರವೇ ನಿಮ್ಮ ಪದತಲದಲ್ಲಿ ಬಿದ್ದಿರುತ್ತದೆ. ಆಗ ನೀವೇ ಅಲ್ಲಿ ಸರಕಾರವಾಗಿರುತ್ತೀರಿ. ನಿಮ್ಮದು ಸರ್ವತಂತ್ರ ಸ್ವತಂತ್ರ ಗಣರಾಜ್ಯವಾಗಿರುತ್ತದೆ.

ಯಾವುದೇ ಕಾರಣಕ್ಕೂ ನಿಮ್ಮ ಸ್ವಂತ ಸಂಪಾದನೆಯನ್ನು ಸಮಾಜೋದ್ಧಾರಕ್ಕೆ ಬಳಸಿಕೊಳ್ಳಬೇಡಿ. ಹಾಗೆ ಮಾಡುವುದು ಮೂರ್ಖತನ! ಹೇಗಿದ್ದರೂ ಹುಂಡಿಯ ಹಣ, ನಾನಾ ಪೂಜೆಗಳ ಹೆಸರಿನಲ್ಲಿ ವಸೂಲಿ ಮಾಡಿದ ಹಣ ತುಂಬಿ ತುಳುಕುತ್ತಿರುತ್ತದಲ್ಲ, ಆ ಹಣವೂ ಸಾಲದಾದರೆ ಇನ್ನೂ ಲಾಭದಾಯಕವಾದ ಶಿಕ್ಷಣ ಸಂಸ್ಥೆಗಳ ವ್ಯಾಪಾರ ಆರಂಭಿಸಿ. ಪದವಿ ಕಾಲೇಜುಗಳಲ್ಲಿ ಅಷ್ಟೊಂದು ಸಂಪಾದನೆ ಇರುವುದಿಲ್ಲವಾದ್ದರಿಂದ ಎಂಜಿನಿಯರಿಂಗ್, ವೈದ್ಯಕೀಯ ಕಾಲೇಜುಗಳು ಲಾಭಕ್ಕೆ ಅತ್ಯುತ್ತಮ. ಇಲ್ಲೆಲ್ಲ ಮಾನವೀಯತೆ, ಸಮಾಜಸೇವೆಯ ಸೋಗು ಇದ್ದೇ ಇರಲಿ.

ಇಷ್ಟೇ ಆದರೆ ನಿಮಗೆ ದೊಡ್ಡ ಹೆಸರು, ಪ್ರಶಸ್ತಿಗಳು, ಮಾನ ಸಮ್ಮಾನಗಳು ಬರಲಾರವು. ಅದಕ್ಕಾಗಿ ಗ್ರಾಮಾಭಿವೃದ್ಧಿ ಯೋಜನೆಯನ್ನು ಆರಂಭಿಸಿ. ಹಣ ನಿಮ್ಮದಲ್ಲವಾದರೂ, ನೀವು ಒಂದಿಷ್ಟೂ ಬೆವರು ಸುರಿಸದಿದ್ದರೂ ಕೀರ್ತಿಯೆಲ್ಲವೂ ನಿಮಗೇ. ಸ್ವಸಹಾಯ ಸಂಘಗಳನ್ನು ಮಹಿಳೆಯರಿಗಾಗಿ ಸ್ಥಾಪಿಸಿ. ಬಡಮಹಿಳೆಯರಿಗೆ 18% ಬಡ್ಡಿಯಲ್ಲಿ ಸಾಲ ಕೊಡಿ. ಯಾರಾದರೂ ಪ್ರಶ್ನಿಸಿದರೆ ಆರ್‌ಬಿಐಯವರ ಪ್ರಕಾರ 26% ಬಡ್ಡಿ ಹಾಕಲು ಅವಕಾಶವಿದೆ ಎಂದು ವಾದಿಸಿ.

ಸಾಮ್ರಾಜ್ಯ ವಿಸ್ತರಣೆಗೆ ಯಾರಾದರೂ ಅಡ್ಡಿಪಡಿಸಿದರೆ, ನಿಮಗೆ ಯಾವುದೇ ರೀತಿಯಲ್ಲಿ ಪ್ರತಿರೋಧ ಒಡ್ಡಿದರೆ ಅವರನ್ನು ನಿಮ್ಮ ಕೆಳಗಿನವರು 'ನೋಡಿಕೊಳ್ಳುತ್ತಾರೆ' ಬಿಡಿ. ನಿಮ್ಮ ಸಂಸ್ಥಾನದಲ್ಲಿ ನಿಮ್ಮದೇ ಕಾನೂನಾದುದರಿಂದ ರಾಜ್ಯಸರಕಾರ ಅಲ್ಲಿ ತಲೆ ಹಾಕುವುದೇ ಇಲ್ಲ ಎಂಬ ಧೈರ್ಯವಿರಲಿ. ಈ 'ನೋಡಿಕೊಳ್ಳುವ' ಕಾರ್ಯ ಕೈಮೀರಿ ಹೋಗಿ ಕೊಲೆ ಗಿಲೆ ಸಂಭವಿಸಿದರೆ ಅದನ್ನು ಮುಚ್ಚಿಹಾಕಲು ನಿಮ್ಮ ಭಕ್ತರಾದ ಪೊಲೀಸರು ಸದಾ ಸಿದ್ಧರಿರುತ್ತಾರೆ. ಸಂತ್ರಸ್ತರೇನಾದರೂ ತಮ್ಮ ಬಳಿ ದುಃಖ ತೋಡಿಕೊಂಡರೆ ಅವರ ಮುಂದೆಯೇ ಸರಕಾರದ ಗೃಹಮಂತ್ರಿಗಳಿಗೆ ದೂರವಾಣಿ ಕರೆ ಮಾಡಿದಂತೆ ನಾಟಕಮಾಡಿ (ನೀವು ಗೃಹಮಂತ್ರಿಗಳಿಗೇ ಫೋನ್ ಮಾಡಿದ್ದೀರೋ ಇಲ್ಲವೋ ಎಂದು ಯಾರು ತಾನೇ ಕೇಳುತ್ತಾರೆ?) ಅವರನ್ನು ಸಾಗಹಾಕಿ. ಇನ್ನುಳಿದುದನ್ನೆಲ್ಲ ನಿಮ್ಮ ಜೀತದಾಳುಗಳು, ಭಕ್ತರು ಮತ್ತು ಫಲಾನುಭವಿಗಳು ನೋಡಿಕೊಳ್ಳುತ್ತಾರೆ.

ಕೆಲವು ಅಧಿಕಪ್ರಸಂಗಿ ಪತ್ರಿಕೆಗಳು, ನಿಮ್ಮ ಬಂಡವಾಳವನ್ನು ಹೊರಹಾಕಲು ಯತ್ನಿಸುವ ಮೂಲಕ ನೊಂದವರಿಗೆ ದನಿ ನೀಡಲು, ಜನಪರವಾಗಿರಲು, ಪತ್ರಿಕಾಧರ್ಮ ಎತ್ತಿ ಹಿಡಿಯಲು ಹೊರಡುವುದುಂಟು. ಅಂತಹ ಸಂದರ್ಭದಲ್ಲಿ ಸುಮ್ಮನೆ ಕಾನೂನು ಮಾರ್ಗ ಅನುಸರಿಸಬೇಡಿ (ಅದಕ್ಕೇಕೆ ಖರ್ಚುಮಾಡುವುದು?). ಗೂಂಡಾಗಳನ್ನು ಕಳಿಸಿ ಪತ್ರಿಕಾ ಕಚೇರಿಯನ್ನು ಧ್ವಂಸಮಾಡಿಬಿಡಿ. ಕೆಲ ಸಂಪಾದಕರಿಗೆ ಹೀಗೆಯೇ ಪಾಠ ಕಲಿಸಬೇಕಾಗುತ್ತದೆ. ನಿಮ್ಮ ವಿರುದ್ಧ ಬರೆಯುವ ಪತ್ರಿಕೆಗಳನ್ನು ಮುದ್ರಿಸುವವರ ಮೇಲೂ ಧಮಕಿ ಹಾಕಿ.• ಅಂತಹ



'ಒಂದು ಎರಡು ಬಾಳೆಲೆ ಹರಡು' ಇಂದ 'ಮಧುರಾ... ಪಿಸುಮಾತಿಗೆ' ತನಕ

-ಗಾಯಕಿ ಶಮಿತಾ ಮಲ್ನಾಡ್

ಸಂದರ್ಶನ

'ಬಿರುಗಾಳಿ' ಚಿತ್ರದ 'ಮಧುರಾ ಪಿಸುಮಾತಿಗೆ', 'ಕರಿಯ' ಚಿತ್ರದ 'ನನ್ನಲಿ ನಾನಿಲ್ಲ', 'ರಾಮ ಶಾಮ ಭಾಮ' ಚಿತ್ರದ 'ಜ್ವಾಪಾನ ರಾತ್ರಿಯಾತು', 'ಚೆಲ್ಲಾಟ' ಚಿತ್ರದ 'ಅಲೆಲೆ ತುಂಟ ಕಣ್ಣ ಸುಂದರಿ' ಗೀತೆಗಳು ಸೇರಿದಂತೆ ಸುಮಾರು ಐನೂರಕ್ಕೂ ಹೆಚ್ಚು ಚಿತ್ರಗಳಿಗೆ ಹಾಡಿರುವ ಪ್ರತಿಭಾನ್ವಿತ ಗಾಯಕಿ ಡಾ. ಶಮಿತಾ ಮಲ್ನಾಡ್ ಇಲ್ಲಿ ಮಾತಾಡಿದ್ದಾರೆ.

ಪ್ರಶ್ನೆ: ನಿಮ್ಮ ಕುಟುಂಬದ ಹಿನ್ನೆಲೆ ಕುರಿತು ಸ್ವಲ್ಪ ...ಳ್ತೀರಾ?

ಶಮಿತಾ ಮಲ್ನಾಡ್: ನನ್ನ ತಂದೆ ರಾಮಚಂದ್ರೇಗೌಡ ...ನಕಪುರದ ರೂರಲ್ ಕಾಲೇಜಿನಲ್ಲಿ ಪ್ರಾಣಿಶಾಸ್ತ್ರ ಪಾಠ ...ಮಾಡ್ತಿದ್ರು. ತಾತನಿಗೆ ಸಂಗೀತದಲ್ಲಿ ತುಂಬಾ ಆಸಕ್ತಿ ಇತ್ತು, ...ವರ ಪ್ರಭಾವಕ್ಕೊಳಗಾದ ನನ್ನ ತಾಯಿಯೂ ಮೊದಲಿಗೆ ...ಜಾನಪದಗಳನ್ನು ಹಾಡುತ್ತಿದ್ದವರು ಕ್ರಮೇಣ ಕರ್ನಾಟಕ ...ಶಾಸ್ತ್ರೀಯ ಸಂಗೀತವನ್ನೂ ಸ್ವಲ್ಪ ದಿನ ಅಭ್ಯಾಸ ಮಾಡಿದ್ರು. ...ವರಿಂದಾಗಿ ನನಗೂ ಸಂಗೀತದ ಕಡೆ ಚಿಕ್ಕಂದಿನಿಂದಲೇ ...ಸಕ್ತಿ ಮೂಡಿತು. ನನ್ನ ತಂದೆಯವರು ಮೂಲತಃ ...ರ್ಥಹಳ್ಳಿಯ ಉಳುಕೊಪ್ಪದವರು. ನನ್ನ ಪತಿ ...ಂಗೇರಿಯವರು. ಸದ್ಯಕ್ಕಿರೋದು ಬೆಂಗಳೂರು.

ಪ್ರಶ್ನೆ: ನೀವು ಚಿಕ್ಕಂದಿನಲ್ಲಿ ಹೆಚ್ಚಾಗಿ ಹಾಡುತ್ತಿದ್ದ ...ಾಡುಗಳು ಯಾವುವು?

ಶಮಿತಾ ಮಲ್ನಾಡ್: ಪಠ್ಯಪುಸ್ತಕದ ಪದ್ಯಗಳನ್ನು ಹಾಡ್ತಿದ್ದೆ ಉದಾಹರಣೆಗೆ 'ಬಾ ಬಾ ಗಿಳಿಯೇ ಬಣ್ಣದ ಗಿಳಿಯೇ... ಹಣ್ಣನು ಕೊಡುವೆನು ಬಾ ಬಾ' ಮತ್ತೆ 'ಒಂದು ಎರಡು ಬಾಳೆಲೆ ಹರಡು' ಇತ್ಯಾದಿ.


ಪ್ರಶ್ನೆ: ನಿಮ್ಮ ಮೊದಲ ಸಂಗೀತದ ಗುರುಗಳು ಯಾರು?

ಶಮಿತಾ ಮಲ್ನಾಡ್: ಅಮ್ಮ ಯಾವಾಗಲೂ ಹಾಡ್ತಿದ್ರಲ್ಲಾ ಅದನ್ನ ಕೇಳಿಸ್ಕೊಂಡು ನಾನೂ ಹಾಡಲು ಪ್ರಯತ್ನಿಸುತ್ತಿದ್ದೆ. ಅದನ್ನು ಬಿಟ್ರೆ, ಕನಕಪುರದಲ್ಲಿ ಸುನಂದ ಅಂತ ಒಬ್ರು ಟೀಚರ್ ಇದ್ರು. ಅವರ ಹತ್ತಿರ ಭಾವಗೀತೆ, ಭಕ್ತಿಗೀತೆ, ಜಾನಪದ ಗೀತೆ ಹೇಳಿಸ್ಕೊಳ್ತಿದ್ದೆ. ಅದೂ ಯಾವುದಾದರೂ ಸ್ಪರ್ಧೆಗಳಿದ್ದಾಗ ಮಾತ್ರ. ಹಾಗೇನೆ, ಗ್ರಾಮಾಂತರ ಪ್ರೌಢಶಾಲೆಯಲ್ಲಿ ಮೇಷ್ಟ್ರಾಗಿದ್ದ ಚಿಕ್ಕಮರಿಗೌಡ್ರು ಧ್ವನಿಯ ಏರಿಳಿತ, ಪಿಚ್ ಸೆಲೆಕ್ಷನ್ ಬಗ್ಗೆ ಒಂದಿಷ್ಟು ಹೇಳಿಕೊಟ್ಟಿದ್ರು. ಅವರು ಆ ಕಾಲಕ್ಕೆ ಬೆಂಗಳೂರು ಆಕಾಶವಾಣಿಯಲ್ಲಿ ಹಾಡ್ತಿದ್ದಂಥ ಗಾಯಕರಾಗಿದ್ದವರು.

ಪ್ರಶ್ನೆ: ಶಾಸ್ತ್ರೀಯವಾಗಿ ಸಂಗೀತ ಕಲಿತಿದ್ದು ಯಾರ ಬಳಿ?

ಶಮಿತಾ ಮಲ್ನಾಡ್: ನಾನು, ಮುಂದೆ ದಂತವೈದ್ಯಕೀಯಕ್ಕೆ ಸೇರಿಕೊಂಡ ಮೇಲೆ ಬೆಂಗಳೂರಿಗೆ ಶಿಫ್ಟಾದೆ. ಆ ಸಂದರ್ಭದಲ್ಲಿ ಪಂ.ಶೇಷಾದ್ರಿ ಗವಾಯಿಯವರ ಹತ್ತಿರ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತದ ಅಭ್ಯಾಸ ಮಾಡಲು ಶುರುಮಾಡಿದೆ. ಈಗಲೂ ಅದೇ ಗವಾಯಿಯವರ ಶಿಷ್ಯರಾದ ಮಂಜುನಾಥ್ ಅವರ ಬಳಿ ಅಭ್ಯಾಸ ಮುಂದುವರೆಸಿದ್ದೇನೆ. ಕಲಿಕೆಗೆ ಕೊನೆಯೆಂಬುದಿಲ್ಲ ಅಲ್ವಾ?

ಪ್ರಶ್ನೆ: ನಿಮ್ಮ ಸಿಂಗಿಂಗ್ ಕೆರಿಯರ್ ಕ್ಯಾಸೆಟ್‌ಗಳಿಗೆ ಹಾಡುವ ಮೂಲಕ ಶುರುವಾಯ್ತು ಅಂತ ಕೇಳಿದ್ದೀನಿ. ಅದರ ಬಗ್ಗೆ ಸ್ವಲ್ಪ ಹೇಳ್ತೀರಾ?



ಶಮಿತಾ ಮಲ್ನಾಡ್: ನಾನು ದಂತವೈದ್ಯಕೀಯಕ್ಕೆ ಸೇರುವ ಮೊದಲೇ 'ಕಣಿವೆ ಕಬ್ಬಾಳಿ' ಎನ್ನುವ ಕ್ಯಾಸೆಟ್‌ಗಾಗಿ ಭಕ್ತಿಗೀತೆ ಹಾಡಿದ್ದೆ. ಆ ಅವಕಾಶ, ಚಿಕ್ಕಮರಿಗೌಡ್ರು ಹಾಗೂ ಕೋಡಿಹಳ್ಳಿ ಅಣ್ಣಯ್ಯ ಅವರ ಮೂಲಕ ಬಂದಿತ್ತು. ಅಣ್ಣಯ್ಯ ಅವರು ತಮ್ಮ ಊರಾದ ಸಂತೆ ಕೋಡಿಹಳ್ಳಿಯ ಚಿಕ್ಕರೂಮಿನಲ್ಲಿ ರೆಕಾರ್ಡಿಂಗ್ ಮಾಡಿದ್ರು. ಅದೊಂಥರಾ ಮರೆಯಲಾಗದ ಅನುಭವವಾಗಿತ್ತು. ಕಿಟಕಿಗಳಿಗೆಲ್ಲ ದಿಂಬು, ರಗ್ಗು ಇತ್ಯಾದಿಗಳನ್ನು ಮುಚ್ಚಿ ಒಂದು ಬಗೆಯ ಡಿಫರೆಂಟ್ ರೀತಿಯ ಸೌಂಡ್ ಪ್ರೂಫ್ ರೂಂ ರೆಡಿ ಮಾಡಿ ಡೆಕ್‌ನಲ್ಲಿ ರೆಕಾರ್ಡ್ ಮಾಡಿದ್ರು. 'ಜಲಜಲನೆ ಚಿಮ್ಮಾಳಲ್ಲೆ/ ತಾಯವ್ವಾ/ ಜಲಧಿ ಬಿಟ್ಟೊರಟಾಳಲ್ಲೆ' ಎಂಬುದು ಕ್ಯಾಸೆಟ್‌ಗಾಗಿ ನಾನು ಹಾಡಿದ ಮೊದಲ ಗೀತೆ. ಆ ಕ್ಯಾಸೆಟ್‌ನಲ್ಲಿ ಒಟ್ಟು ಮೂರು ಹಾಡು ಹಾಡಿದೆ.

ಪ್ರಶ್ನೆ: ಮುಖ್ಯವಾಹಿನಿಯ ಕ್ಯಾಸೆಟ್ ಇಂಡಸ್ಟ್ರಿಯ ಒಡನಾಟ ಸಿಕ್ಕಿದ್ದು ಹೇಗೆ?

ಶಮಿತಾ ಮಲ್ನಾಡ್: 'ಕಣಿವೆ ಕಬ್ಬಾಳಿ' ಕ್ಯಾಸೆಟನ್ನು ಪುನಃ ಬೆಂಗಳೂರಿನ ವೇಣುಗೋಪಾಲ್ (ಪ್ರಸಿದ್ಧ ತಬಲಾವಾದಕರು) ಅವರ ಸ್ಟುಡಿಯೋದಲ್ಲಿ ಮತ್ತೆ ರೆಕಾರ್ಡಿಂಗ್ ಮಾಡಲಾಯಿತು. ಮೊದಲ ಬಾರಿಗೆ ಸ್ಟುಡಿಯೋದಲ್ಲಿ ಹಾಡಿದ ಅನುಭವ ಅಲ್ಲೇ ಸಿಕ್ಕಿದ್ದು ನನಗೆ. ನಿಜಕ್ಕೂ ರೋಮಾಂಚಿತಳಾಗಿದ್ದೆ ಆ ದಿನ. ಕನ್ಸೋಲ್‌ನಲ್ಲಿ ನಿಂತು ನನ್ನದೇ ವಾಯ್ಸನ್ನ ನಾನೇ ಕೇಳುವಾಗಿನ ಕ್ಷಣ ಯಾವತ್ತಿಗೂ ಮರೆಯಲು ಸಾಧ್ಯವಿಲ್ಲ ಬಿಡಿ. ನನ್ನ ವಾಯ್ಸ್ ಕೇಳಿ ಸ್ವತಃ ವೇಣುಗೋಪಾಲ್ ಅವರು 'ಬಿ.ಕೆ.ಸುಮಿತ್ರಾ ವಾಯ್ಸ್ ಥರ ಇದೆ' ಅಂತ ಹೇಳಿ ನನ್ನಲ್ಲಿ ಮತ್ತಷ್ಟು ಗಾಬರಿ ಉಂಟುಮಾಡಿದ್ರು. ಆ ಸಂದರ್ಭದಲ್ಲಿ ಗಾಯಕಿ ಚಂದ್ರಿಕಾ ಗುರುರಾಜ್ ಕೂಡ ಆ ಕ್ಯಾಸೆಟ್‌ಗಾಗಿ ಹಾಡಿದ್ರು. ಅದಾದ ಮೇಲೆ 'ಮಹಾತಾಯಿ ಕಬ್ಬಾಳಮ್ಮ' ಅಂತ ಮತ್ತೊಂದು ಕ್ಯಾಸೆಟ್ಟಿಗೆ ಹಾಡಿದೆ. ಆ ಸಂದರ್ಭದಲ್ಲಿ ಅವತ್ತಿಗೆ ಕ್ಯಾಸೆಟ್ ಇಂಡಸ್ಟ್ರಿಯಲ್ಲಿ ತುಂಬಾ ಬ್ಯುಸಿಯೆಸ್ಟ್ ಸಂಗೀತ ನಿರ್ದೇಶಕರಾಗಿದ್ದ ಮಾರುತಿ ಮೀರಜ್‌ಕರ್ ಅವರ ಪರಿಚಯವಾಯಿತು. ಅವರು, ಏಕಕಾಲಕ್ಕೆ ಅಶ್ವಿನಿ, ಆಕಾಶ್, ಜೆಂಕಾರ್ ಸೇರಿದಂತೆ ಅನೇಕ ಆಡಿಯೋ ಕಂಪನಿಗಳಿಗೆ ಕ್ಯಾಸೆಟ್ ಮಾಡಿಕೊಡುತಿದ್ರು. ನಾನೂ ರೆಗ್ಯುಲರಾಗಿ ಹಾಡುವಂತೆ ಹೇಳಿದರು. ಅವರದು ಬೆಳಗ್ಗೆ ಒಂಭತ್ತರಿಂದ ರಾತ್ರಿ ಒಂಭತ್ತರ ಕಾಲ್ ಶೀಟ್ ಆಗಿದ್ರಿಂದ ಕಾಲೇಜಿಗೆ ಹೋಗಬೇಕಾದ ನಾನು ಫುಲ್ ಟೈಮ್ ಹಾಡಲು ಸಾಧ್ಯವಾಗಲಿಲ್ಲ, ವೀಕೆಂಡ್ ಹಾಗೂ ರಜಾದಿನಗಳಲ್ಲಿ ಮಾತ್ರ ಹಾಡಲು ಸಾಧ್ಯವಾಯಿತು. ಸಿಕ್ಕ ಸಮಯವನ್ನು ಹಾಡಲು ಮುಡುಪಿಟ್ಟು ಅವರ ಸಂಗೀತದಲ್ಲಿ ಅನೇಕ ಕ್ಯಾಸೆಟ್‌ಗಳಿಗೆ ಹಾಡಿದೆ. ಎಂ.ಡಿ.ಪಲ್ಲವಿ, ನಂದಿತಾ, ಅರ್ಚನಾ ಉಡುಪ ಕೂಡ ಆ ದಿನಗಳಲ್ಲಿ ಮಾರುತಿಯವರ ಕ್ಯಾಸೆಟ್‌ಗಳಿಗಾಗಿ ಒಟ್ಟಿಗೆ ಹಾಡುತ್ತಿದ್ದರು. ಜೊತೆಗೆ, ಆಲೂರು ನಾಗಪ್ಪ ಅವರ ಸಂಗೀತದಲ್ಲೂ ಹಾಡಿದ್ದೆ.



ಪ್ರಶ್ನೆ: ಚಿತ್ರಗೀತೆ ಹಾಡುವ ಅವಕಾಶ ಸಿಕ್ಕಿದ್ದು ಹೇಗೆ?

ಶಮಿತಾ ಮಲ್ನಾಡ್: ನಿರ್ದೇಶಕ ಕೂಡ್ಲು ರಾಮಕೃಷ್ಣ ಅವರು ನನ್ನ ದೂರದ ಸಂಬಂಧಿ. ನಾನು ಕ್ಯಾಸೆಟ್‌ಗಾಗಿ ಹಾಡಿದ್ದ ಹಾಡುಗಳನ್ನು ಅವರು ಕೇಳಿದ್ರಂತೆ. ಒಂದು ಸಲ ಎದುರಿಗೆ ಸಿಕ್ಕಾಗ 'ನೀನು ಚೆನ್ನಾಗಿ ಹಾಡ್ತೀಯಲ್ಲಮ್ಮಾ, ಸಿನಿಮಾಗೆ ಯಾಕೆ ಹಾಡ್ಬಾರ್ದು?' ಅಂದಿದ್ರು. 'ಸಿನಿಮಾಗೆ ಹಾಡಲು ನನಗೆಲ್ಲಿ ಅವಕಾಶ ಸಿಗುತ್ತೆ' ಅಂತ ಕೇಳಿದೆ. ಅದಕ್ಕವರು ಗುರುಕಿರಣ್ ಅವರ ಪರಿಚಯ ಮಾಡಿಕೊಡುವುದಾಗಿ ಹೇಳಿದ್ರು. ನಿಜ ಹೇಳಬೇಕು ಅಂದ್ರೆ, ಸಿನಿಮಾಗೆ ಹಾಡಬೇಕು ಅಂತ ನನಗಾಗ ಯಾವ ಆಸೆಯೂ ಇರಲಿಲ್ಲ, ಕೂಡ್ಲು ರಾಮಕೃಷ್ಣ ಅವರು ಹೇಳಿದ್ರಲ್ಲಾ ಅಂತ ಅಳುಕಿನಿಂದಲೇ ಗುರುಕಿರಣ್ ಅವರಿಗೆ ಫೋನ್ ಮಾಡಿದೆ. ಪೇಜರ್ ಇದ್ದ ಕಾಲವದು. ಗುರುಕಿರಣ್ ಆತ್ಮೀಯವಾಗಿ ಮಾತಾಡಿದ್ರು. ಅವರ ಆತ್ಮೀಯ ಮಾತುಗಳೇ ಸಿನಿಮಾದಲ್ಲಿ ನಾನೂ ಹಾಡಬಹುದು ಅನ್ನುವ ವಿಶ್ವಾಸವನ್ನು ನನ್ನಲ್ಲಿ ಮೂಡಿಸಿದ್ದು.

ಪ್ರಶ್ನೆ: ನೀವು ಹಾಡಿದ ಮೊದಲ ಚಿತ್ರಗೀತೆ ಯಾವುದು?

ಶಮಿತಾ ಮಲ್ನಾಡ್: 'ನಿನಗಾಗಿ' ಚಿತ್ರದ 'ಶುಕ್ರಿಯಾ...' ಗೀತೆಯನ್ನು ಗುರುಕಿರಣ್ ಅವರು ನನ್ನಿಂದ ಹಾಡಿಸಿದರು. ಕ್ಯಾಸೆಟ್ ಬಿಡುಗಡೆಯಾದ ಮೇಲಷ್ಟೇ ಗೊತ್ತಾಗಿದ್ದು ನನ್ನದೇ ವಾಯ್ಸನ್ನು ಅಂತಿಮವಾಗಿ ಉಳಿಸಿಕೊಂಡಿದ್ದಾರೆ ಅಂತ! ಗುರೂಜಿಗೆ ಫೋನ್ ಮಾಡಿ ಥ್ಯಾಂಕ್ಸ್ ಹೇಳಿದೆ. 'ಶುಕ್ರಿಯಾ...' ನಾ ಹಾಡಿದ ಮೊದಲ ಚಿತ್ರಗೀತೆ.

ಪ್ರಶ್ನೆ: ಆಮೇಲೆ ಯಾವ ಯಾವ ಗೀತೆಗಳನ್ನು ಹಾಡಿದ್ರಿ?

ಶಮಿತಾ ಮಲ್ನಾಡ್: 'ಮಧುರಾ ಪಿಸುಮಾತಿಗೆ' (ಬಿರುಗಾಳಿ), 'ಬಿಸಿಲಿನಲಿ' (ಗಜ), 'ನನ್ನಲಿ ನಾನಿಲ್ಲ' (ಕರಿಯ), 'ನೀರಿಗೆ ಬಾರೆ ಚೆನ್ನಿ' (ಜರಾಸಂಧ), 'ಚಿತ್ತಾರ ತಾಕು' (ಗೋಕರ್ಣ), 'ಅಲೆಲೆ ತುಂಟ ಕಣ್ಣ ಸುಂದರಿ' (ಚೆಲ್ಲಾಟ), 'ಕಿಟ್ಟಪ್ಪ ಕಿಟ್ಟಪ್ಪ' (ಸಾರಥಿ), 'ಸೇ ಸೇ ಸೇ ಸೇ ನನ್ನ ಪ್ರೀತ್ಸೆ' (ಭೂಪತಿ), 'ಹೇ ಕನಕ... ಹೇ ಕನಕ' (ಅರ್ಜುನ್), 'ಪ್ಯಾರ್ ದೇ' (ಪಾರ್ಥ), 'ಜಾನಿ ಮೇರಾ ನಾಮ್' (ಜಾನಿ), 'ಜಯ ಜಯ ಜಾಕೆಟ್ಟು' (ರ್‍ಯಾಂಬೋ), 'ಊರಿಂದ ಓಡಿ ಬಂದ' (ಮೈಲಾರಿ), 'ಹಳೇ ರೇಡಿಯೋ' (ಕೆಂಪೇಗೌಡ), 'ಪರವಾಗಿಲ್ಲ' (ಬಾಸ್), 'ನೀ ನನ್ನ ಅಪ್ಪಿಕೊಳಲ್ವಾ' (ಕುಟುಂಬ), 'ಆಪಲ್ ಆಪಲ್' (ಲವ ಕುಶ), 'ಜ್ವಾಪಾನ ರಾತ್ರಿಯಾತು' (ರಾಮ ಶಾಮ ಭಾಮ), 'ಕಣ್ಣಾಮುಚ್ಚೆ' (ಆಪ್ತಮಿತ್ರ), 'ಬೈಟು ಬಿಡ್ ಶೀಟಲ್ಲಿ' (ರೋಮಿಯೋ), 'ಚಿಟ್ಟೆ ಚಿಟ್ಟೆ' (ರಂಗ ಎಸ್ಸೆಸ್ಸೆಲ್ಸಿ), 'ಮುಟ್ಟಿದರೆ ಯಾಕೋ' (ಮಂಡ್ಯ) ಸೇರಿದಂತೆ ಸುಮಾರು ಐನೂರಕ್ಕೂ ಹೆಚ್ಚು ಕನ್ನಡ ಚಿತ್ರಗಳಿಗೆ ಹಾಡಿದ್ದೇನೆ. ಕನ್ನಡದ ಜೊತೆಗೆ, ತೆಲುಗಿನ 'ನಾಗವಲ್ಲಿ' ಹಾಗೂ 'ಲವ್ ಸೈಕಲ್' ಅನ್ನುವ ಚಿತ್ರಗಳಿಗೆ ಹಾಡಿದ್ದೇನೆ. ಹಾಗೇನೆ, ತುಳು ಹಾಗೂ ಕೊಂಕಣಿ ಚಿತ್ರಗಳಿಗೂ ಹಾಡಿದ್ದೇನೆ ಕೂಡ. ಕಿರುತೆರೆ ಧಾರಾವಾಹಿಗಳ ಶೀರ್ಷಿಕೆ ಗೀತೆಗಳನ್ನೂ. ದಂತವೈದ್ಯೆಯಾದರೂ ನಾನು ಸಂಗೀತದಲ್ಲೇ ಬದುಕು ಕಟ್ಟಿಕೊಂಡೆ. ಅಚ್ಚರಿಯೆಂದರೆ, 'ಕರಿಯ' ಚಿತ್ರದ ಮೂಲಕ ಕವಿರಾಜ್ ಅವರ ಪ್ರಥಮ ಗೀತೆ 'ನನ್ನಲಿ ನಾನಿಲ್ಲ' ಹಾಗೂ ಮಂಡ್ಯ ಚಿತ್ರದ ಮೂಲಕ ನಿಮ್ಮ ಪ್ರಥಮ ಗೀತೆ 'ಮುಟ್ಟಿದ್ರೆ ಯಾಕೋ' ಹಾಡಿದ ಖುಷಿ ನನಗೆ. ಎರಡೂ ಗೀತೆಗಳಿಗೆ ಗುರುಕಿರಣ್ ಅವರದ್ದೇ ಸಂಗೀತ, ಎರಡಕ್ಕೂ ದರ್ಶನ್ ಹೀರೋ!

ಪ್ರಶ್ನೆ: ನಿಮಗೆ ಯಾವ್ಯಾವ ಪ್ರಶಸ್ತಿಗಳು ಬಂದಿವೆ?

ಶಮಿತಾ ಮಲ್ನಾಡ್: 'ಮಧುರಾ ಪಿಸುಮಾತಿಗೆ' ಹಾಡಿಗಾಗಿ ಸುವರ್ಣ ಫಿಲಂ ಅವಾರ್ಡ್, ಸೌತ್ ಸ್ಕೋಪ್ ಅವಾರ್ಡ್ ಹಾಗೂ ಫಿಲಂ ಫೇರ್ ಅವಾರ್ಡ್ ಬಂದಿವೆ. ಉಳಿದಂತೆ ಅನೇಕ ಸಂಘ, ಸಂಸ್ಥೆಗಳು ಗೌರವಿಸಿವೆ.

ಪ್ರಶ್ನೆ: ನಿಮ್ಮ ಮುಂದಿನ ಯೋಜನೆಗಳೇನು?

ಶಮಿತಾ ಮಲ್ನಾಡ್: ನಾನು ಮೊದಲ ಬಾರಿಗೆ ಸಂಗೀತವನ್ನೂ ನೀಡಿರುವ ಆಲ್ಬಂ ಸದ್ಯದಲ್ಲೇ ಹೊರಬರಲಿದೆ. ಇದು ನನ್ನ ಮೊದಲ ವಿಡಿಯೋ ಆಲ್ಬಂ. ಇದರಲ್ಲಿ ಒಟ್ಟು ಹನ್ನೆರಡು ಹಾಡುಗಳಿರುತ್ತವೆ. ಈಗಾಗಲೇ ಒಂದು ಹಾಡನ್ನು ಆಸ್ಟ್ರೇಲಿಯಾದಲ್ಲೂ, ಎರಡು ಹಾಡುಗಳನ್ನು ಅಮೇರಿಕಾದಲ್ಲೂ ಚಿತ್ರೀಕರಿಸಲಾಗಿದೆ. ಎಲ್ಲಾ ಹಾಡುಗಳನ್ನೂ ನಾನೇ ಹಾಡಿದ್ದೇನೆ. ಕುವೆಂಪು, ಕೆ.ಎಸ್.ನಿಸಾರ್ ಅಹಮದ್, ವಿ.ಮನೋಹರ್, ಜಯಂತ ಕಾಯ್ಕಿಣಿ, ಗುರುರಾಜ ಹೊಸಕೋಟೆ, ನಾಗೇಂದ್ರ ಪ್ರಸಾದ್, ಸಂತು, ಕವಿರಾಜ್ ಹಾಗೂ ನೀವು ಸಾಹಿತ್ಯ ಒದಗಿಸಿದ್ದೀರಿ. ಜೊತೆಗೆ ನಾನೂ ಕೂಡ ಮೊದಲಬಾರಿಗೆ ಒಂದು ಹಾಡು ಬರೆದಿದ್ದೇನೆ!



ಸಂದರ್ಶಕ
ಹೃದಯಶಿವ

...ತ್ರಿಕೆಗಳನ್ನು ನಿಮ್ಮ ಗಣರಾಜ್ಯದೊಳಗೆ ಮಾರಾಟ ...ಮಾಡದಂತೆ ನೋಡಿಕೊಳ್ಳಲು ನಿಮ್ಮ ಬಂಟರಿಗೆ ಸೂಚನೆ ...ಡಿ. ವಾಹಿನಿಗಳು ನಿಮ್ಮ ವಿರುದ್ಧ ಕಾರ್ಯಕ್ರಮ ಪ್ರಸಾರ ...ಮಾಡಿದರೆ ಕರೆಂಟು ಕಟ್ ಮಾಡಿ, ಕೇಬಲ್ ಪ್ರಸಾರ ...ಗದಂತೆ ನೋಡಿಕೊಂಡು ನಿಮ್ಮ ಗಣರಾಜ್ಯದ ಪ್ರಜೆಗಳು ...ಕೆಟ್ಟ ಕಾರ್ಯಕ್ರಮಗಳನ್ನೆಲ್ಲ ನೋಡಿ ಕೆಡದಂತೆ ...ನೋಡಿಕೊಳ್ಳಿ. ಇನ್ನು ಎಂಜಲು ಕಾಸಿಗೆ ಕೈಯೊಡ್ಡುವ ...ಲವು ವಾಹಿನಿಗಳು ಇದ್ದೇ ಇರುತ್ತವೆ, ಅವರನ್ನು ...ಯಥೋಚಿತವಾಗಿ ನೋಡಿಕೊಂಡರೆ ಅವರು ನಿಮ್ಮನ್ನು ...ಡಿ ಹೊಗಳುವ ಕಾರ್ಯಕ್ರಮಗಳನ್ನು ಪ್ರಸಾರಮಾಡಲು ...ಮದಿಗಾಲಲ್ಲಿ ನಿಂತಿರುತ್ತಾರೆ. '... ಸೀಕ್ರೆಟ್ಸ್' ಎಂದು ಸರಣಿ ...ಕಾರ್ಯಕ್ರಮ ಪ್ರಸಾರ ಮಾಡಿ ತಮಗೆ ಕ್ಲೀನ್ ಚಿಟ್ ...ನೀಡುತ್ತಾರೆ, ಪ್ರತಿಭಟನಾ ಪ್ರದರ್ಶನಗಳೆಲ್ಲವೂ ...ದುರುದ್ದೇಶಪೂರಿತ ಎಂದು ತೀರ್ಪು ಕೊಟ್ಟುಬಿಡುತ್ತಾರೆ.

...ಆಗ ಸಾಹಿತ್ಯ ಸಮ್ಮೇಳನಗಳನ್ನು ನಡೆಸಿ ಸಾಹಿತಿಗಳನ್ನು ...ರಾಪಿದರನ್ನು ಸನ್ಮಾನ ಮಾಡಿ ಅವರನ್ನು ಚೆನ್ನಾಗಿ ...ನೋಡಿಕೊಳ್ಳಿ. ಸಂಘ ಸಂಸ್ಥೆಗಳಿಗೂ ಹುಂಡಿಯ ಹಣವನ್ನು ...ಷ್ಟಿಷ್ಟು ಹಂಚಿ ಅವರನ್ನು ನಿಮ್ಮ ಹಂಗಿನಲ್ಲಿಟ್ಟುಕೊಳ್ಳಿ. ...ಮಾಕೆಂದರೆ ಈ ಫಲಾನುಭವಿಗಳೆಲ್ಲ ಸಂದರ್ಭ ಬಂದಾಗ ...ನಿಮ್ಮ ಪರ ಬೆಂಬಲಕ್ಕೆ ನಿಲ್ಲಬೇಕಾಗುತ್ತದೆ, ಪತ್ರಿಕಾಗೋಷ್ಠಿ ...ಮಾಡಬೇಕಾಗುತ್ತದೆ. ಪ್ರದರ್ಶನಾ ಮೆರವಣಿಗೆಗಳನ್ನು ...ಮಾಡಬೇಕಾಗುತ್ತದೆ, ನಿಮ್ಮ ವಿರುದ್ಧದ ವರದಿಗಳು ...ಕಟವಾಗದಂತೆ ನೋಡಿಕೊಳ್ಳಬೇಕಾಗುತ್ತದೆ.

ಇಷ್ಟೆಲ್ಲ ಆದ ಮೇಲೆ ನಿಮ್ಮನ್ನು ಕೇಳುವವರಾದರೂ ...ಯಾರು? ನೀವು ವ್ಯವಸ್ಥೆಯನ್ನು ಮೀರಿ ಬೆಳೆದಿರುತ್ತೀರಿ. ...ನೀವೇ ಒಂದು ಮಹಾ ವ್ಯವಸ್ಥೆಯಾಗಿರುತ್ತೀರಿ. ಪಕ್ಷಭೇದ ...ಮರೆತು ರಾಜಕಾರಣಿಗಳು ನಿಮ್ಮ ಪರ ನಿಲ್ಲುತ್ತಾರೆ. ನಿಮ್ಮ ...ವಸ್ಥೆಗೇನಾದರೂ ಸೋಕಾದರೆ ಕರ್ನಾಟಕ ಸರಕಾರದ ...ಮಂತ್ರಿಗಳೇ ಬಂದು 'ನಿಮ್ಮೊಂದಿಗೆ ನಾವಿದ್ದೇವೆ' ಎಂದು ...ಭರವಸೆ ನೀಡುತ್ತಾರೆ. ತಮಗೆ ಇನ್ನೇನು ತಾನೇ ಬೇಕು?

- ಶ್ರೀನಿವಾಸ ಕಾರ್ಕಳ

Registered No.KA/RNP/BGS/2036/2011-13 Posted at : GPO, Bangalore-01. Friday R B P LANKESH, Kannada Weekly Price Rs. 14/- 06-11-2013 RNI No. KARKAN2005/14640



ಸಂತು ಎಂಬ ಡವ್ ರಾಜ

ಕನ್ನಡ ಚಿತ್ರರಂಗದ 'ನಂ.1 ಡವ್ ರಾಜ' ಎಂಬ ಬಿರುದು ಜೋಗಿ ಪ್ರೇಮ್‌ಗೆ ಸಲ್ಲುತ್ತದೆ.

ಎರಡನೆ ಸ್ಥಾನ ಆರ್.ಚಂದ್ರುಗೆ ಸಲ್ಲುತ್ತದೆ. ಚಂದ್ರು ಈಗಾಗಲೇ ಸಮರ್ಥವಾಗಿ ಡಿಟ್ಟೋ ಪ್ರೇಮ್ ಥರಾನೇ ಈ ದವ್ವಾಟ ಪ್ರಯೋಗಿಸಿ ನಿರ್ಮಾಪಕ ಕೂಡಾ ಆದರು.



ಮೂರನೆ ಸ್ಥಾನ ಅಲೆಮಾರಿ ಸಂತೂಗೆ ಸೇರುತ್ತದೆ. ಈ ಸಂತು ಹೇಳಿಕೇಳಿ ಪ್ರೇಮ್ ಶಿಷ್ಯ. ಪ್ರೇಮ್ ಹತ್ತಿರ ಅಸಿಸ್ಟೆಂಟ್ ಡೈರೆಕ್ಟರಾಗಿದ್ದ ಹುಡುಗ.

ಈ ಸಂತುವಿನ ದವ್ವಾಟ 'ಅಲೆಮಾರಿ' ಮೂಲಕ ಶುರುವಾಗಿತ್ತು. ಗುರು ಪ್ರೇಮ್ ನಿರ್ದೇಶಿಸಿದ್ದ 'ಜೋಗಯ್ಯ' ಚಿತ್ರದ ಡಿಸ್ಟ್ರಿಬ್ಯೂಟರ್ ಬಿ.ಕೆ.ಶ್ರೀನಿವಾಸ್ ಅವರನ್ನು ಸಂತು ಹೇಗೋ ಒಪ್ಪಿಸಿ 'ಅಲೆಮಾರಿ'ಗೆ ಹಣ ಹಾಕಿಸಿ ಡೈರೆಕ್ಟರಾದ. ಪ್ರಚಾರಪ್ರಿಯ ಪ್ರೇಮ್ ಥರಾನೇ ಸಂತು ಕೂಡಾ ನಿರ್ಮಾಪಕರಿಂದ ಅಗತ್ಯಕ್ಕಿಂತ ಹೆಚ್ಚು ಹಣ ಖರ್ಚು ಮಾಡಿಸಿ, ಕಡೆಗೆ 'ಅಲೆಮಾರಿ'ಯೆಂಬ ಬಾಲಿಶ ಸಿನಿಮಾವನ್ನು ಥಿಯೇಟರಿಗೆ ತಂದ.

ಯಾವಾಗ 'ಅಲೆಮಾರಿ'ಗೆ ಜನ ಆಶ್ರಯ ನೀಡಲಿಲ್ಲಲೋ ಕಂಗಾಲಾದ ಸಂತುಗೆ ಸಾ.ರಾ.ಗೋವಿಂದು ಅವರ ಮಗನ ಸಿನಿಮಾ ನಿರ್ದೇಶನ ನೀಡಿದರು. ಸಂತು ಆ ಚಿತ್ರಕ್ಕೆ 'ಡವ್' ಎಂಬ ಹೆಸರಿಟ್ಟ. ಆದರೆ ಅದ್ಯಾಕೋ 'ಡವ್' ಸದ್ಯಕ್ಕೆ ಸುದ್ದಿ ಕೇಳಿಬರುತ್ತಿಲ್ಲ.


ಇದಾದನಂತರ ತನ್ನ 'ಅಲೆಮಾರಿ' ಚಿತ್ರಕ್ಕೆ ಸಂಗೀತ ಕೊಟ್ಟಿದ್ದ ಅರ್ಜುನ್ ಜನ್ಯಾರನ್ನು ಒಪ್ಪಿಸಿ ಈಗ 'ಡಾರ್ಲಿಂಗ್' ಅನ್ನುವ ಸಿನಿಮಾಗೆ ನಿರ್ಮಾಪಕರಲ್ಲಿ ಒಬ್ಬರನ್ನಾಗಿ ಮಾಡಲು ಸಂತು ಹೊರಟಿದ್ದಾರೆ. ಅದೇ 'ಅಲೆಮಾರಿ'ಯ ಯೋಗಿ 'ಡಾರ್ಲಿಂಗ್'ಗೂ ಹೀರೋ. ಖುದ್ದು ಸಾ.ರಾ.ಗೋವಿಂದು, ಜಯಮಾಲಾ, ಜಯಂತಿ, ನಾಗಣ್ಣ, ನೆ.ಲ. ನರೇಂದ್ರ ಬಾಬು ಮುಹೂರ್ತಕ್ಕೆ ಬಂದು 'ಡಾರ್ಲಿಂಗ್' ಗೆ ಶುಭಕೋರಿದ್ದಾರೆ. ಸಂತು ಇನ್ನಾದರೂ ಡವ್ ಮಾಡುವುದನ್ನು ಬಿಟ್ಟು ಒಳ್ಳೆ ಸಿನಿಮಾ ಕೊಡಲಿ.

ಹೈದರಾಬಾದಿನಲ್ಲಿ ಜಟ್ಟ



ಈಗ ಬೆಂಗಳೂರಿನ 'ಸಪ್ನಾ' ಥಿಯೇಟರಿನಲ್ಲಿ ಒಳ್ಳೆಯ ಕಲೆಕ್ಷನ್ ಕಾಣುತ್ತಿರುವ 'ಜಟ್ಟ' ಚಿತ್ರ ಸದ್ಯದಲ್ಲೇ ಹೈದರಾಬಾದಿನಲ್ಲಿ ಪ್ರದರ್ಶನವಾಗಲಿದೆ. ಇದಕ್ಕೆ ಮೂಲಕಾರಣ ಸುದೀಪ್. ತಮ್ಮ 'ಮಾಣಿಕ್ಯ' ಚಿತ್ರದ ಚಿತ್ರೀಕರಣದ ಪ್ರಯುಕ್ತ ಬರುವ ಮೂರು ವಾರಗಳ ಕಾಲ ಹೈದರಾಬಾದಿನಲ್ಲೇ ಸುದೀಪ್ ಇರಬೇಕಾಗಿರುವುದರಿಂದ ಹೈದರಾಬಾದಿನ ಥಿಯೇಟರೊಂದರಲ್ಲಿ 'ಜಟ್ಟ' ಪ್ರದರ್ಶನಕ್ಕೆ ಏರ್ಪಾಟು ಮಾಡಿದ್ದಾರಂತೆ. ಈ ನಿಟ್ಟಿನಲ್ಲಿ ನಿರ್ದೇಶಕ ಗಿರಿರಾಜ್ 'ಜಟ್ಟ'ದ ಮಾಸ್ಟರ್ ಡಿವಿಡಿಯನ್ನು ಸುದೀಪ್‌ಗೆ ಕಳಿಸಿಕೊಟ್ಟಿದ್ದಾರೆ. ಬೇರೊಬ್ಬರ ಸಿನಿಮಾ ಬಗ್ಗೆ ಸುದೀಪ್‌ಗೆ ಇರು... ಪ್ರೀತ್ಯಾದರಗಳನ್ನು ಮೆಚ್ಚಿಕೊಳ್ಳಬೇಕಾಗುತ್ತದೆ. ಇದು ಒಳ್ಳೆಯ ಬೆಳವಣಿಗೆ. 'ಜಟ್ಟ' ಮತ್ತೊಮ್ಮೆ ಶುಭಾಷಯ.

ಅಕ್ಕಿ ಹಾರುತಿದೆ ನೋಡಿದಿರಾ?



ಈ ಟಿವಿ' ಚಾನೆಲ್ ಮೂಲಕ ಹೈದರಾಬಾದಿನಲ್ಲಿ ತಮ್ಮ ವೃತ್ತಿಬದುಕನ್ನು ಆರಂಭಿಸಿ, ಕ್ರಮೇಣ ಟಿವಿ 9 ಸೇರಿ ಅಲ್ಲೊಂದಿಷ್ಟು ಕಾಲ ತುಂಬಾ ಆಕ್ಟೀವಾಗಿ ಕೆಲಸ ಮಾಡಿದ ಕಾರ್ಯಕ್ರಮ ನಿರೂಪಕ ಕಂ ವಾರ್ತಾವಾಚಕ ಗೌರೀಶ್ ಅಕ್ಕಿ, ಪಕ್ಷದಿಂದ ಪಕ್ಷಕ್ಕೆ ಹಾರುವ ಪಕ್ಷಾಂತರಿ ರಾಜಕಾರಣಿಗಳ ಹಾಗೆ ಟಿವಿ 9 ನಿಂದ ಸುವರ್ಣ ನ್ಯೂಸ್‌ಗೆ ಹಾರಿ 'ಚಾನೆಲ್ಲಾಂತರಿ' ಎನಿಸಿಕೊಂಡಿದ್ದರು. ಸುವರ್ಣದಲ್ಲಿ ಏನಾಯಿತೋ ಏನೋ ಕೆಲಸ ಬಿಟ್ಟರು. ಕೆಲಸ ಬಿಟ್ಟನಂತರ ಗೌರೀಶ್ ಅಕ್ಕಿ ಬೇರೆ ಯಾವುದೋ ಚಾನೆಲ್ಲಿನ ಬಾಗಿಲು ತಟ್ಟುತ್ತಾರೆಂದು ಮೀಡಿಯಾ ಜನ ಭಾವಿಸಿದ್ದರೆ ಈ ಅಕ್ಕಿ ಏಕ್ದಂ ತಮಿಳುನಾಡಿನ ಕಾರೈಕುಡಿಗೆ ಹೋಗಿಬಿಟ್ಟಿದ್ದಾರೆ. ಕಾರೈಕುಡಿಯಲ್ಲಿ ಇವರಿಗೇನು ಕೆಲಸ? ಎಂಬ ಪ್ರಶ್ನೆಗೆ ಸಿಕ್ಕಿರುವ ಉತ್ತರವೆಂದರೆ ಗೌರೀಶ್ ಅಕ್ಕಿ ಈಗ ನಟ. ಟೈಟಲ್‌ನಿಂದಲೇ ವಿವಾದ ಎಬ್ಬಿಸಿದ 'ಬಸವಣ್ಣ' ಚಿತ್ರದಲ್ಲಿ ಉಪ್ಪಿಯ ಸಹೋದರನ ಪಾತ್ರ ಮಾಡುವ ಮೂಲಕ ಇವರೀಗ ನಟನೆಗೆ ಇಳಿದಿದ್ದಾರೆ.

ಗೌರೀಶ್ ಅಕ್ಕಿಗೆ ಸಿನಿಮಾ ಹುಚ್ಚು ಮೊದಲಿಂದಲೂ ಇತ್ತು. ಅವರು ಟಿವಿ ಚಾನೆಲ್ಲಿನಲ್ಲಿ ಕೆಲಸ ಮಾಡುತ್ತಿದ್ದಾಗಲೂ ... ಸಿನಿಮಾ ಸಂಬಂಧಿ ಕಾರ್ಯಕ್ರಮಗಳನ್ನೇ ಹೆಚ್ಚಾಗಿ ಮಾಡುತ್ತಿದ್ದರು. ಸಿನಿಮಾ ತಂತ್ರಜ್ಞರು, ನಟನಟಿಯರ ಒಡನಾ... ಸದಾ ಇಟ್ಟುಕೊಂಡವರು. ಈ ಸಿನಿಮಾ ಹುಚ್ಚು ಅವರನ್ನು ಎಲ್ಲಿವರೆಗೆ ಕರೆದೊಯ್ದಿತೆಂದರೆ ಒಮ್ಮೆ ತಾವೇ ಒಂದ... ಸಿನಿಮಾವನ್ನು ಸ್ವತಂತ್ರವಾಗಿ ನಿರ್ದೇಶಿಸಬೇಕು ಅನ್ನುವವರೆಗೆ. ಆ ನಿಟ್ಟಿನಲ್ಲಿ ಕೆಲವು ನಿರ್ಮಾಪಕರನ್ನೂ ಸಂಪರ್ಕಿ... ಕಥೆ ಹೇಳಿದ್ದರು. ಅಕ್ಕಿಯವರ ಕಥೆ ಮೆಚ್ಚಿದ ಎಸ್.ವಿ.ಬಾಬು "ಮೀರೆ ಡೈರೆಕ್ಷನ್ ಚೆಯ್ಯಂಡಿ (ನೀವೇ ನಿರ್ದೇಶ... ಮಾಡಿ)" ಎಂತಲೂ ಹೇಳಿದ್ದರು. ತಾಂತ್ರಿಕವಾಗಿ ಅಷ್ಟಾಗಿ ಪಳಗಿರದಿದ್ದ ಗೌರೀಶ್ "ಸ್ವಲ್ಪ ದಿನ ಟೈಮ್ ಕೊ... ಸಾರ್... ಆಲೋಚಿಸ್ತಾನು" ಎಂದು ಆಲೋಚಿಸಲು ಮುಂದಾದರು. ಆ ಪ್ರಯತ್ನದಲ್ಲಿ ಸೂರಿಯ 'ಜಂಗ್ಲಿ' ಸೆಟ್... ಹೋಗಿ 'ಡೈರೆಕ್ಷನ್ ಹೇಗೆ ಮಾಡೋದು?' ಅನ್ನೋದನ್ನು ಗಮನಿಸುತ್ತಿದ್ದರು. ಗುರುಪ್ರಸಾದ್ ಪುಸ್ತಕಕ್ಕೆ ಬೆನ್ನು... ಬರೆದರು. ಸಿನಿಗೆಳೆಯರೊಂದಿಗೆ ಚರ್ಚಿಸುತ್ತಿದ್ದರು. ಸ್ಕ್ರಿಪ್ಟ್ ಮೇಕಿಂಗ್, ಪೋಸ್ಟ್ ಪ್ರೊಡಕ್ಷನ್ ವರ್ಕ್ ಬಗ್ಗೆಯೆಲ್ಲ... ಸಮಾಲೋಚಿಸುತ್ತಿದ್ದರು.

ಕೊನೆಗೊಂದು ದಿನ, ಅನಿಲ್ ಮೆಣಸಿನಕಾಯಿ, ಉಮೇಶ್ ಬಣಕಾರ್ ಪ್ರೊಡ್ಯೂಸ್ ಮಾಡುವಂತೆಯೂ, ಅ... ಆಕ್ಷನ್ ಕಟ್ ಮಾಡುವಂತೆಯೂ ಒಂದು ಪ್ಲಾನ್ ಸಿದ್ಧವಾಯಿತು. ಚಿತ್ರಸಾಹಿತಿಯೊಬ್ಬರ ಕೈಲಿ ಸ್ಕ್ರಿಪ್ಟ್ ಕೂಡ... ಬರೆಸಿದರು. ಆ ಚಿತ್ರಕ್ಕೆ ಚೇತನ್ ಚಂದ್ರ ಹೀರೋ ಆಗಬೇಕಿತ್ತು, ಆ ಟೈಮಿಗೆ ಸರಿಯಾಗಿ ಅನಿಲ್ ಮೆಣಸಿನಕಾಯಿ... ಕಳೆದ ಚುನಾವಣೆಯಲ್ಲಿ ಗದಗ ವಿಧಾನಸಭಾ ಕ್ಷೇತ್ರದಿಂದ ಬಿ.ಎಸ್.ಆರ್ ಪಕ್ಷದಿಂದ ಸ್ಪರ್ಧಿಸಿ ಸೋತರು. ಸಿನಿಮ... ಕತೆ ಅಲ್ಲಿಗೆ ನಿಂತುಹೋಯಿತು.

ಇಂಥ ಗೌರೀಶ್ ಅಕ್ಕಿ ಇದ್ದೊಂದು ಕೆಲಸ ಬಿಟ್ಟು ಈಗ ನಟರಾಗುತ್ತಿದ್ದಾರೆ. ಅವರಿಗೆ ಶುಭವಾಗಲಿ.



ನವೆಂಬರ್ 1ಕ್ಕೆ 'ಎಲೆಕ್ಷನ್'



ಒಂದು ಮೂಲದ ಪ್ರಕಾರ ನವೆಂಬರ್ ಒಂದರಂದು ಮತ್ತೆ ಎಲೆಕ್ಷನ್.

ಹೌದು, ರಾಮು ಬ್ಯಾನರಿನಡಿ ಮಾಲಾಶ್ರೀ ನಟಿಸಿದ್ದ 'ಎಲೆಕ್ಷನ್' ಚಿತ್ರ ಕಳೆದ ವಿಧಾನಸಭಾ ಚುನಾವಣೆಗೂ ಮೊದಲೇ ಬಿಡುಗಡೆಯಾಗಬೇಕಿತ್ತು, ಆದರೆ ಚಿತ್ರದಲ್ಲಿ ಕೆಲವು ಆಕ್ಷೇಪಣೀಯ ದೃಶ್ಯಗಳಿದ್ದು, ಕೆಲವು ಪಾತ್ರಗಳು ಇವತ್ತಿನ ಕೆಲವು ರಾಜಕಾರಣಿಗಳಿಗೆ ಹೋಲಿಕೆಯಾಗುತ್ತವೆಂದು ತಡೆಹಿಡಿಯಲಾಗಿತ್ತು, ಎಲೆಕ್ಷನ್ ಬಿಸಿಯಲ್ಲೇ ಬಿಡುಗಡೆಯಾಗಿ ಒಂದಿಷ್ಟು ಕಲೆಕ್ಷನ್ ಕನಸು ಕಂಡಿದ್ದ 'ಎಲೆಕ್ಷನ್' ಸಿನಿಮಾಗೆ ಈ ತಡೆ ದೊಡ್ಡ ತಲೆನೋವಾಯಿತು. ಅನಂತರ ಈ ಚಿತ್ರ ಬಿಡುಗಡೆಯಾದರೂ ನಿರೀಕ್ಷಿತ ಮಟ್ಟದಲ್ಲಿ ಜನ ಥಿಯೇಟರು ಕಡೆ ಬರಲಿಲ್ಲ, ದೊಡ್ಡ ಮೊತ್ತದ ಹಣ ಸುರಿದಿದ್ದ ನಿರ್ಮಾಪಕ ರಾಮು ಆಘಾತಕ್ಕೊಳಗಾದರು.

ಚಿತ್ರಕ್ಕೆ ಒಳ್ಳೆ ರೆಸ್ಪಾನ್ಸ್ ಸಿಕ್ಕದಿದ್ದರೂ ತಮ್ಮ 'ಎಲೆಕ್ಷನ್' ಬಗ್ಗೆ ವಿಶ್ವಾಸ ಕಳೆದುಕೊಳ್ಳದ ರಾಮು ಅದನ್ನು ಮತ್ತೆ ಬಿಡುಗಡೆ ಮಾಡಲು ಸಿದ್ಧರಾಗುತ್ತಿದ್ದಾರೆ. ಅದಕ್ಕೆ ಬೇಕಾದ ಎಲ್ಲಾ ರೀತಿಯ ವೇದಿಕೆ ಸಜ್ಜುಗೊಳಿಸಿದ್ದಾರೆ. ಓಂ ಪ್ರಕಾಶ್ ರಾವ್ ನಿರ್ದೇಶಿಸಿರುವ, ಹಂಸಲೇಖಾ ಹಾಡುಗಳಿರುವ 'ಎಲೆಕ್ಷನ್' ಈ ಬಾರಿಯಾದರೂ ದುಡ್ಡು ದುಡಿಯಲಿ. ರಾಮು ಉಳಿಯಲಿ.

ಮತ್ತೆ ಮತ್ತೆ ಅತ್ತೆ-ಸೊಸೆ

ಕವಿತಾ ಲಂಕೇಶ್ ಹಾಗೂ ಬಿ.ಸುರೇಶ್ ಅವರ ಸಹಾಯಕರಾಗಿ ಕೆಲಸ ಮಾಡಿದ್ದ ಗಣೇಶ್ ಶಾಸ್ತ್ರಿ ಎಂ... ಹುಡುಗ ಇದೀಗ ಜೀ ಕನ್ನಡಕ್ಕಾಗಿ 'ಬಲು ಅಪರೂಪ ನಂ ಜೋಡಿ' ಎಂಬ ಮನರಂಜನಾ ಪ್ರಧಾನ ಧಾರಾವಾಹಿಯೊಂದ... ನಿರ್ದೇಶಿಸುತ್ತಿದ್ದಾರೆ. ಅಕ್ಟೋಬರ್ 28ರಿಂದ ಸಂಜೆ 6 ಗಂಟೆಗೆ ಈ ಧಾರಾವಾಹಿ ಪ್ರಸಾರವಾಗಲಿದೆ. ಅತ್ತೆ-ಸೊ... ನಡುವಿನ ಎಂದಿನ ಕಿತಾಪತಿಯ ಕಥಾವಸ್ತುವಿರುವ ಈ ಧಾರಾವಾಹಿ ಬೇರೆಯ ಬಗೆಯದ್ದೇ ಬದುಕಿನ ಚಿತ್ರಣವ... ಅನಾವರಣಗೊಳಿಸುತ್ತದೆ ಅನ್ನೋದು ನಿರ್ದೇಶಕರ ಅಭಿಪ್ರಾಯ.

ಈ ಧಾರಾವಾಹಿಯಲ್ಲಿ ಚಂದ್ರಕಲಾ ಒಳ್ಳೆಯ ಅತ್ತೆಯ ಪಾತ್ರವನ್ನು ನಿಭಾಯಿಸುತ್ತಿದ್ದಾರೆ, ದಿವ್ಯ ಜಗಳಗಂ... ಸೊಸೆಯ ಪಾತ್ರವನ್ನು ನಿರ್ವಹಿಸುತ್ತಿದ್ದಾರೆ. ಅಜ್ಜನಾಗಿ ಧರ್ಮೇಂದ್ರ ಅರಸ್ ಹಾಗೂ ಪ್ರಾಮಾಣಿಕ ಮೊಮ್ಮಗ... ಹರಿಣಿ ಕಾಣಿಸಿಕೊಳ್ಳಲಿದ್ದಾರೆ.

'ಬಲು ಅಪರೂಪ ನಂ ಜೋಡಿ'ಗೆ ಕಾಸು ಸುರಿಯುತ್ತಿರುವ ನಿರ್ಮಾಪಕ ಯೇಸುದಾಸ್ ಅವರಿಗೆ ... ತುಂಬಾ ಹಿಡಿಸಿರುವುದರ ಜೊತೆಗೆ, ತಮ್ಮದು ಉತ್ತಮ ತಂಡವೆಂಬ ಭರವಸೆಯಿದೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore-4, Phone : 26676427, Fax : 26604536, E-mail : lankesh70@rediffmail.com